22

# ಅಂತರಂಗ

S. GOPAL NAYAK
NEWS-AGENT UDIPI. S.K.



# 1939 ನೇ ಇಸವಿಯ ಡೈರಿಗಳು:

Published by

**P. A. PAI BROTHERS,**
**UDIPI.**

### ದರಗಳು:

| | | | | |
|---|---|---|---|---|
| ಕರ್ನಾಟಕ ದೊಡ್ಡದು | | ೦ | ೯ | ೦ |
| ಡಿ | ಮುಚ್ಚಳದ್ದು | ೦ | ೧೧ | ೦ |
| ಡಿ | ಸಣ್ಣದು | ೦ | ೫ | ೦ |
| ಡಿ | ಮುಚ್ಚಳದ್ದು | ೦ | ೬ | ೦ |
| ತುಳುನಾಡ್ | | ೦ | ೪ | ೦ |

Printed at

**MANIPAL**
**POWER PRESS,**
**MANIPAL,**
**South Kanara.**

### ನಮ್ಮ ಪ್ರಧಾನ ಸ್ಟಾಕಿಸ್ಟರು:

| | |
|---|---|
| ಸ್ಟೇಶನರಿ ಮಾರ್ಟ್ | **ಅಂಕೋಲಾ** |
| ಎಂ. ಎಂ. ಶ್ಯಾನುಭಾಗ | **ಕಾರವಾರ** |
| ವಿ. ವಿ. ಶ್ಯಾನುಭಾಗ | **ಹೊನ್ನಾವರ** |
| ಕಲ್ಯಾಣಪುರಕಾರ್ ಬ್ರದರ್ಸ್ | ,, |
| ಟಿ. ಗೋಪಾಲ ಪೈ | **ಕುಂದಾಪುರ** |
| ಎಂ. ಎಸ್. ಪಡಿಯಾರ್ | ,, |
| ಸಚ್ಚಿದಾನಂದ ಸ್ಟೋರ್ಸ್ | ,, |
| ವಿಟ್ಠಲ ಪೈ ಎಂಡ್ ಸನ್ಸ್ | **ಬ್ರಹ್ಮಾವರ** |
| ನವಭಾರತ ಬುಕ್ ಡಿಪೊ | **ಉಡುಪಿ** |
| ಪಿ. ಎ. ಪೈ ಬ್ರದರ್ಸ್ | ,, |
| ಶ್ರೀ ಭಾರತವಸ್ತು ಮಂದಿರ | ,, |
| ಪಾವಂಜೆ ಗುರುರಾವ್ | ,, |
| ತುಳುನಾಡ್ ಪ್ರೆಸ್ | ,, |
| ವಿ. ವಿ. ಶೆಣೈ | **ಕಾರ್ಕಳ** |
| ಗೋಪಾಲಕೃಷ್ಣ ಶ್ಯಾನುಭಾಗ | ,, |
| ಸೀತಾರಾಮಯ್ಯ ಎಂಡ್ ಸನ್ಸ್ | **ಮೂಲ್ಕಿ** |
| ಬಾಸೆಲ್ ಮಿಶನ್ ಬುಕ್‌ಡಿಪೋ | **ಮಂಗಳೂರು** |
| ಯು. ಆರ್. ಶೆಣೈ ಎಂಡ್ ಸನ್ಸ್ | ,, |
| ಸ್ಕೂಲ್ ಬುಕ್ ಕಂಪೆನಿ | ,, |
| ಬೆಳ್ಳಾರೆ ನರಸಿಂಹ ಮಲ್ಯ | **ಪುತ್ತೂರು** |
| ಭಕ್ತ ಬ್ರದರ್ಸ್ | **ಕಾಸರಗೋಡು** |

☞ **ವ್ಯಾಪಾರಿಗಳಿಗೆ ಧಾರಾಳ ಕಮಿಷನ್**

● **ಹಿಂದೆ ಪಡಕೊಳ್ಳುವ ಶರ್ತವಿಲ್ಲ.**

Write for further Particulars to:

**P. A. PAI BROTHERS**
**UDIPI.**

*OR*

**SUPPLY AGENCY LTD.,**
**UDIPI.**


This Page is available for Advertisement. Rate Rs. 15/- [per insertion.]

# ANTARANGA

**KANARESE WEEKLY MAGAZINE**

PROPRIETORS:
SUPPLY AGENCY LIMITED, UDIPI.
PRINTED AT THE
MANIPAL POWER PRESS, UDIPI.

# ಅಂತರಂಗ

ಕನ್ನಡ ವಾರ ಪತ್ರಿಕೆ - ಉಡುಪಿ

ವರ್ಷ ೧ ] ✠ [ ಸಂಚಿಕೆ ೨೨

ಆದಿತ್ಯವಾರ, ದಶಂಬರ ೧೧, -'೩೮



**ಎಸ್. ಯು. ಪಣಿಯಾಡಿ.**
(Editor in Chief.)

**ಕೆ. ಹೈದರ್.**
(Managing Editor.)

*Associate Editors:*

ಎಸ್. ಎಸ್. ಕಾರಂತ.
ಪಿ. ಎಲ್. ಅಡಿಗ.
ಪಿ. ವಿ. ಆಚಾರ್ಯ.
ಎಂ. ವಿ. ಹೆಗ್ಡೆ.

*Members of the Advisory Board*

ಶ್ರೀ. ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
,, ಕೊರಡ್ಕಲ್ ಶ್ರೀನಿವಾಸರಾವ್, ಗ್ರಂಥಕರ್ತ.
,, ಆರ್. ಆರ್. ಕುಂಜೂರು.
,, ಪಿ. ವಿ. ಉಪಾಧ್ಯಾಯ, ಬಿ. ಎ., ಎಲ್. ಎಲ್. ಬಿ.
,, ಆರ್. ಎಸ್. ಶೆಣೈ, ಸಂಪಾದಕ, ವರ್ತಕ ಧುರೀಣ.
ಶ್ರೀ. ಕೆ. ಎಚ್. ಶೆಟ್ಟಿ, ಮೆನೇಜರ್, ನವಯುಗ.
ಶ್ರೀಮತಿ. ಪಿ. ಭಾರತೀ ಬಾಯಿ.
ಶ್ರೀ. ಯು. ವೆಂಕಟರಮಣಾಚಾರ್ಯ, ಮೆನೇಜರ್, ಶ್ರೀಕೃಷ್ಣಸಂದೇಶ.
,, ಉಪೇಂದ್ರ ಅನಂತ ಪೈ, ಮಾಲಕ, ಚಿತ್ರಕಲಾ.



**ವಾರ್ಷಿಕ ಚಂದಾ: ಮೂರು ರೂಪಾಯಿ.**
**ಬಿಡಿ ಸಂಚಿಕೆ: ಒಂದಾಣೆ**

**ವಿ. ಪಿ. ಕ್ರಮವಿಲ್ಲ. ಹಣವನ್ನು ಮುಂಗಡವಾಗಿ ಕಳುಹಬೇಕು.**



**Advertisement Tariff:**

| | | |
|---|---|---|
| Full Page | 10 0 0 | Per inserstion. |
| Half. ,, | 5 0 0 | ,, |
| Quarter ,, | 3 0 0 | ,, |
| 1/8 Page | 2 0 0 | ,, |
| Column Inch | 1 0 0 | ,, |

*Special Rates for contract advertisements will be quoted on application.*

**Advertisers Please Note:**

- All advertisements are payable in advance.
- Any change in the advertisement must be intimated before one week.
- Blocks if any will be returned at the cost of the advertiser.
- The management reserves the right to reject objectionable advertisements.

## Antaranga SALES Agencies in

| Bombay Karnataka | Mysore State | South Kanara |
|---|---|---|
| 1. Ankola | 1. Agumbe | 1. Brahmavar |
| 2. Bagalkote | 2. Bhadravati | 2. Coondapoor |
| 3. Belgaum | 3. Bangalore City | 3. Kalyanpur |
| 4. Bijapur | 4. Chickamaglur | 4. Karkala |
| 5. Bombay | 5. Chitaldurg | 5. Kasargod |
| 6. Dharwar | 6. Hasan | 6. Kaup |
| 7. Gokak | 7. Holenarasimpur | 7. Kinnigoly |
| 8. Haveri | 8. Kadur | 8. Kunjal |
| 9. Honavar | 9. Mandya | 9. Mangalore |
| 10. Hubli | 10. Mysore | 10. Mudabidre |
| 11. Kumta | 11. Sagar | 11. Moolky |
| 12. Siddapur | 12. Sakaleshpur | 12. Udipi |
| 13. Sirsi | 13. Shimoga | 13. Vittal |
| | 14. Tarikere | |
| | 15. Tumkur | |

SRI. G. B. KULKARNI, News Agent, BIJAPUR, is exclusively authorised to sell ANTARANGA on his own account at BIJAPUR with effect from 1st week of December 1938.

*Circulation Manager,*
ANTARANGA
UDIPI.

FOR SALE.

10 Shares of the POPULAR INSURANCE COMPANY Limited, Mangalore (Rs. 10/- paid up) 10 Shares (Rs. 15 paid up) of KARNATAKA BANK LTD. are for sale. Please apply to:

*Brokerage Department*
SUPPLY AGENCY LTD
UDIPI.

## Antaranga CHIEF Agents:

| | |
|---|---|
| I For Belgaum, Bijapur Dharwar & Bellary Districts. | **Sri V. N. Sohoni,** Shivaji Road, Dharwar. |
| II For Mysore City & Suburbs. | **The General Agency,** Kannegowdona Koppal Extn. Mysore. |
| III For Bangalore City & Suburbs. | **Sri P. A. Upadhyaya,** 45, A. S. Street, Bangalore City. |
| IV For Shimoga Town & Suburbs. | **Messrs Venkateshaya & Brothers,** Book Sellers, Shimoga. |

***Antaranga Agency Organisers for Mysore State:***

**Messrs Venkateshayya & Brothers,**
*Book-Sellers,*
**Shimoga.**

***Wanted Agents in unrepresented areas.***

# ಅಂತರಂಗ

### ಭಭಾವಲ್ಯಾವಂತಕ: ಸಂನಿವಿಷ್ಟ!

ಆಶ್ರಿತರಾಜ್ಯಗಳಿಗೇನೋ ಶನಿ ವಕ್ರವಾದಂತೆ ತೋರುತ್ತದೆ. ಮೊದಲು ಮೈಸೂರಾಯಿತು, ಬಳಿಕ ತಿರ್ವಾಂಕೂರು ಮತ್ತೆ ರಾಜಕೋಟೆ ಇತ್ಯಾದಿ ಚಿಕ್ಕ ಸಂಸ್ಥಾನಗಳು, ಕೊನೆಗೆ ಈಗ ಹೈದರಾಬಾದಿಗೆ ಬಂದಿದೆ- ಜವಾಬುದಾರಿ ಸರಕಾರದ ಚಳವಳ. ಮೈಸೂರು ಮಹಾರಾಜರು ಸಂಗ್ರಾಮ ಸಂಧಾನವೆರಡನ್ನೂ ಬೇಗನೇ ಮುಗಿಸಿ ಅಶಾಂತಿಯನ್ನು ತಡೆದರು. ತಿರ್ವಾಂಕೂರು ದಮನ ನೀತಿಯನ್ನೇ ಹಿಡಿದುಕೊಂಡು ಹೇಗಾದರೂ ದಿನ ದೂಡುತ್ತಿದೆ. ಹೈದರಾಬಾದಿನ ನಿಜಾಮರು ಮಾತ್ರ ಕಂಗಾಲಾಗಿ ಬ್ರಿಟಿಷ್ ಸರಕಾರಕ್ಕೆ ಮೊರೆಯಿಟ್ಟಿದ್ದಾರೆ— 'ನರೇಶರ ರಕ್ಷಣೆಗಾಗಿ ಒಂದು ಕಾನೂನನ್ನಾದರೂ ಮಾಡಿರಿ,' ಎಂದು. ನಿಜಾಮರು ರಾಜಕೀಯದಲ್ಲಿ ಸಾಕಷ್ಟು ಪಾರಂಗತರಲ್ಲದಿರಬಹುದು!

೦ ೦ ೦

### ರಾಜಕೋಟೆ ಸಂಧಾನ ಯತ್ನ ಫಲಿಸಲಿಲ್ಲ.

ಗುಜರಾಥಿನ ರಾಜಕೋಟ ಸಂಸ್ಥಾನದಲ್ಲಿ ಸತ್ಯಾಗ್ರಹ ಯುದ್ಧವು ಒಂದೇ ಸವನೆ ನಡೆಯುತ್ತಿದೆಯಷ್ಟೆ. ಸರದಾರ್ ಪಟೇಲರು ಸ್ವತಃ ಧುರೀಣತ್ವ ವಹಿಸಿ ಪ್ರಜೆಗಳಿಗೆ ಈ ಯುದ್ಧದಲ್ಲಿ ನೆರವಾಗಿರುವರು. ಈ ಕುರಿತು ಸಂಧಿ ಪ್ರಸ್ತಾಪ ನಡೆಸುವರೆ ಶ್ರೀ ಅನಂತರಾಯಿ ಪಟ್ಟಾಣಿ

## ಸಿಹಿ - ಕಹಿ



ಸೇಟ್ ಜಮ್ನಾಲಾಲ್ ಬಜಾಜರು.

ಹಲವು ವರ್ಷಗಳಿಂದ ಕಾಂಗ್ರೆಸ್ ಖಜಾನ್ಚಿಯವರಾಗಿದ್ದ ಇವರು ತನ್ನ ಸ್ಥಾನಕ್ಕೆ ರಾಜೀನಾಮೆ ಕೊಡುವರೆಂಬ ವದಂತಿಯಿದೆ.

ಯವರ ಮಧ್ಯಸ್ಥಿಕೆಯಿಂದ ರಾಜಕೋಟದ ಸದ್ಯದ ದಿವಾನರಾದ ಸರ್. ಪೇಟ್ರಿಕ್ ಕೇಡ್ರೆಲ್‌ರವರೂ ಸರದಾರ್ ಪಟೇಲರೂ ಬೊಂಬಾಯಿಯ ಸರ್. ಚುನಿಲಾಲ್ ಮೆಹಥಾರವರ ನಿವಾಸದಲ್ಲಿ ಒಟ್ಟುಗೂಡಿ ಚರ್ಚಿಸಿದರು. ಮಹಾತ್ಮಾಗಾಂಧಿಯವರು ತಯಾರಿಸಿದ್ದ ಸಂಧಿ ಶರ್ತಗಳಲ್ಲಿ ಮುಖ್ಯವಾಗಿ 'ರಾಜಕೋಟದ ಪ್ರಜೆಗಳಿಗೆ ಜವಾಬಾರಿ ರಾಜ್ಯಾಡಳಿತ ಪಡೆಯುವ ಹಕ್ಕನ್ನೊಪ್ಪಿಕೊಳ್ಳುವ ಶರ್ತಕ್ಕೆ ದಿವಾನರು ಒಪ್ಪಿಗೆ ಕೊಡಲಿಲ್ಲ. ಹೀಗಾಗಿ ಸಂಧಿ ಯತ್ನವು ಫಲಿಸದೆ ದಿವಾನರು ರಾಜಕೋಟಕ್ಕೆ ಹೊರಟು ಹೋದರು. ತಮ್ಮ ಅಧಿಕಾರಕ್ಕೆ ತೊಂದರೆ ಬರುವ ಶರ್ತಗಳಲ್ಲಿ ಎಷ್ಟು ನ್ಯಾಯವಿದ್ದರೂ ಆಶ್ರಿತ ರಾಜರಿಗೆ ಅವು ಕಹಿಯಾಗುವದಂತೂ ಖಂಡಿತ.

೦ ೦ ೦

### ಬ್ರಿಟಿಷರ ಚಾಣಕ್ಯ ನೀತಿ

'ವಿಭಾಗಿಸಿ ಆಳು'ವ ನೀತಿಯ ಗುರುಗಳೇ ಬ್ರಿಟಿಷರು. ಪೆಲೆಸ್ತೈನಿನ ಅರಬರ ದಂಗೆಯನ್ನಣಗಿಸಲು ಪೆಲೆಸ್ತೈನನ್ನೇ ವಿಭಾಗಿಸಿದರಾಗಬಹುದೇ ಎಂದೊಮ್ಮೆ ನೋಡಿದರು. ಅದರಿಂದ ಗಲಭೆ ಮತ್ತಷ್ಟು ಹೆಚ್ಚಿತು. ಈಗ ಪೆಲಸ್ತೈನನ್ನಲ್ಲ— ಅರಬರನ್ನೇ ವಿಭಾಗಿಸಿ ಹಾಕುವ ಹೊಸ ಹಂಚಿಕೆ ಹೂಡಿರುವರು. ಬ್ರಿಟಿಷರ ಬಾಂಬುಗಳೆಷ್ಟೋ ಗಡಿನಾಡಿನಂತಹ ಸ್ಥಳಗಳಲ್ಲಿ ಸಪ್ಪೆಯಾಗಿ ಹೋದುದಿದೆ. ಅದರೆ ಅವರ ವಿಭಾಗಿಸುವ ಶಸ್ತ್ರವೆಲ್ಲಿಯಾ

ಠರೂ ನಿಷ್ಫಲವಾದ ದಾಖಲೆಯೇ ಇಲ್ಲ. ಪೆಲೆಸ್ತೈನಿನಲ್ಲಿ ಸುಮಾರು ೭೦ ಸಾವಿರ ಅರಬರ ಪ್ರತಿನಿಧಿಗಳೂ ಕೆಲವು ಅರಬಿ ಮುಖಂಡರೂ ಸಭೆ ಸೇರಿ ಬ್ರಿಟಿಷ್ ಧೋರಣೆಯನ್ನು ಸಮರ್ಥಿಸಿರುವರು. ದಂಗೆಯ ನಾಯಕ ಗ್ರೇಂಡ್ ಮುಫ್ತಿಯವರನ್ನು ತೀವ್ರವಾಗಿ ಖಂಡಿಸಿ ಅರಬರ ಸಾವಿಗೆ ಮುಫ್ತಿಯವರೇ ಕಾರಣರೆಂದೂ, ಮುಫ್ತಿಯವರನ್ನು ಹೊರಗಟ್ಟಿದಲ್ಲಿ ಪೆಲೆಸ್ತೈನಿನಲ್ಲಿ ಶಾಂತಿ ಸ್ಥಾಪಿಸಲ್ಪಡುವದೆಂದೂ, ಬ್ರಿಟಿಷ್ ಸೈನಿಕರು ಮಾದರಿಯಾಗಬಲ್ಲ ರೀತಿ ನಡಕೊಂಡಿರುವರೆಂದೂ ಅಭಿಪ್ರಾಯ ಸೂಚಿಸಿರುವರು. ವಿರೋಧಿಗಳು ತಮ್ಮೊಳಗೆ ಹೋರಾಡುವದನ್ನು ನೋಡುವದರಲ್ಲಿರುವಷ್ಟು ಸಿಹಿ, ವೈರಿಗಳ ಮೇಲೇರಿ ಹೋಗುವದರಲ್ಲಿ ಉಂಟೇನು?

## ಭಾಷೆಗಳ ಮಿಶ್ರಣ

ನಮ್ಮ ಮದ್ರಾಸ್ ಎಸೆಂಬ್ಲಿಯ ಚರ್ಚೆಗಳಲ್ಲಿ ಚರ್ಚೆಯ ವಿಷಯಕ್ಕಿಂತಲೂ ಭಾಷೆಗೆ ಒಮ್ಮೊಮ್ಮೆ ಹೆಚ್ಚಿನ ಪ್ರಾಧಾನ್ಯತೆ ಬಂದುಬಿಡುವದುಂಟು. ಈ ಸಲದ ಅಧಿವೇಶನದಲ್ಲಿ ಮುಖ್ಯ ಮಂತ್ರಿಗಳು ಪ್ರಶ್ನೆಯೊಂದನ್ನು ಉತ್ತರಿಸುವಾಗ 'ಉತ್ತರ ತೆಲುಗಿನಲ್ಲಿ ಬರಲಿ' ಎಂದು ತೆಲುಗು ಪ್ರತಿನಿಧಿಗಳೊಬ್ಬರ ಸೂಚನೆ. ಮುಖ್ಯ ಮಂತ್ರಿಗಳು ತೆಲುಗಿನಲ್ಲಿಯೇ ತೆಲುಗು ನಗುನಗುತ್ತಾ ಹೇಳಿದರು 'ನೀವು ಎಸೆಂಬ್ಲಿ ಭವನದಿಂದ ಹೊರಗೆ ಬಂದಲ್ಲಿ ಉತ್ತರವನ್ನೆಲ್ಲಾ ವಿವರಿಸಿ ಹೇಳುವೆನು' ಕೊನೆಗೆ 'ನನಗೆ ಎಲ್ಲಾ ಉತ್ತರಗಳನ್ನೂ ತೆಲುಗಿಗೆ ಭಾಷಾಂತರಿಸಿ ಹೇಳಲು ಸಾಧ್ಯವಿಲ್ಲ ಸ್ವಾಮಿ' ಎಂದು ಅಧ್ಯಕ್ಷರೊಡನೆ ಬಿನ್ನವಿಸಿಕೊಂಡರು. ಈಗ ಎಸೆಂಬ್ಲಿ ಸಭೆಗೆ ಭಾಷಾಂತರಕಾರರನ್ನು ನೇಮಿಸಿಕೊಳ್ಳುವ ಆಲೋಚನೆಯಿದೆಯಂತೆ. 'ಮಾತಿನ ಅರ್ಥ ಯಾರಿಗೇ ಅನುಕೂಲವಾಗಿರಲಿ; ಮಾತಾದರೂ ನಮ್ಮ ಭಾಷೆಯಲ್ಲಿ ಬರಲಿ' ಎಂದು ಕೆಲವು ಮೆಂಬರರ ಆಶೆ!

○ ○ ○

## ಸರ್ ಜೇಮ್ಸ್ ಗ್ರಿಗ್ಗರ ನಿವೃತ್ತಿ.

ಕೇಂದ್ರ ಸರಕಾರದ ಆರ್ಥಿಕ ಮಂತ್ರಿಗಳಾದ ಸರ್. ಜೇಮ್ಸ್ ಗ್ರಿಗ್ಗರು ತನ್ನ ಕೆಲಸದಿಂದ ನಿವೃತ್ತಿ ಹೊಂದಿ ಬರುವ ಎಪ್ರಿಲಿನಲ್ಲಿ ಯುರೋಪಿಗೆ ಹೊರಟುಹೋಗುವರೆಂದು ನಿಶ್ಚಯವಾಗಿ ತಿಳಿದು ಬರುತ್ತದೆ. ಸರ್. ಗ್ರಿಗ್ಗರು ನಾಲ್ಕು ವಾರ್ಷಿಕ ಬಜೆಟುಗಳನ್ನು ಕೇಂದ್ರ ಎಸೆಂಬ್ಲಿಯ ಮುಂದಿಟ್ಟು ಕಾಂಗ್ರೆಸ್ ಪಕ್ಷೀಯರಿಂದ ಹಲವು ವಿಧದ ಟೀಕೆಗಳನ್ನು ಕೇಳಿದವರು. ಅವರ ಬಜೆಟಿನಲ್ಲಿ ಹಿಂದುಸ್ಥಾನವನ್ನು ತೃಪ್ತಿಪಡಿಸುವ ಅಂಶಗಳಿರಲಿಲ್ಲವಾದರೂ, ಆರ್ಥಿಕ ಮಂತ್ರಿಗಳ ನೈಪುಣ್ಯವೇನೋ ಅದರಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಬಜೆಟುಗಳ ಲಾಭನಷ್ಟಗಳಿಗೆ ಹಿಂದುಸ್ಥಾನದ ದುರವಸ್ಥೆಯೂ, ಸರಕಾರದ ಮನೋವೃತ್ತಿಯೂ ಕಾರಣವಾಗಿದ್ದರೆ, ಅವುಗಳಲ್ಲಿದ್ದ ಚಾತುರ್ಯವು ಸ್ವತಃ ಸರ್. ಜೇಮ್ಸ್ ಗ್ರಿಗ್ಗರದಾಗಿತ್ತು. ಇಂತಹ ಅರ್ಥಶಾಸ್ತ್ರ ಪ್ರವೀಣರನ್ನು, ಫೆಡರೇಶನ್ ಬರಲಿದ್ದು ದೇಶದ ಆರ್ಥಿಕಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಯಾಗಲಿರುವ ಈ ಸಂಧಿಗ್ದ ಕಾಲದಲ್ಲಿ ಮನೆಗೆ ಕಳುಹಿಸಿ ಇನ್ನಾರನ್ನು ನೇಮಿಸಲಿ-ಎಂದು ಸರಕಾರವೊಂದು ಸಮಸ್ಯೆಯಲ್ಲಿ ಬಿದ್ದಿರುವದಂತೆ. ಹಣಕಾಸುಗಳಿಗೂ ಬರಗಾಲ; ಹಣಕಾಸುಗಳ ಗುಟ್ಟುಬಲ್ಲವರ ಸಂಖ್ಯೆ ಬರಗಾಲವೆ?

○ ○ ○

## ಮಲಬಾರು ದೇವಸ್ಥಾನ ಪ್ರವೇಶ ಮಸೂದೆ.

ಮದ್ರಾಸ್ ಎಸೆಂಬ್ಲಿಯಲ್ಲಿ ಮುಖ್ಯಮಂತ್ರಿಗಳು ತಂದ ಮಲಬಾರು ದೇವಸ್ಥಾನ ಪ್ರವೇಶ ಮಸೂದೆಯನ್ನು ಸಿಲೆಕ್ಟ್ ಕಮಿಟಿಗೊಪ್ಪಿಸುವ ಸೂಚನೆಯು ಇದೇ ೩ರಲ್ಲಿ ಸೇರಿದ ಎಸೆಂಬ್ಲಿ ಸಭೆಯಲ್ಲಿ ೧೦೬ ಅನುಕೂಲ ೨ ಪ್ರತಿಕೂಲ ಮತಗಳಿಂದ ಮಂಜೂರಾಯಿತು. ಸಿಲೆಕ್ಟ್ ಕಮಿಟಿಯ ವರದಿಯು ೫ನೇ ತಾರೀಕಿನ ಸಭೆಯ ಮುಂದಿರಿಸಲ್ಪಡುವದು. ಈ ಸೂಚನೆಯನ್ನು ವಿರೋಧಿಸಿದವರೆಂದರೆ ಶ್ರೀ. ಆರ್. ಎಮ್. ಪಾಲಟ್ ಮತ್ತು ಶ್ರೀ. ಜಿ. ಕೃಷ್ಣರಾಯರು.

ಅಸ್ಪೃಶ್ಯರನ್ನು ಅಥವಾ ಅಸ್ಪೃಶ್ಯತಾ ನಿವಾರಣಾ ಮಸೂದೆಯನ್ನು ಮುಟ್ಟದಿರುವವರ ಸಂಖ್ಯೆಯೆಷ್ಟು ಕಡಿಮೆ!

---

### ಒಂದು ತಿದ್ದುಪಡಿ.

೨೭-೧೧.೧೯೩೮ರ 'ಅಂತರಂಗ' ದಲ್ಲಿ ನಮ್ಮ ಕಿನ್ನಿಗೋಳಿ ಏಜೆಂಟರ ಹೆಸರು ಕೆ. ಅಚ್ಯುತ ಮೇಸ್ತ್ರಿ ಎಂದು ಬರೆಯಲಾಗಿತ್ತು. ಅದು ಕೆ. ಅಚ್ಯುತ ಮಾಸ್ಟರ್ ಎಂದಾಗಬೇಕೆಂಬು ಕಿನ್ನಿಗೋಳಿ ಓದುಗರಿಗೆ ತಿಳಿಸಬಯಸುತ್ತೇವೆ.

*Circulation Manager.*



ನಿಮ್ಮನ್ನು ಹೆದರಿಸುವ ಆ ಜೈಲು!

# ಕೈದಿಗಳನ್ನು ಕ್ರಮಕ್ಕೆ ತರುವ ಜೈಲು ಶಿಸ್ತು!

ಢಕಾಯಿತಿನ ತಕ್ಸೀರಿಗೊಳಗಾಗಿ ಏಳು ವರ್ಷ ಕಠಿನ ಶಿಕ್ಷೆ ಪಡೆದು ಮದ್ರಾಸ್ ಪ್ರಾಂತ್ಯದ ಬೇರೆ ಬೇರೆ ಜೈಲುಗಳಲ್ಲಿದ್ದು ಬಂದವರೊಬ್ಬರ ಆತ್ಮಕಥೆಯಿದು.

## ಲೇಖಾಂಕ ೭

ಸರಿ. ನಾನು ಕನಾನೂರಿನ ಜೈಲಿನ ಕ್ವರೆಂಟೈನಿನೊಳಗಾದೆ. ನನ್ನ ಆ ಜ್ವರಗಡ್ಡೆಯನ್ನು ಹೊಟ್ಟೆಗಗತ್ಯವಿಲ್ಲದ ವಸ್ತುವೆಂದು ಆ ವರೆಗೂ ಭಾವಿಸಿಕೊಂಡಿದ್ದೆ. ನಮ್ಮ ಹೊಟ್ಟೆಯುರಿ, ಅದೆಷ್ಟು ಕೆಟ್ಟದಿದ್ದರೂ ಒಂದಲ್ಲೊಂದು ದಿನ ನಮ್ಮ ಕಷ್ಟಕ್ಕೊದಗದೆ ಹೋಗಲಾರದು ನೋಡಿ. ನನ್ನ ಹೊಟ್ಟೆಯೊಳಗೆ ಈ ಗಡ್ಡೆಯಲ್ಲದೆ, ಕಲಸ ಕಡಿಮೆ ಸಿಗಬೇಕೆಂಬ ಬಯಕೆಯೊಂದೇ ಇರುತ್ತಿದ್ದರೆ ಇದು ಕೈಗೂಡುತ್ತಿತ್ತೆ? ಅಂತೂ ಡಾಕ್ಟರರು ಮಾಡಿದ ಶಿಫಾರಸಿನಿಂದಾಗಿ ನನಗೆ ಅರ್ಧಕೆಲಸಮಾತ್ರ ಸಿಕ್ಕಿತು. ಅರ್ಧಕೆಲಸವೆಂದೊಡನೆ ಕೆಲಸವನ್ನು ಅರ್ಧಅರ್ಧ ಮಾಡಿಬಿಟ್ಟರಾಯಿತೇನೋ ಎಂದು ಭಾವಿಸಿಕೊಳ್ಳಬೇಡಿ. ಪೂರ್ತಿ 37½ ತೆಂಗಿನಕಾಯಿಗಳ ಸಿಪ್ಪೆಯನ್ನುಯನ್ನು ಗುದ್ದಲೇಬೇಕು. ನಮ್ಮದು ರಟ್ಟೆಯಲ್ಲವೆ? ಎಲ್ಲಿಯಾದರೂ ತೋಳುಸೋತು ಸಂಜೆಹೊತ್ತಿಗೆ ಒಂದೆರಡುಸಿಪ್ಪೆ ಹಾಗೆಯೇ ಉಳಿದುಹೋಯಿತು-ಎಂದಾದರೆ ಸರಿ. ಆ ಸಿಪ್ಪೆಗೆ ಬೇಕಾದಷ್ಟು ಗುದ್ದುಗಳನ್ನು ವಾರ್ಡರರು ಸ್ವತಃ ಬಂದು ಗುದ್ದುವರು. ಸಿಪ್ಪೆಯಮೇಲಲ್ಲ; ಕೆಲಸಮಾಡಲು ಒಗ್ಗದ ಕೈದಿಯ ಬೆನ್ನಮೇಲೆ. ರೋಗವಿಲ್ಲದ ಕೈದಿಯಾದರೆ ದಿನಕ್ಕೆ 75 ತೆಂಗಿನಕಾಯಿಗಳ ಸಿಪ್ಪೆ ಗುದ್ದಬೇಕು; ನನ್ನಂತಹ ರೋಗಿಯ ಪಾಲಿಗೆ ಅದರ ಅರೆವಾಸಿ.

### ಎದೆಗೊಂದು 'ತಾಳಿ'

ಕ್ವರೆಂಟೈನಿನಲ್ಲಿರುವಾಗಲೇ ವಾರ್ಡರನು ನನ್ನ ಎದೆಗೊಂದು ತಾಳಿಸಿಕ್ಕಿಸಿದ್ದ. ಕೋರ್ಟುಪೇದೆಗಳು, ಜನಿವಾರದಂತೆ ಹಾಕಿಕೊಳ್ಳುವ ಅಗಲಪಟ್ಟೆಯ ಮಧ್ಯದಲ್ಲೊಂದು ಬಿಲ್ಲೆಸಿಕ್ಕಿಸಿಕೊಳ್ಳುತ್ತಾರಲ್ಲಾ-ಅಷ್ಟು ದೊಡ್ಡದಲ್ಲ ಆದರೆ ಅ ತಹದೇ ಒಂದು ಬಿಲ್ಲೆ ಈ ತಾಳಿಯೆಂದರೆ. ಕಬ್ಬಿಣದ ಆ ಬಿಲ್ಲೆಯಲ್ಲಿ ಕೈದಿಯು ಶಿಕ್ಷೆಪಡೆದ ತಾರೀಕು, ಬಿಡುಗಡೆಯ ತಾರೀಕು, ಆಹಾರ, (ರಾಗಿ ಅನ್ನ) ಮತ್ತು ಕೈದಿಯ ನಂಬ್ರ-ಇಷ್ಟೆಲ್ಲಾ ಇವೆ. ನನ್ನ ಬಿಲ್ಲೆಯ ಮೇಲ್ಗಡೆಯ ಮೂಲೆಯಲ್ಲಿ ಹಸುರುಬಣ್ಣ ಹಾಕಿದ್ದರು ಈ ಹಸುರುಬಣ್ಣ ಹಾಕುವದು 'ಅರ್ಧಕೆಲಸಮಾಡುವ ಅರೆಪಚ್ಚೆ'ಯವ' ಎಂಬದನ್ನು ತಿಳಿಸುವದಕ್ಕಾಗಿ. ಕ್ವರೆಂಟೈನಿನಲ್ಲಿದ್ದ ಒಬ್ಬಿಬ್ಬರು ಹಣ್ಣುಮುದುಕರ ಬಿಲ್ಲೆಯ ತುದಿಯಲ್ಲಿ ಹಾಗೆಯೇ ಕೆಂಪು ಗುರುತವಿತ್ತು. ಕೆಂಪು ಗುರುತು ಹಾಕುವದು ತೀರಾ ನಿತ್ರಾಣಿಗಳಾಗಿದ್ದು- 'ಇಷ್ಟವಿದ್ದರೆ ಕೆಲಸಮಾಡಲಿ' ಎಂಬ ರಿಯಾಯತಿ ಹೊಂದಿದವರಿಗೆ. ಇಂಥವರ ಮೈಯಲ್ಲಿ ರಕ್ತವಿಲ್ಲವೆಂಬ ಸೂಚನೆಯೋ, ಅಥವಾ ಅಷ್ಟಾದರೂ ಜೈಲಾಧಿಕಾರಿಗಳ ಕಣ್ಣಲ್ಲಿ ರಕ್ತವಿದೆಯೆಂಬ ಸೂಚನೆಯೋ-ಆ ಕೆಂಪು ಗುರುತಿನ ಗುಟ್ಟೇನೆಂದು ಯಾರಿಗೆ ಗೊತ್ತು? ಬಿಲ್ಲೆಗೊಂದು ಸಣ್ಣ ಕೊಕ್ಕೆಯಿದೆ. ಕೈದಿಯ ಬನಿಯನಿನ ಎದೆಯುಭಾಗದಲ್ಲಿ ಒಂದು ಗಿಡ್ಡ ದಾರವನ್ನು ಹೊಲಿದಿಡುತ್ತಾರೆ. ತಾಳಿಯ ಕೊಕ್ಕೆಯನ್ನು ಆ ದಾರಕ್ಕೆ ಸಿಕ್ಕಿಸಿಕೊಂಡರಾಯಿತು. ಕೈದಿಯು ಸಾಧಿಸಿದ ಮಹತ್ಕಾರ್ಯಕ್ಕಾಗಿ ದೊರತ ಪದಕದಂತೆ ಅವನ ಎದೆಯಲ್ಲದು ರಾರಾಜಿಸುವದು. ಕೈದಿಯ ಹೃದಯದಲ್ಲೆಂತಹ ಪರಿವರ್ತನೆಯೇ ಉಂಟಾಗಲಿ—ಎದೆಯ ಮೇಲಿನ

ಬಿಲ್ಲಿಗೆ ಯಾವ ತೊಂದರೆಯೂ ಬಾರದಂತೆ ಅವನು ನೋಡಿಕೊಂಡಿರಬೇಕು.

## ಕ್ವರಂಟೈನಿನಿಂದ ಬ್ಲೋಕಿಗೆ

ನಾನು ಕ್ವರಂಟೈನಿನಲ್ಲಿ ಹನ್ನೆರಡು ದಿನ ಮಾತ್ರವಿದ್ದೆ. ಆ ಮೇಲೆ ಒಳಗೆ ಹನ್ನೊಂದು ದಿವಸ, ಹೀಗೆ ಕನಾನೂರು ಜೈಲಿನಲ್ಲಿ ನಾನಿದ್ದುದು ಕೇವಲ ೨೩ ದಿನ. ಜೈಲಿನಲ್ಲಿ ಕೈಬಾಯಿತಿರುಗಿಸುವದಕ್ಕೂ 'ಹೀಗೆಯೇ, ಇಷ್ಟೇ' ಎಂಬ ನಿಯಮವಿದೆ. ಕನಾನೂರಿನ ಇಪ್ಪತ್ತಮೂರು ದಿನಗಳೂ ನನಗೆ ಆ ಶಿಸ್ತನ್ನು ಕಲಿಯುವದಕ್ಕೆ ಬೇಕಾದುವು. ಒಳಗಿನ ರೀತಿ ನೀತಿ ಎಲ್ಲಾ ಜೈಲುಗಳಲ್ಲಿಯೂ ಒಂದೇ ವಿಧ. ಸ್ಥಳವ್ಯತ್ಯಾಸ, ಪರಿಮಾಣ ಮೊದಲಾದುವನ್ನು ಬಿಟ್ಟರೆ ಜೈಲುಕಟ್ಟಡಗಳ ನಮೂನೆ ಕೂಡಾ ಸರ್ವಸಾಧಾರಣ ಒಂದೇ ರೀತಿ. ಆದ್ದರಿಂದ ಈ ಸಂದರ್ಭದಲ್ಲೇ ದಿನವಹಿ ಶಿಸ್ತಿನ ಕುರಿತು ನಿಮಗೊಂದಿಷ್ಟು ತಿಳಿಸಿಬಿಡುವದು ವಾಸಿ.

ಕ್ವರಂಟೈನಲ್ಲಿದ್ದ ಹದಿಮೂರನೇ ದಿನದ ಪ್ರಾತಃಕಾಲ ನಮ್ಮ ನಿತ್ಯದ ವಾರ್ಡರ್ ಬಂದ. ಬಂದವನೇ 'ನಿನ್ನನ್ನಿನ್ನು ಒಳಗೆ ಹಾಕುವದು; ಎಲ್ಲವನ್ನೂ ಹಿಡಿದುಕೋ' ಎಂದ. ಎಲ್ಲವೆಂದರಾವುದು–ಆನೆ ಕುದುರೆಯೇ? ತಟ್ಟೆ ಬಟ್ಟಲು, ಕಂಬಳಿ ಚಾಪೆಗಳನ್ನು ಹಿಡಿದುಕೊಂಡು ಅವನ ಹಿಂದೆ ಹೊರಟೆ. ವಾರ್ಡರ್ ಸೀದಾ ಹೋಗುತ್ತಿದ್ದ, ನಾನವನ ಹಿಂದಿನಿಂದ ಬರುತ್ತಿದ್ದೆ. ಮಹಾದ್ವಾರವನ್ನು ದಾಟಿ ಒಳಗೆ ಹೆಜ್ಜೆಯಿಟ್ಟಿದ್ದೇನೆ ಮಾತ್ರ, ಎಲ್ಲಿಂದ ಬಡಿಯಿತೋ ನಾನರಿಯೆ-'ಸಟಾರ್' ಎಂದುಬಿತ್ತು ನನ್ನ ಕುತ್ತಿಗೆಯ ಬುಡಕ್ಕೇ ಒಂದು ಗುದ್ದು. ಕಣ್ಣ ಕಿಡಿ ಹಾರಿದಂತಾಯಿತು ಬಿದ್ದ ಪೆಟ್ಟಿಗೆ 'ಹೆಂಕ'' ಎಂದು ತಿರುಗಿ ನೋಡುತ್ತೇನೆ– ದ್ವಾರಕಾಯುವ ವಾರ್ಡರ್ ಜೋಡುಗಟ್ಟಿ ನಿಂತಿದ್ದ. ''ಹೋಗ್. ಇಲ್ಲಿಂದ ಹೋಗುವವರೆಗೆ ಇನ್ನಂಥಾ ಗುದ್ದು ತಿನ್ನದಂತೆ ಜಾಗ್ರತೆಯಿರಲಿ" ಎಂದ. ಅಯ್ಯಬ್ಬಾ! ಇನ್ನೂ ಅಂತಹ ಒಂದು ಗುದ್ದು ತಿಂದರೆ ಮತ್ತೂ ಹೊರಗೆ ಹೋಗುವ ಆಸೆಯುಂಟೆ? ಕ್ವರಂಟೈನಿನಿಂದ ಒಳಗೆ ಬರುವಾಗ ಮುಂಜಾಗ್ರತೆಗಾಗಿ ಬೆನ್ನಸಂದಿಗೇ ಏರಿಸಿ ಕಳುಹಿಸುವದು ಅದೊಂದು ಕ್ರಮವಂತೆ! ಸತ್ಯಹೇಳುತ್ತೇನೆ, ಅಂದಿನಿಂದ ಕೆಲವು ದಿನಗಳವರೆಗೆ ಜೈಲಿನೊಳಗೆ ಹೆಜ್ಜೆಯಿಡುವಾಗಲೆಲ್ಲಾ ನಾನು ಎಡಬಲ ನೋಡಿಕೊಳ್ಳುವದಿತ್ತು. ಎಲ್ಲೆಲ್ಲಿ ಎಂತೆಂತಹ ನಮೂನೆಯ ಗುದ್ದುಗಳು ಕಾದುನಿಂತಿವೆಯೋ ಯಾರಿಗೆ ಗೊತ್ತು? ಕ್ವರಂಟೈನಿನಿಂದ ಗುದ್ದಿನ ಗೇಟಿನ ಮೂಲಕ ಒಳ ತಂದವರನ್ನು ಸೀದಾ ಪುನಃ ಆಫೀಸಿಗೆ ಕೊಂಡುಹೋಗುತ್ತಾರೆ. ಅಲ್ಲಿ ಕ್ವರಂಟೈನಿನ ತಟ್ಟೆ ಬಟ್ಟಲು, ಉಡುಗೆ, ಕಂಬಳಿ, ಚಾಪೆಗಳನ್ನೆಲ್ಲಾ ತೆಗೆದಿಡಿಸಿ ಪ್ರತ್ಯೇಕವೇ ಕೊಡುತ್ತಾರೆ. ಇವುಗಳನ್ನೆಲ್ಲಾ ಹಿಡಿದುಕೊಂಡ ಮೇಲೆ ವಾರ್ಡರ್ ನನ್ನನ್ನೊಂದು ಬ್ಲೋಕಿನೊಳಗೆ ಕರೆದುಕೊಂಡುಹೋಗಿ ಬಿಟ್ಟ. 'ಬ್ಲೋಕು' ಎಂದರೇನೆಂಬುದನು. ನಾನು ಈ ಮೊದಲೇ ತಿಳಿಸಿದ್ದೇನೆ. ಗಟ್ಟದಮೇಲಿನವರುದನಕರುಗಳನು ಹಟ್ಟಿಯಲ್ಲಿ ಗೂಡಿಸಿಡುವ ಕ್ರಮವನ್ನೆಲ್ಲಿಂದಾದರೂ ಕೇಳಿದ್ದುಂಟೆ? ಅಲ್ಲಿಯವರು ನಮ್ಮಂತೆ ಜಾನುವಾರುಗಳನ್ನು ಗೂಟಕ್ಕೆ ಬಿಗಿಯುವದಲ್ಲ. ದೊಡ್ಡ ಹಟ್ಟಿಯೊಳಗೆ ಸೇರಿಸಿ ಗಟ್ಟಿ ಕೀಲುಜಡಿದು ಬಿಟ್ಟರಾಯಿತು; ಒಳಗೆ ರಾತ್ರಿಯಿಡೀ ಅವುಗಳು ಯಾವ ವಹಿವಾಟನ್ನಾದರೂ ನಡೆಸಿಕೊಂಡಿರಬಹುದು. ಅರ್ಥ ಸರೀ ಸಿಗಬೇಕಾದರೆ ನನ್ನ ಬ್ಲೋಕೆಂದರೆ ಅಂತಹದೊಂದು ಹಟ್ಟಿಯೆಂದು ನೀವು ತಿಳಿದುಕೊಳ್ಳಬಹುದು. ಕನ್ನಾನೂರಿನ ಹಟ್ಟಿ ಸಬ್‌ಜೈಲಿನ ಹಟ್ಟಿಗಿಂತ ಎಷ್ಟೋ ದೊಡ್ಡದು. ಸಬ್‌ಜೈಲಿನ ಒಂದು ಬ್ಲೋಕಿನಲ್ಲಿ ೨೦-೩೦ ಜಾನುವಾರುಗಳನ್ನು ಮಾತ್ರ ಸೇರಿಸಲು ಸಾಧ್ಯ. ಆದರೆ ಕನಾನೂರಿನ ಒಂದೊಂದು ಕೋಣೆಯೊಳಗೆ ಸರ್ವಸಾಧಾರಣ ನೂರು ಜನರನ್ನು ತುಂಬಿಸಹುದು. ನಾನು ಹೋಗಿ ಸೇರಿದ ಬ್ಲೋಕಿನಲ್ಲಿ ಸುಮಾರು ೭೦ ಜನರಿದ್ದರು.

## ಜೈಲೆಂದರೆ ಸಣ್ಣದೊಂದು ಊರು!

ಈಗ ನಿಮಗೆ ಕನಾನೂರ ಜೈಲಿನ ರೂಪರೇಷೆಗಳನ್ನೊಂದಿಷ್ಟು ವಿವರಿಸುತ್ತೇನೆ. ನಿಮ್ಮಲ್ಲಿ ಕೆಲವರು 'ಜೈಲು' ಎಂದೊಡನೆ, ಹುಲಿಯ ಗವಿಯಂತೆ ಕತ್ತಲು ಕತ್ತಲಾಗಿದ್ದು ಮನುಷ್ಯರನ್ನು ರಾಶಿಹಾಕಿ ಬೇಯಿಸುವ ಏನೋ ಒಂದು-ಎಂದು ಚಿತ್ರಿಸಿ ಕೊಂಡಿರಬಹುದು. ಹಾಗಲ್ಲ? ದೊಡ್ಡ ಕಟ್ಟೋಣಗಳಲ್ಲಿರುವವರು ದೊಡ್ಡವರು ಎಂಬ ತತ್ವದಂತೆ ನೋಡುವದಾದರೆ ನನ್ನಷ್ಟು ದೊಡ್ಡವರು ನೀವಲ್ಲ ನಾನಿದ್ದ ಕನಾನೂರ

ಜೈಲಿನ ನಾಲ್ಕೂ ಪ್ರಾಗಾರದೊಳಗಿನ ಒಟ್ಟು ವಿಸ್ತೀರ್ಣವು ನಾಲ್ಕು ಚದರ ಮೈಲುಗಳಾಗಬಹುದು ನೋಡಿ! ನಿಮಗಾಶ್ಚರ್ಯವಾಗಬಹುದು. ಸತ್ಯಕ್ಕೂ ಅದೊಂದು ಚಿಕ್ಕ ಊರು. ಆ ಪ್ರಾಗಾರಗಳ ಎತ್ತರ ನೋಡಬೇಕು. ಅದನ್ನು ದಾಟಬೇಕಾದರೆ ವಿಮಾನವೇ ಬೇಕು ಹೊರತು ಅನ್ಯಥಾ ಸಾಧ್ಯವಿಲ್ಲ. ಮಾಡು ಹತ್ತಿ ಹಂಚು ತೆಗೆದು ಮನೆ ನುಗ್ಗಿದವರನ್ನು, ಜೋಡು ಕಲ್ಲಿನ ಗೋಡೆಗೆ ಕನ್ನ ಕೊರೆದವರನ್ನು ಇಂಥಾ ಅಂತರ್ಲಾಗ ಪ್ರವೀಣರನ್ನೇ ಆ ಪ್ರಾಗಾರ ತಡೆದಿಟ್ಟುಕೊಂಡಿದೆ. ಜಲಪ್ರಲಯವಲ್ಲದೆ ಮತ್ತಾವುದಕ್ಕೂ ಅದು ಮಣಿಯದೆನ್ನಿ. ಆ ಕೋಟೆಯೊಳಗೆ ಕಟ್ಟೋಣಗಳೇನು, ತೋಟಗಳೇನು-ಹೆಚ್ಚೇನು, ಅದೊಂದು ಊರೇ ಆಗಿದೆ. ಹೇಳಿದರೆ ಸುಳ್ಳೆಂದು ಹೇಳುವಿರೇನೋ—ನನ್ನ ಹಾಗೆ ಹೋಗಿ ನಿಲ್ಲಿರೆಂದು ಹೇಳಲಾರೆ, ನೋಡುವದಕ್ಕಾದರೂ ನೀವೊಮ್ಮೆ ಕನಾನೂರಿಗೆ ಹೋಗಬೇಕಯ್ಯ!

ಜೈಲಿನ ಮುಖ್ಯದ್ವಾರ ಅಥವಾ ಗುದ್ದಿನ ಗೇಟು ಪೂರ್ವದಿಕ್ಕಿನಲ್ಲಿದೆ. ಆ ಗೇಟಿನ ಎಡಬಲ ಬದಿಯಲ್ಲಿ ಕ್ಲಾರ್ಕರ ಮತ್ತು ಜೈಲರದ ಆಫೀಸುಗಳಿವೆ. ಗೇಟಿನ ಮುಂಭಾಗದಲ್ಲಿ ಅಂದರೆ ಜೈಲಿನ ನಟ್ಟ ನಡುವೆ 'ಟವರ್' ಇದೆ. ಟವರ್ ಎಂದರೆ ವರ್ತುಲಾಕಾರವಾಗಿ ಉತ್ತರಕ್ಕೆ ನಿಂತ ಸೊಗಸಾದ ಕಟ್ಟಡ. ಆ ಕಟ್ಟಡದ ಉಪ್ಪರಿಗೆಯಲ್ಲಿ ಜೈಲು ಸುಪರಿಂಟೆಂಡೆಂಟರ ಆಫೀಸೂ ಕೆಳಗಡೆ ಚೀಫ್ ವಾರ್ಡರನ ಆಫೀಸೂ ಇದೆ. ನೀವು ಜೈಲು ವೈಭವವನ್ನೆ ತಿಳಿಯಬೇಕೆಂದಿದ್ದರೆ ಆ ಟವರನ್ನೊಮ್ಮೆ ನೋಡಿದರೆ ಸಾಕು. ಹೀಗೆ ಕೇಂದ್ರದಲ್ಲಿ ಟವರುಂಟಲ್ಲ. ಆ ಟವರಿನ ಸುತ್ತಲೂ ಕೈದಿಗಳ ಬ್ಲೋಕುಗಳು. ನೂರು ನೂರು ಜನರನ್ನು ತುಂಬಿಸಿಕೊಳ್ಳಬಲ್ಲ ಅಂತಹ ಏಳು ಬ್ಲೋಕುಗಳು ಕನ್ನಾನೂರಿನಲ್ಲಿವೆ. ಒಂದೊಂದು ಬ್ಲೋಕು ಅರಮನೆಯ ಲಾಯದಂತೆ ಒಂದಷ್ಟು ವಿಸ್ತೀರ್ಣವಾಗಿ ಉಂಟಲ್ಲ. ಪಡು ದಿಕ್ಕಿನ ಬ್ಲೋಕಿನ ಹಿಂಬದಿಯಲ್ಲಿ ಬಡಗೀ ಕೆಲಸ ಮಾಡುವ ದೊಡ್ಡ ಕಟ್ಟೋಣ. ಮನುಷ್ಯನು ಮರದಂತೆ ಉಪಯೋಗಿಸಲ್ಪಡುವದನ್ನು ನೋಡ ಬೇಕಾದರೂ ಕನಾನೂರಿಗೆ ಹೋಗಬೇಕು; ಇನ್ನು ಮರದ ಉಪಯೋಗದ ರೀತಿ ನೋಡಬೇಕಾದರೂ ಕನ್ನಾನೂರಿಗೇ ಹೋಗಬೇಕು. ಆ ಮರದ ಕೆಲಸದ ಮನೆಯಲ್ಲಿ ಆಗದ ಕೆಲಸವೇ ಇಲ್ಲವಯ್ಯ. ಅಲ್ಲಿ ಕಡಿಯುವವರು, ಕೆತ್ತುವವರು ಜನಿವಾರ ಹಾಕಿಕೊಂಡ ಬಡಗಿಗಳೆಂದು ಭಾವಿಸಬೇಡಿ. ಎಲ್ಲರೂ ಸಾಯ್ಬರ ಟೊಪ್ಪಿಯಂತಹ ಟೊಪ್ಪಿಯಿಟ್ಟ ಕೈದಿಗಳೇ ಹಾಗೆಯೇ ಬಡಗು ದಿಕ್ಕಿನ ಬ್ಲೋಕಿನ ಬದಿಯಲ್ಲಿ ಹುರಿಹಗ್ಗದ ಕಾರ್ಖಾನೆ. ನಿಮ್ಮ ಹಗ್ಗದ ಕಾರ್ಖಾನೆಗಳನ್ನೆ ಹತ್ತು ಹಾಕಬೇಕು--ಆ ಕಾರ್ಖಾನೆಗೆ ಸರಿಗಟ್ಟ ಬೇಕಾದರೆ! ಸಿಪ್ಪೆ ಗುದ್ದುವದು, ಎತ್ತಿ ಹೆಣೆಯುವದು, ನಾನಾತರದ ಹಗ್ಗ ಜೋಡಿಸುವದು-ಇವನ್ನೆಲ್ಲಾ ಅಲ್ಲಿ ಕೈದಿಗಳೇ ಮಾಡುತ್ತಾರೆ. ಹಾಗೆ ಹೆಣೆಯುವಾಗ 'ಕೈಯ್ಯ ಹಗ್ಗವನ್ನು ಕಂಠಕ್ಕೊಮ್ಮೆ ಬಿಗಿದುಕೊಳ್ಳೋಣವೇ' ಅನ್ನಿಸುವವರು ಎಷ್ಟು ಮಂದಿಯೇ!

## ಕಾಂಜಾ ಆಫೀಸು

ಬಡಗು ಪಡು ದಿಕ್ಕುಗಳಲ್ಲಿ ಮರದ-ಮತ್ತು ಹುರಿಹಗ್ಗದ ಬ್ಲೋಕುಗಳಾಯಿತಲ್ಲಾ, ತೆಂಕು ದಿಕ್ಕಿನಲ್ಲಿ 'ಕಾಂಜಾ ಆಫೀಸ್' ಇದೆ. ಕಾಂಜಾ ಆಫೀಸೆಂದರೆ ತಕ್ಷೀರು ಮನೋವೃತ್ತಿಯು 'ಕಾಂಜಾ'ದ ಅಮಲಿನಂತೆ ಅಂಟಿಕೊಂಡ ಅಪರಾಧಿಗಳಿರುವ ಬ್ಲೋಕು. ಅವರನ್ನು ಕಂಡ ಮೇಲೆ ಲೋಕದಲ್ಲಿ ರುಚಿಯಿಲ್ಲದ ವಸ್ತುವೇ ಇಲ್ಲವೆಂದು ಭಾವಿಸಿದ್ದೇನೆ. ಯಾಕೆ ಗೊತ್ತುಂಟೆ? ಮನುಷ್ಯಮಾಂಸದ ರುಚಿ ಹತ್ತಿದ ಹುಲಿ ಮನುಷ್ಯನನ್ನೆ ತಿನ್ನುವದುಂಟು; ಮಣ್ಣಿನ ರುಚಿ ಹತ್ತಿದ ಮಗು ಬಿಡದೆ ಮಣ್ಣು ತಿನ್ನುವದುಂಟು. ಇವಕ್ಕೂ ಮಿಗಿಲಾದ ವಿಷಯವೆಂದರೆ ಶಿಕ್ಷೆಯ ರುಚಿ ಹತ್ತಿದವನು ಮತ್ತೂ ಮತ್ತೂ ಶಿಕ್ಷೆಯನುಭವಿಸಲು ಬರುವದು. ನಿಮ್ಮ ಪೂರ್ವಿಕರಲ್ಲಿ ಏಳೆಂಟು ಸಲ ತಿರುಪತಿಯಾತ್ರೆ ಮಾಡಿ, ಇಡೀ ಜನ್ಮವನ್ನು ಅದರಲ್ಲೇ ಕಳೆದು ಸಾರ್ಥಕಮಾಡಿಕೊಂಡವರಿದ್ದಾರಲ್ಲ. ಹಾಗೆ ಎಂಟು ಸಲ, ಹತ್ತು ಸಲ ಜೈಲು ಯಾತ್ರೆಮಾಡಿದ ಪುಣ್ಯಾತ್ಮರನ್ನು ಕಾಣಬೇಕು ಆ ಕಾಂಜಾ ಆಫೀಸಿನಲ್ಲಿ. ನಮ್ಮ ತಲೆಯ ಮೇಲೆ ಚಡ್ಡಿ ನಮ್ಮ ಬನಿಯನುಗಳ ವಸ್ತ್ರದ, ಮಾಪಿಳ್ಳೆ ಹುಡುಗರ ಟೊಪ್ಪಿಯ ಮಾದರಿಯ ಒಂದು ಬಿಳೀ ಟೊಪ್ಪಿಯಾದರೆ ಈ ಹಿರಿಯರ ತಲೆಗೆಲ್ಲಾ ಕಪ್ಪು ಟೊಪ್ಪಿ. ಇದರಲ್ಲಾದರೆ ಒಂದು ಅರ್ಥವುಂಟೆನ್ನಿ. ತಲೆಯಲ್ಲಿರುವ ಕಪ್ಪು ಕೂದಲಿಗೂ ಈ ಕಪ್ಪು ಟೊಪ್ಪಿಗೂ ಅವರ ಮಟ್ಟಿಗೆ ವ್ಯತ್ಯಾಸವೇನೂ ಇಲ್ಲ! ಅದು ಅವರ ತಲೆಯಲ್ಲಿ ಸದಾಕಾಲ

ವಿರುವದು ನಿಜವಾದರೆ ಇದೂ ಅಷ್ಟೇ ಸತ್ಯ. ಈ ಕಪ್ಪು ಟೊಪ್ಪಿಯವರನ್ನು ಇತರ ಸಾಮಾನ್ಯ ಕೈದಿಗಳೊಡನೆ ಬೆರೆಯಲು ಬಿಡುವದಿಲ್ಲ. ಮಾತ್ರವಲ್ಲ, ಆ ಕಾಂಜಾ ಆಫೀಸಿನಲ್ಲಿ ಅವರನ್ನು ಬೇರೆ ಬೇರೆಯಾಗಿ ಒಂದೊಂದು ಕೋಣೆಯಲ್ಲಿ ಒಬ್ಬೊಬ್ಬರನ್ನೇ ಹಾಕಿಡುತ್ತಾರೆ. ಕೆಲಸಕ್ಕೆ ಕೂಡಾ ಆ ಕಪ್ಪು ತಲೆಯವರನ್ನು ಮಾತ್ರ ಒಟ್ಟಿಗೆ ಬಿಡುತ್ತಾರೆ.

### ಸಾಮಾನಿಡುವ ಮನೆ.

ಕನಾನೂರು ಜೈಲಿನೊಳಗಿದ್ದ ಕೈದಿಗಳು ಒಟ್ಟಿಗೆ ಒಂದು ಸಾವಿರದ ವರೆಗಾಗಬಹುದು. ಒಂದು ಸಾವಿರ ಜನರಿಗೆ ದಿನಂಪ್ರತಿ ಮೂರು ಊಟ ಹಾಕುವ ಬೇರೊಂದು ಭೋಜನಶಾಲೆಯನ್ನು ತೋರಿಸಿ. ಬೇಡ, ಜೈಲೂಟಕ್ಕೂ ಭೋಜನವೆಂತೇಕೆ ಹೆಸರಿಡಬೇಕು? ದಿನಂಪ್ರತಿ ಮೂರು ಹೊತ್ತು ೧೦೦೦ ಜಾನುವಾರುಗಳಿಗೆ ಹುಲ್ಲು ಅಕ್ಕಚ್ಚು ಇಡುವ ಒಂದು ಗೋಶಾಲೆಯನ್ನಾದರೂ ತೋರಿಸಬಲ್ಲಿರಾ? ಸಾಧ್ಯವಿಲ್ಲ. ಇಷ್ಟು ಜನರ ಊಟದ ಸಾಮಾನು, ಪಾತ್ರೆ ತಟ್ಟೆ, ಕಂಬಳಿ ಚಾಪೆ, ಚಡ್ಡಿ ಬನಿಯನು, ಇನ್ನೂ ಕೆಲಸಕ್ಕೆ ಬೇಕಾಗುವ ಹಾರೆ ಗುದ್ದಲಿ, ಇಂತಹ ಇನ್ನೆಷ್ಟೋ ಸಾಮಾನುಗಳನ್ನು ದಾಸ್ತಾನಿಡುವ 'ಸ್ಟೋರ್ಸ್' ಎಷ್ಟು ದೊಡ್ಡದಾಗಿರಬೇಕು. ಆ ಮಹಾ ಸಾಮಾನು ನಿಲಯವು ವಾಯವ್ಯ ಮೂಲೆಯಲ್ಲಿ, ಅಲ್ಲಿಯ ಬ್ಲೋಕಿನ ಹಿಂಬದಿಯಲ್ಲಿದೆ. ಡಿಪ್ಯುಟಿ ಜೈಲರರ ಆಫೀಸಿರುವದು ಅಲ್ಲಿಯೇ ಅದರ ಮೇಲ್ವಿಚಾರಣೆಯ ಹೊಣೆಗಾರಿಕೆಯೆಲ್ಲಾ ಡಿಪ್ಯುಟಿ ಜೈಲರರದು. ಕೈದಿಯ ನಡೆನುಡಿ, ಆಹಾರದಿಂದ ಹಿಡಿದು ಅದಕ್ಕೆ ಬೇಕಾಗುವ ಸಾಮಾನು ವರೆಗೆ ಎಲ್ಲವೂ ತೂಕ ಪ್ರಕಾರವಿರಬೇಕು. ಅದನ್ನು ಕೈದಿಗಳಿಗೆ ವಾರ್ಡರರು ಕಲಿಸುತ್ತಾರಾದರೆ ವಾರ್ಡರರಿಗೂ ಕಲಿಸುವವರು ಡಿಪ್ಯುಟಿ ಜೈಲರರು. ಈ ಸ್ಟೋರಿನ ಸಮೀಪದಲ್ಲಿಯೇ ದೊಡ್ಡದಾದ ಅಡುಗೆ ಮನೆ. ಅಲ್ಲಿ ದೊಡ್ಡ ದೊಡ್ಡ ಒಲೆಗಳ ಮೇಲೆ ದೊಡ್ಡ ದೊಡ್ಡ ಕೊಪ್ಪರಿಗೆಗಳು. ಅಂತೂ ಅಲ್ಲಿಯ ಕಟ್ಟಡದಿಂದ ಹಿಡಿದು ಕವಳಿಗೆಯ ವರೆಗೆ ಕೋಣೆಯಿಂದ ಹಿಡಿದು ಕೊಂಡೆಯ ವರೆಗೆ ಎಲ್ಲವೂ ಮಹತ್ತೇ! ಮತ್ತೇನು ಅಲ್ಲಿ ಇರುವ ಮತ್ತು ಬರುವ ಜನರೇನೂ ಚಿಲ್ಲರೆಯವರೆ? ಇನ್ನು ಅಲ್ಲಲ್ಲಿ ಒಬ್ಬೊಬ್ಬರನ್ನೇ ಹಾಕಿಡುವ ಕೋಣೆಗಳ ಸಾಲುಗಳಿವೆ. ಪಾಗಾರಕ್ಕೆ ತಾಗಿ ಇರುವ ಖಾಲಿ ಸ್ಥಳಗಳಲ್ಲೆಲ್ಲಾ ತರಕಾರಿಕಳನ್ನೂ ಬಾಳೆಗಿಡಗಳನ್ನೂ ಬೆಳೆಸುತ್ತಾರೆ. ಅವುಗಳ ಕೆಲಸವನ್ನೂ ಕೈದಿಗಳೇ ಮಾಡಬೇಕು. ಆ ಕೆಲಸ ಈ ಕೆಲಸವೆಂದಿಲ್ಲ; ಜೈಲಿನೊಳಗೆ ಯಾವ ಕೆಲಸವುಂಟೋ ಅದನ್ನೆಲ್ಲಾ ಮಾಡುವದು ಕೈದಿಗಳೇ. ಊರಲ್ಲಿ ಕೆಲಸಮಾಡಿ ತಿನ್ನಲು ಮೈಬಗ್ಗದೆ, ಕನ್ನಹಾಕಿಯೇ, ದರೋಡೆ ಮಾಡಿಯೇ ಅಲ್ಲಿ ಬಂದವರು ಅನುಭವಿಸುವ ಸುಖವಿದು!

### ಕೆಂಪು ಟೊಪ್ಪಿಯವರು

ಜೈಲುಗಳೊಳಗಿರುವ ಕಪ್ಪು ಟೊಪ್ಪಿಯವರ ಪರಿಚಯವಾಯಿತಷ್ಟೆ, ಕೆಂಪು ಟೊಪ್ಪಿ ಹಾಕುವ ಇನ್ನೊಂದು ವರ್ಗಯಿದೆ. ಈ ವರ್ಗದವರಾರು ಗೊತ್ತುಂಟೆ? ಪಕಾಪಕಿ ಕೊಲೆಮಾಡಿ ರಕ್ತದಲ್ಲಿ ಮಿಂದು ಇಪ್ಪತ್ತು ವರ್ಷಗಳ ಶಿಕ್ಷೆಗೊಳಗಾದವರು. ಟೊಪ್ಪು ಇಲ್ಲವೇ ಇಪ್ಪತ್ತು ವರ್ಷ ಸಜೆ ಪಡೆದವರ ತಲೆಗೆ ಕೆಂಪು ಟೊಪ್ಪಿ ಬೀಳುತ್ತದೆ. ಇವರು ಬಂಡಿಯತ್ತಿನ ಹಾಗೆ-ಅಥವಾ ಕಪ್ಪು ಟೊಪ್ಪಿಯವರ ಹಾಗೆ ಬೇರೆಬೇರೆ ಇರಬೇಕೆಂಬ ನಿರ್ಬಂಧವೇನೂ ಇಲ್ಲ. ಆದರೆ ಇವರೇನು ಸಾಮಾನ್ಯ ಕೈದಿಗಳಂತಲ್ಲಪ್ಪಾ. ಶಿಕ್ಷೆಯ ಮೇರೆಯಿರುವ ವರೆಗೂ ಅನುಭವಿಸಲಿರುವ ಭಯಂಕರ ಮನುಷ್ಯರು ಎಂಬುದನ್ನು ತಿಳಿಯುವದಕ್ಕಾಗಿ ಈ ಕೆಂಪು. ಅವರನ್ನು ಕಂಡಾಗಲೆಲ್ಲಾ ನನಗೆ ಜೈಲಿನ ಹೊರಗಿರುವ ಕೆಂಪು ಟೊಪ್ಪಿಯವರ ನೆನಪಾಗುತಿತ್ತು. ಅವರು ನನ್ನನ್ನೀ ಅವಸ್ಥೆಗೆ ತಂದ ಒಂದೊಂದೇ ಘಟನೆಗಳು ನೆನಪಿಗೆ ಬರುತ್ತಿದ್ದವು. ನಿಜವಾಗಿಯೂ ಕೆಂಪು ಟೊಪ್ಪಿಯವರಿಗೆ ಇಪ್ಪತ್ತಿಪ್ಪತ್ತು ವರ್ಷ ಕೊಡುವದರಲ್ಲಿ ನ್ಯಾಯವಿದೆ ಅನ್ನಿಸುತಿತ್ತು!

**ಕಳ್ಳರನ್ನು ಶಿಕ್ಷಿಸುವದಕ್ಕಾಗಿ ಜೈಲೆಂಬುದಿದೆಯಲ್ಲವೆ? ಆ ಜೈಲಿನಲ್ಲಿಯೇ ಕಳ್ಳತನವಿದೆಯೆಂದರೆ ನೀವು ನಂಬುವಿರಾ? ಕ್ರಮ ತಪ್ಪಿ ನಡಿಯುವದು ಪೋಕಾಟಿಕೆಯೆಂದಾದರೆ ಅಂತಹ ಪುಂಡಾಟವನ್ನು ಸ್ವತಃ ಅಧಿಕಾರಿಗಳೇ ಮಾಡುವರೆಂದರೆ ನಿಮಗಾಶ್ಚರ್ಯವಾಗದೆ? ಈ ವಿಶೇಷಗಳನ್ನು ಬರುವ ವಾರದ ಸಂಚಿಕೆಯಲ್ಲೋದಿರಿ.**

# ಸೋಲಿಲ್ಲದ ಪಂಥ!

ಒಂದು ನಿಜ ಕಥೆ

●

'ಗಂಗಾ ಯಮುನಾ ವಿಶ್ರಾಂತಿ ಗೃಹ. ಉಡುಪಿ ಬ್ರಾಹ್ಮಣರ ಹೋಟೆಲು, ರನ್ನಗಿರಿ. ಬನ್ನಿರಿ! ಉಳಕೊಳ್ಳಿರಿ! ಶುಚಿರುಚಿಯಾದ ಊಟ, ಮನ ತಣಿಸುವ ಪಾನೀಯಗಳಿಗೆ ನಮ್ಮಲ್ಲಿಗೊಮ್ಮೆ ಸ್ವತಃ ಬಂದು ಪರೀಕ್ಷಿಸಿರಿ! ಪ್ರೊಪ್ರೈಟರ್ ಅನಿರುದ್ಧ ಭಟ್ಟ.' ಈ ಆಮಂತ್ರಣವನ್ನು ನೀವು ನಮ್ಮ ಹಲವು ಪತ್ರಿಕೆಗಳಲ್ಲಿ ನೋಡಿರಬಹುದು. 'ಗಂಗಾ ಯಮುನೆಯರನ್ನು ಹಿಂದೂದೇಶವು ಬಲ್ಲುದು; ಹಾಗೆಯೇ ಗಂಗಾಯಮುನಾ ವಿಶ್ರಾಂತಿಗೃಹ'ವನ್ನು ರನ್ನಗಿರಿಯಲ್ಲಿ ಊರಿಗೆ ಊರೇ ಅರಿತಿದೆ. ಹೊಟೆಲಿನ ಮುಂಭಾಗ ತೂಗಾಡುತ್ತಿರುವ ದೊಡ್ಡ ಬೋರ್ಡಿನಲ್ಲಿಮತ್ತು ಪತ್ರಿಕೆಗಳಲ್ಲಿ ಬರುವ ಉದ್ದುದ್ದ ಜಾಹೀರಾತುಗಳಲ್ಲಿರುವ ಅಕ್ಷರಗಳಲ್ಲಿ ಒಂದೂ ಸುಳ್ಳಲ್ಲ. ಬಾಕಿ ಬಿಡಿ-ಅಲ್ಲಿ ಗಂಗಾಯಮುನೆಯರಿರುವದು ಕೂಡಾ ಸುಳ್ಳಲ್ಲ.

ooo ooo

ಅನಿರುದ್ಧ ಭಟ್ಟರು ಉಡುಪಿಯಿಂದ ರನ್ನಗಿರಿಗೆ ಸುಮಾರು ಹತ್ತು ವರುಷಗಳ ಹಿಂದೆ ಬಂದವರು ಎಲ್ಲಿಯೋ ಹತ್ತೈವತ್ತುರೂಪಾಯಿಗಳನ್ನು ಹಿಡಿದುಕೊಂಡು ಕಾಫಿ ಹೊಟೆಲನ್ನಾರಂಭಿಸಿದ್ದರು. ಭಟ್ಟರ ದೆಸೆಯೊಳ್ಳೇದಿತ್ತೆನ್ನಿ, ವ್ಯಾಪಾರ ಬೆಳೆಯುತ್ತಾ ಬಂತು. ಊರಿನಿಂದ ಹೆಂಡತಿಯನ್ನು ಕರೆಯಿಸಿಕೊಂಡು ಊಟದ ಹೊಟೆಲನ್ನು ಇಟ್ಟರು. ಮತ್ತೆ ಕೇಳಬೇಕೆ? ಶುಕ್ಲಪಕ್ಷದ ಚಂದ್ರನಂತೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋಯಿತಯ್ಯ ವಹಿವಾಟು! ಬೈರಾಗಿಗಳಿಂದ ಪ್ರಾರಂಭವಾಗಿ ಆಫೀಸರರ ವರೆಗೆ ರನ್ನಗಿರಿಗೆ ಬಂದವರಿಗೆಲ್ಲಾ ಊಟ, ಕಾಫಿ ಗಂಗಾಯಮುನಾ ವಿಶ್ರಾಂತಿ ಗೃಹದಲ್ಲಿ. ಭಟ್ಟರ ಕಿಸೆಯಲ್ಲಿ ಹಣವೂ ತುಂಬುತ್ತಾಬಂತು. ತಲೆಯ ಮೇಲಿನ ಜವಾಬ್ದಾರಿಯೂ ಹೆಚ್ಚುತ್ತಾಬಂತು. ಅನಿರುದ್ಧ ಭಟ್ಟರಿಗೆ ದೈವ ದೇವರುಗಳ ಮೇಲೆ ಭಯಭಕ್ತಿ ಜಾಸ್ತಿ. 'ಜೈ ಸೀತಾರಾಂ' ಎನ್ನುತ್ತಾ ಬಂದವನು ಮುಕ್ಕಾಲನ್ನೋ ಅರ್ಧಾಣೆಯನ್ನೋ ಪಡೆಯದೆ ಹಿಂದೆ ಹೋಗುತ್ತಿದ್ದಿಲ್ಲ. 'ಎಲ್ಲಿಯೋ ಪರ್ದೇಶಿಗಳಲ್ಲವೇ'ಎಂದು ಊಟಕ್ಕೆ ಬಂದಲ್ಲಿ ಕೂಡಾ ಬೈರಾಗಿಗಳನ್ನು ತಾತ್ಸಾರ ಮಾಡುವ ಕ್ರಮವಿಲ್ಲ. ದುಡ್ಡೊಂದನ್ನೇ ಗಂಟುಕಟ್ಟುತ್ತಾ ಬಂದರೆ ಅದೇನು ಪರಲೋಕದ ವರೆಗೂ ಬರುವದೆ? ಆದ್ದರಿಂದ ಭಟ್ರು ರಾತ್ರಿ ಹೊತ್ತಿನಲ್ಲಿ ಬೈರಾಗಿಗಳೊಡನೆ ಕುಳಿತು ವೇದಾಂತದ ಚರ್ಚೆ ನಡೆಸುವ ಪದ್ಧತಿಯಿತ್ತು. ವೇದಾಂತಿಗಳೊಳಗೆ ಬೇರೆ ಯಾರೊಳಗೂ ಬಾರದ ಸಮಾನತೆ ಬಂದು ಬಿಡುತ್ತದೆ. ಬೈರಾಗಿಗಳು ಮಾತಿನ ನಡುವೆ ಒಂದು ದಮ್ಮು ಎಳೆದು "ತಕೊಳ್ಳಿ, ಮಹಾರಾಜ್" ಎಂದು ಭಂಗಿ ನಳಿಗೆಯನ್ನು ತೋರಿಸುವಾಗ ಉದ್ದೇಶ ಪೂರ್ವಕವಾಗಿಯಲ್ಲವಾದರೂ ಭಟ್ಟರು ಅದನ್ನು ಕೈಗೆ ತೆಗೆದುಕೊಳ್ಳುವರು. ಮಾತು ಮುಂದರಿಸುವದು. "ವೇದಾಂತವನ್ನರಿಯಲು ಮನಸ್ಸಿನಲ್ಲಿ ಏಕಾಗ್ರತೆ ಬೇಕು ಮಹಾರಾಜ್. ಅದು ಈ ಭಂಗಿಯ ದಮ್ಮಿನಿಂದ ಬರುತ್ತದೆ ಮಹಾರಾಜ್. ಎಳೆದು ನೋಡಿ"ಎನ್ನುವನು ಬೈರಾಗಿ. ಸರಿ. ಏಕಾಗ್ರತೆಯಿಂದ ವೇದಾಂತವನ್ನು ಕಲಿಯಲಿಕ್ಕಲ್ಲದೆ ಭಟ್ರು ಮತ್ತೇನು ವಿನೋದವಾಡಲಿಕ್ಕೆ ಬಂದವರೆ? ಅವರೂ ಒಂದೆರಡು ದಮ್ಮು ಹಾಕುವರು. ಚರ್ಚೆಯು ಮುಂದುವರಿದು ವೇದಾಂತದ ಸಾರವೇ ಅನುಭವಕ್ಕೆ ಬರುವದು.

ooo ooo

ಐದಾರು 'ಮಾಣಿ'ಗಳನ್ನು ಹೊಟೆಲು ಕೆಲಸಕ್ಕಾಗಿ ಉಡುಪಿಯಿಂದ ತರಿಸಿದ್ದರು ಭಟ್ಟರು. ಕಾಫಿ ಚಾ ಮಾಡಿಕೊಡುವದು,ತಿಂಡಿತಯಾರಿ, ಅಡಿಗೆತಯಾರಿ, ಬಡಿಸುವ ಕೆಲಸ-ಇವಕ್ಕೆಲ್ಲಾ ಜನ ಬೇಕಲ್ಲ. ಪಲ್ಯಗಿಲ್ಯ ತಯಾರಿಯ ಕ್ರಮ ಹೇಳಲಿಕ್ಕೋಅಂತಹ ಇತರ ಕೆಲಸಕ್ಕೋ ಭಟ್ಟರ ಸಹಧರ್ಮಿಣಿ ಭಾಗೀರಥಮ್ಮ ಇದ್ದಾರೆ. ಪಲ್ಯ ಅರೆಯುವ ಕೆಲಸವು ಕಡೆಯುವ ಕಲ್ಲಿನಷ್ಟೇ ಗಟ್ಟಿಮುಟ್ಟಿನವನಾದ ಅಂತಪ್ಪನ ಪಾಲಿಗೆ ಬಂದಿದೆ.-ಅದಕ್ಕೆ ಹದಮಿತಿ ಹೇಳುವ ಜಾಣ್ಮೆ. ಭಾಗೀರಥಮ್ಮನದು. 'ಮೇಲೋಗರಕ್ಕೊಂದು ಉಪ್ಪು ಹಾಕುವ ಕೆಲಸವಲ್ಲವೇ?' ಎಂದು ತಾತ್ಸಾರ ಮಾಡಬೇಡಿ. ಅದಷ್ಟೇನೂ ಸುಲಭವಲ್ಲ. ಭಾಗೀರಥಮ್ಮ ಹೇಳಿದ ರೀತಿ ಮತ್ತುಸ್ವರ,

ಅಂತಪ್ಪನಿಗೊಮ್ಮೊಮ್ಮೆ ಅರ್ಥವಾಗುವದೇ ಇಲ್ಲ. ಅವಳು ಹತ್ತಿರ ಬಂದು ಹೇಳಬೇಕಾತ್ತದೆ. ಒಮ್ಮೊಮ್ಮೆ ತಾನೇ ಹಾಕಿ-ಅಂತಪ್ಪನ ಕಿವಿಯನ್ನೋ ಮೂಗನ್ನೋ ಹಿಡಿದು ಕಲಿಸಬೇಕಾಗುತ್ತದೆ. ಹೀಗೆ ಸಾಂಬಾರಗಳೆಲ್ಲಾ ಬಿದ್ದ ಮೇಲೂ ಕಲ್ಲನ್ನು ತಿರುಗಿಸಲಾಗದೆ ಅಂತಪ್ಪನ ಕೈ ನಿಧಾನವಾಗವುದೂ ಉಂಟು. ಆಗ ಸ್ವತಃ ಭಾಗೀರಥಮ್ಮನ ಕೈ ಸಹಾಯಕ್ಕೆ ಬಂದು ಎರಡು ಕೈಗಳೂ ಒಟ್ಟಾಗಿ ಕಲ್ಲು ತಿರುಗಿಸಬೇಕಾಗುತ್ತದೆ. ಈ ಕಲಿಸುವಿಕೆಯು ಒಮ್ಮೊಮ್ಮೆ ಮಿತಿಮೀರಿ ಅಂತಪ್ಪನ ಮುಖಕ್ಕೆ ಭಾಗೀರಥಮ್ಮ-ಭಾಗೀರಥಮ್ಮನ ಎದೆಗೆ ಅಂತಪ್ಪ, ಕಲ್ಲಿನಲ್ಲಿದ್ದ ಸಾಂಬಾರವನ್ನು ಪಚಕ್ಕನೆ ಲೇಪಿಸಿಬಿಡುವದೂ ಉಂಟು. ಕಡೆಗೆ ಒಬ್ಬರದನ್ನಿನ್ನೊಬ್ಬರುಜ್ಜಿ ತಪ್ಪನ್ನು ಸರಿಪಡಿಸಿಕೊಂಡು ಕಿಲಕಿಲ ನಗುವಿನೊಡನೆ ತೀರ್ಮಾನಕ್ಕೆ ಬರುವದೂ ಉಂಟು!

ooo ooo

ನಡು ರಾತ್ರಿಹೊತ್ತಿಗೆ ಅನಿರುದ್ಧ ಭಟ್ಟರ ಹೊಟ್ಟೆಯಲ್ಲಿ ಉರಿಯೆದ್ದಿರಬೇಕು. ಭಂಗಿಯೆಳೆದವರಿಗದರ ಅನುಭವವಿದ್ದೀತು.-ಲೋಕದಲ್ಲಿ ಲೌಕಿಕರು ಮಾಡುತ್ತಿರುವ ಅನ್ಯಾಯವನ್ನು ಕಂಡ ವೇದಾಂತಿಗಳಿಗೂ ಅದರ ಅನುಭವವಿರಲೇಬೇಕು. ಭಟ್ಟರು ಬೈರಾಗಿಗಳ ಕೂಟದಿಂದ ಮೆಲ್ಲನೆ ಎದ್ದರು. ತಂಗಳನ್ನವನ್ನಾದರೂ ಹೊಟ್ಟೆಗೆ ಸೇರಿಸಿಕೊಳ್ಳುವ ಮನಸಾಯಿತೇನೋ-ಸೀದಾ ಅಡಿಗೆ ಕೋಣೆಗೆ ಹೊರಟರು.ಭಂಗಿಯಮಹಾತ್ಮೆಯೇ ಹಾಗೆ- ತಿಂದಷ್ಟು ತಿನ್ನುವದೇ, ಹೋದ ದಿಕ್ಕುಹಿಡಿದು ಹೋಗುವದೇ! ಆದ್ದರಿಂದಲೇ ಹಿಂದೆ ಮುಂದೆ ನೋಡದೆ ಸೀದಾ ಗುರಿಮುಟ್ಟಬೇಕೆಂದು ಸ್ವರ್ಗದ ಕಡೆಗೆ ಹೊರಟ ಬೈರಾಗಿಗಳು ಭಂಗಿಯೆಳೆಯುವರೆಂದು ಭಾವಿಸಿಕೊಳ್ಳಿ. ನಮ್ಮ ಭಟ್ಟರೀಗ ಹೊರಟದ್ದುಸ್ವರ್ಗಕ್ಕಲ್ಲ-ಸೀದಾ ನರಕದ ಕಡೆಗೆ. ಆದರೂ ಭಂಗಿಯ ಗುಣದಲ್ಲಿ ವ್ಯತ್ಯಾಸವಿಲ್ಲ. ಮುಂದುವರಿದು ಹೋಗಿ ಅಡಿಗೆ ಮನೆಯ ಬಾಗಿಲು ಹಾಕಿದ್ದು ತಿಳಿಯದೆ ತಲೆ ತಾಗಿಸಿದರು. ಬಾಗಿಲು 'ಭಡಮ್' ಎಂದಿತು. 'ಹಾಂ' ಎನ್ನುತ್ತಾ ಪುನಃ ಮುಂದರಿದರು-ಪುನಃ ಧಡಮ್ಮಾಯಿತು. ಬಾಗಿಲಿಗೆ ಹೋಗಿ ತಲೆ ತಾಡಿಸುವದು—ಪೆಟ್ಟುತಿಂದು ಹಿಂದೆ ಬಂದಂತೆಯೇ ಪುನಃ ಹೋಗಿ ಹಾಯುವದು-ಹೀಗೆ ಐದಾರು ಸಲ ನಡೆಯಿತು. ಆ ಹೊತ್ತಿಗೆ ಒಳಗೆ ದಡಬಡ ಸದ್ದಾಗಲಿಕ್ಕೆ ಪ್ರಾರಂಭ. ಒಳಗಿನಿಂದ ಹಾಗಿದ್ದ ಕೀಲು ಜಾರಿತು, ಬಾಗಿಲು ತೆರೆಯಿತು,ಎನ್ನುವಷ್ಟರಲ್ಲಿ ವಾಣಿ ಅಂತಪ್ಪ ದಬಕ್ಕನೆ ಒಂದು ಬದಿಗೆ ಹಾರಿ ಓಡಿಹೋದ; ಒಳಗೆ ಭಾಗೀರಥಮ್ಮ ಹೇಗೆ ಹೇಗೊ ನೋಡುತ್ತಾ,ಏನನ್ನೋ ಮಾಡುವವಳಂತಿದ್ದಳು. ಅನಿರುದ್ಧ ಭಟ್ಟ ಪಿಳಿಪಿಳಿ ನೋಡುತ್ತಾ ನಿಂತುಕೊಂಡ. ಅದು ಹಾಗೆಯೇ, ಭಂಗಿಯ ಅಮಲೇರಿದವರು ನೋಡ ಹತ್ತಿದ ಮೇಲೆ ನೋಡುವದೇ!



"ನನ್ನ ಮತ್ತು ಭಾಗೀರಥಿಯ ಸಂಬಂಧದಲ್ಲಿ ಅಷ್ಟೆಲ್ಲಾ ಗೊಂದಲ ಮಾಡಿ ಹಾಕಿದಿ ಯಾಕೆ ಯಮುನಾ?"

"ಮತ್ತೆ ನಾನಿರುವಾಗ ನೀವು ಅವಳನ್ನೇಕೆ ಪ್ರೀತಿಸಿದಿರಿ?"

ooo ooo

ಮರುದಿನ ಬೆಳಿಗ್ಗೆ ಹೊಟೆಲಿನಲ್ಲಿ ಡುಬ್ ಡುಬ್ ಡುಬ್ ಗುದ್ದು ಬೀಳುವ ಸದ್ದು ಕೇಳಿ ಒಳಗಿನವರೂ ಹೊರಗಿನವರೂಓಡಿ ಬಂದರು. ಅಂತಪ್ಪನ ಜುಟ್ಟು ಹಿಡಿದು ಅನಿರುದ್ಧ ಭಟ್ಟರು ಗುದ್ದುತಿದ್ದರು.ದೋಸೆಗೆಂದು ಮಾಡಿ ತಂದಿದ್ದ ಚಟ್ನಿಯ ಪಾತ್ರೆ ಕವಚಿ ಬಿದ್ದಿತ್ತು.'ಇದು ಮನುಷ್ಯರು

ತಿನ್ನಬೇಕೆಂದು ಮಾಡಿದ ಚಟ್ನಿಯೋ? ತಿಂದು ಕೊಬ್ಬಿ ಹೋಗಿದ್ದಿ!' ಎನ್ನುತ್ತಾ ಹೊಡೆಯುತ್ತಿದ್ದರು ಭಟ್ರು. ಈ ಚಟ್ನಿ ಮಣ್ಣಿಗೆ ಬೀಳದಿರುತ್ತಿದ್ದರೆ ಅದರಲ್ಲಿ ಮತ್ತಾವ ತಪ್ಪೂ ಇರಲಿಲ್ಲ. ಹಾಗಾದರೆ ಮಾಣಿ ಬೇರಾವುದನ್ನೋ ಚಟ್ನಿ ಮಾಡಿರಬೇಕು! 'ಹೊರಡು ನನ್ನ ಹೊಟೆಲಿನಿಂದ!' ಭಟ್ಟರು ಮಾಣಿಯ ಕುತ್ತಿಗೆ ಹಿಡಿದು ಹೊರದಬ್ಬಿದರು.

೦೦೦ ೦೦೦

ಆ ಮೇಲಿನ ಆರು ತಿಂಗಳ ನಂತರದ ಸಂಗತಿಯಿದು. ಗಂಗಾಯಮುನಾ ವಿಶ್ರಾಂತಿಗೃಹದ ಉಪ್ಪರಿಗೆಯಲ್ಲಿ ಉಡುಪಿಯಿಂದ ಬಂದ ಮೂವರು ಗೃಹಸ್ಥರು ಮತ್ತು ಭಾಗೀರಥಮ್ಮನ ಅಣ್ಣ, ಅನಿರುದ್ಧ ಭಟ್ಟರನ್ನು ನಿಲ್ಲಿಸಿಕೊಂಡು ಪಂಚಾಯತಿಕೆ ನಡೆಸುತ್ತಿದ್ದಾರೆ. ಭಾಗೀರಥಮ್ಮನ ಅಣ್ಣ ಕೈಯನ್ನು ನೆಲಕ್ಕೆ ಹೊಡೆದು ಮಾತನಾಡುವ ಅಬ್ಬರಕ್ಕೆ ಕುಳಿತಿದ್ದ ಚಾಪೆಯ ಧೂಳೆಲ್ಲಾ ಹಾರುತ್ತಿದೆ. 'ಇವನ ಕೈಯಲ್ಲೀಗ ಎರಡು ಪುಡಿಕಾಸು ತಿರುಗತ್ತದಪ್ಪಾ! ಉಡುಪಿಯ ಕೃಷ್ಣ ದೊಡ್ಡವನಲ್ಲವೇ? ಅವನಿಗದು ತೃಪ್ತಿಯಾದರೆ ಸಾಕು! ಈಗ ಇವ ಇಷ್ಟೇ ಹೇಳಲಿ,-ನಮ್ಮ ಹುಡುಗಿಯನ್ನು ಬಿಟ್ಟಾಯಿತು, ಬೇರೆ ಮದುವೆ ಮಾಡಿಕೊಂಡೂ ಆಯಿತು. ಈಗ ಅಶನಾರ್ಥ ಕೊಡುತ್ತಾನೋ ಇಲ್ಲವೋ ಕೇಳಿ. ಇಲ್ಲವೆನ್ನುತ್ತಾನೋ - ಏಳಿ ಹೊರುಡುವ!' ಇದು ಗೃಹಸ್ಥರೊಡನೆ ಆ ಬ್ರಾಹ್ಮಣ ಹೇಳಿದ ಮಾತುಗಳು. ಅನಿರುದ್ಧ ಭಟ್ಟರ ಹೇಳಿಕೆಯಿಷ್ಟೆ-'ನಾನು ಅವಳನ್ನೂ ಮದುವೆಮಾಡಿಕೊಂಡಿದ್ದೇನೆ; ಇವಳನ್ನೂ ಮದುವೆಮಾಡಿಕೊಂಡಿದ್ದೇನೆ. ಅವಳೂ ಬರಲಿ, ಇಬ್ಬರನ್ನೂ ನೋಡಿಕೊಂಡಿರುತ್ತೇನೆ. ನನಗಷ್ಟು ಸಾಮರ್ಥ್ಯವುಂಟೆನ್ನುತ್ತೇನಲ್ಲ!" ಆ ಮೇಲೂ ಪಂಚಾಯಿತಿಕೆ ಮಾತಾಡಲಿಕ್ಕುಂಟೆ? ಗೃಹಸ್ಥರೂ ಹಾಗೆಂದೇ ತೀರ್ಪು ಕೊಟ್ಟರು. 'ಇಬ್ಬರನ್ನೂ ಒಂದೇ ರೀತಿಯಲ್ಲಿ ನೋಡಿಕೊಂಡಿರಬೇಕು. ಇನ್ನು ಮುಂದೆ ಹೊಡೆಯುವದಾಗಲೀ ಹೊರಹಾಕುವದಾಗಲೀ ಕೂಡದು' ಎಂದು ತೀರ್ಮಾನಿಸಿ ಇತ್ತಂಡದವರಿಗೂ ಬೇಕಾದಷ್ಟು ಸಮಾಧಾನ, ಬುದ್ಧಿವಾದ ಹೇಳಿ-ಭಾಗೀರಥಮ್ಮನ ಅಣ್ಣನ ದುಡ್ಡಿನಿಂದ ಬಂದಿದ್ದರೆ, ಅನಿರುದ್ಧ ಭಟ್ಟನ ದುಡ್ಡಿನಿಂದ ಬಸ್ಸು ಹತ್ತಿ ಹೋದರೆಷ್ಟೆ!

ನಾಲ್ಕೇ ದಿನಗಳೊಳಗೆ ಭಾಗೀರಥಮ್ಮ ಪುನಃ ಗಂಗಾ ಯಮುನಾ ವಿಶ್ರಾಂತಿ ಗೃಹವನ್ನು ಪ್ರವೇಶಿಸಿದಳು. ಕಸಗುಡಿಸಿಕೊಂಡು, ಮುಸರೆ ತಿಕ್ಕಿಕೊಂಡು ಇದ್ದುಬಿಟ್ಟಳು.

೦೦೦ ೦೦೦

ಅನಿರುದ್ಧ ಭಟ್ಟರ ಎರಡನೇ ಹೆಂಡತಿಯಿದ್ದಾಳಲ್ಲಾ —ಅವಳು ಭಾಗೀರಥಮ್ಮನಂತಲ್ಲ. ಚಿಕ್ಕ ಪ್ರಾಯದವಳು, ಒಳ್ಳೆ ಚುರುಕಿನ ಹುಡುಗಿ! ಅನಿರುದ್ಧ ಭಟ್ಟನ ತಲೆಗೆ ತಾಗುವಷ್ಟು ಭದ್ರವಾಗಿ ಅಡಿಗೆ ಮನೆಯ ಚಿಲಕ ಜಡಿಯುವ ಕೆಲಸವನ್ನು ಮಾಡುವವಳಲ್ಲ.-ಹೀಗೆಂದು ಅವಳನ್ನರಿತವರೆಲ್ಲರ ಅಭಿಪ್ರಾಯ. ತಿರುಗಿ ಬಂದ ಭಾಗೀರಥಮ್ಮನಿಂದಲೂ ತಿರುಗಿ ಆ ಅನ್ಯಾಯವಾಗುವಂತಿಲ್ಲ. ಅವಳೀಗ ಚಿಲುಕವಿಲ್ಲದ ಪಡಸಾಲೆಯಲ್ಲಿಯೋ ಅಂಗಳದ ಮೂಲೆಯಲ್ಲಿಯೋ, ಮಲಗಿಕೊಳ್ಳುತ್ತಾಳೆ!

೦೦೦ ೦೦೦

ನಮ್ಮಲ್ಲಿ ಜಾತ್ಯಭಿಮಾನ, ಸ್ಥಳಾಭಿಮಾನವೆಂಬುದು ಇನ್ನೂ ಹೋಗಿಲ್ಲವೆನ್ನಿ. ರತ್ನಗಿರಿಗೆ ಬಂದ ಉಡುಪಿಯವರೆಲ್ಲರೂ ಹೋಗುವದು ಅನಿರುದ್ಧ ಭಟ್ಟರ ಹೊಟೆಲನ್ನು ಹುಡುಕಿಕೊಂಡು. ಬಾಕಿಯವರಿರಲಿ, ಒಬ್ಬ ಪೋಲಿಸು ಜವಾನ-ಅವನೂ ಉಡುಪಿ ಬ್ರಾಹ್ಮಣನಂತೆ, ಇಲ್ಲಿಗೆ ವರ್ಗವಾಗಿ ಬಂದವನಂತೆ-ಬಂದು ಗಂಗಾಯಮುನಾ ವಿಶ್ರಾಂತಿ ಗೃಹದಲ್ಲಿಯೇ ಉಳಕೊಂಡ. ಊಟಕ್ಕೆಂದು, ಕಾಫಿಗೆಂದು ದಿನದಲ್ಲಿ ಮೂರು ನಾಲ್ಕು ಸಲ ತಪ್ಪದೆ ಅವನ ಬೂಟ್ಸಿನ 'ಸಡಕ್‌ಬುಡುಕ್' ಶಬ್ದ ಹೊಟೆಲಿನಲ್ಲಾಗುತಿತ್ತು. ಅವ ಖಾಕಿ ಚಲ್ಲಾಣ ಶರ್ಟನ್ನು ಕಳಚಿಡುವ ಹೊತ್ತಿಗೆ ಭಾಗೀರಥಮ್ಮ ಅಂಗಳದ ಮೂಲೆಯಲ್ಲಿ ತಯಾರು! ಬಚ್ಚಲುಕೊಟ್ಟಿಗೆಗೆ ಹೋಗಿ ಹಂಡೆಯ ನೀರು ಬಿಸಿಯುಂಟೆಂದು ಆಳನ್ನು 'ಹೇ' ಎಂದು ಅವ ಒಂದು ಕೂಗಿ ಎರಡು ಕೂಗುವದರೊಳಗೆ ಕೊಡಪಾನ ತುಂಬಾ ಗಂಗೋದಕದೊಡನೆ ಭಾಗೀರಥಿ ಪ್ರತ್ಯಕ್ಷ! ಅವಳು ಆ ಬಿಸಿ ನೀರನ್ನು ತಣಿಸಿ ಹೊರಬೀಳುವಾಗ ಎಷ್ಟೋ ಸಮಯ ಕಳೆದು ಹೋಗುವದುಂಟು. ಆ ಸಮಯವೆಷ್ಟು ಎಂದು ಗಡಿಯಾರ ನೋಡಿ ಲೆಖ್ಖ ಮಾಡಲು ಅಡಿಗೆ ಮನೆಯ ಬಾಗಿಲ ಸಂದಿನಿಂದಿಣುಕುತ್ತಾ ಯಮುನಮ್ಮ ಇದ್ದೇ ಇದ್ದಾಳೆ. (ತವರುಮನೆಯವರು ಅವಳಿಗಿಟ್ಟ ಹೆಸರು 'ಸರಸ್ವತಿ' ಅನ್ನುತ್ತಾರೆ, ಅನಿರುದ್ಧ ಭಟ್ಟ

ರಿಟ್ಟ ಹೆಸರಾವುದೋ ಸನಗರಿಯದು; ಭಾಗೀರಥಿಯನ್ನು ಮೊದಲು ಮದುವೆ ಮಾಡಿಕೊಂಡವರು, ಹೊಟೆಲಿಗೆ 'ಗಂಗಾ ಯಮುನಾ' ಹೆಸರಿಟ್ಟವರು, ಎರಡನೇ ಹೆಂಡತಿಗೆ 'ಯಮುನಾ' ಹೆಸರಿಟ್ಟರೇನೆ ಅರ್ಥವುಂಟೆನ್ನಿ!) ಪೋಲಿಸು ಜವಾನ ಆ ಹಳೇ ಅಪರಾಧಿಯನ್ನು ಕಂಡು ನಗುವ ರೀತಿ, ಬಾಗೀರಥಿ ಸಮುದ್ರದೊಡನೆ ಸಂಗಮವಾಗಲು ಹೋಗುವವಳಂತೆ ಡೊಂಕುಡೊಂಕಾಗಿ ಅವನೆಡೆಗೆ ಹೋಗುವ ನಮೂನೆ-ಇವನ್ನೆಲ್ಲಾ ತೀಕ್ಷ್ಣ ದೃಷ್ಟಿಯಿಂದ, ಮುರುಟಿದ ಮುಖದಿಂದ ಯಮುನಮ್ಮ ಮರೆಯಲ್ಲಿ ನಿಂತು ನೋಡುವದಿತ್ತು. ಪೋಲಿಸನಿಗೆ ಬಚ್ಚಲು ಕೋಣೆಯಲ್ಲಿ ಮತ್ತು ಅಂಗಳದಲ್ಲಿದ್ದಷ್ಟು ಕೆಲಸ ಅಡುಗೆ ಕೋಣೆಯಲ್ಲಿಲ್ಲ! ಸ್ನಾನಕ್ಕಷ್ಟು ಹೊತ್ತು ತಾಗುವ ದೊಡ್ಡ ದೇಹದವನಿಗೆ ಊಟಕ್ಕೈದೇ ಮಿನಿಟು ಸಾಕಾಗುತ್ತದೆ! ಯಮುನಮ್ಮ ಬಡಿಸಲಿಕ್ಕೆ ಬಂದಾಗ ಅವನದು 'ಬೇಕು ಬೇಡ'-ಇಷ್ಟೆ! ತಲೆಗಡಿಯಿಟ್ಟು ಕುಳಿತರೆ ಏಳುವ ವರೆಗೆ ಎಲೆ ನೋಡುತ್ತಾನೆ ಹೊರತು ಮೇಲ್ಗಡೆ ಕಮಲವರಳಿನಿಂತರೂ ಅವನು ಕಾಣಲಾರ; ಹ್ಣಾಂ-ಹೀಗುಂಟೋ ರೋಗ!

೦೦೦ ೦೦೦

ಒಂದು ದಿನ ಪೋಲಿಸು ಬೆಳಗ್ಗಿನ ಕಾಫಿಗೆಂದು ಹೋಟೆಲಿಗೆ ಬರುತ್ತಾನೆ-ಇಲ್ಲಿಗೊಂದಲವೇ ಗೊಂದಲ. 'ಮಾರಿ ರಂಡೆ! ನಿನ್ನನ್ನಿನ್ನು ಹೊರಗಟ್ಟುವುದಲ್ಲ; ಕೊಂದೇ ಹಾಕುತ್ತೇನೆ ನೋಡು!" ಎನ್ನುತ್ತಾ ಅನಿರುದ್ಧ ಭಟ್ಟ ಭಾಗೀರಥಮ್ಮನನ್ನು ಹಿಡಿದು ಬಿಡುತ್ತಾನೆ ಗುದ್ದು-ಮದುವೆ ಚಪ್ಪರದಲ್ಲಿ ಗರ್ನಾಲು ಬಿಟ್ಟ ಹಾಗೆ! "ಹೇ—ಏನು ಮಾಡುತ್ತಿದ್ದಿಯಾ?" ಎನ್ನುತ್ತಾ ಹೋಗಿ ಪೋಲಿಸು ಜುಟ್ಟಿನ ಕೈ ಬಿಡಿಸಿದ. ಪೋಲಿಸನು ಸ್ವತಃ ಬಂದು ಹೊಡೆಯುವದನ್ನು ತಡೆದನೆಂದರೆ ಈ ಜಗಳದಲ್ಲಿ ಸರಕಾರವೇ ಕೈಹಾಕಿದ ಹಾಗಾಯಿತಲ್ಲ. ಮತ್ತೂ ಹೊಡೆಯುವದಕ್ಕೆ ಕಾನೂನುಂಟೆ? 'ಯಾಕೆ ಹೊಡೆದಿರಿ ಭಟ್ರೆ?' ಎಂದು ಪೋಲಿಸು ವಿಚಾರಣೆ ಕೂಡಾ ನಡೆಯಿತು. ಅನಿರುದ್ಧ ಭಟ್ಟ ಅವನೊಡನೆ ಮಾತಾಡುವದು ಬಿಡಿ- ಮುಖ ಕೂಡ ನೋಡದೆ ಅಲ್ಲಿಂದ ಹೋಗಿಬಿಟ್ಟ.

ಪೋಲಿಸಿನವ ಮಿಕ್ಕವರೊಡನೆ ವಿಚಾರಿಸಿದ. ಹೆಚ್ಚಿನವರು ಹೇಳಲಿಲ್ಲ. ಕೊನೆಗೆ ತಿಳಿಯಿತು-ಮುಂಚಿನ ರಾತ್ರಿ ಸ್ವತಃ ಅವನೇ ನಡಿಸಿದ್ದ ಭಾಗೀರಥೀ ಯಾತ್ರೆಯ ವರ್ಣನೆಯನ್ನು ಯಮುನಮ್ಮ ಗಂಡನೊಡನೆ ಹೇಳಿ ಅಷ್ಟೆಲ್ಲಾ ಮಾಡಿಸಿ ಬಿಟ್ಟಳೆಂದು!

೦೦೦ ೦೦೦

ಕಳ್ಳನಾದರೂ ಸಂಭಾವಿತತನ ತೋರಿಸುವದನ್ನು ಬಿಡಬಾರದಂತೆ. ಅದನ್ನು ಪೋಲಿಸರಿಗೆ ಕಲಿಸಬೇಕೆಂದಿಲ್ಲವೆನ್ನಿ. ಈ ಜವಾನನು ಯಾವ ಶಂಕೆಯನ್ನೂ ತೋರ್ಪಡಿಸದೆ ಎಂದಿನಂತೆ, ಮಧ್ಯಾಹ್ನ ಊಟಕ್ಕೆ ಬಂದು ಕುಳಿತ. ಯಮುನನಲ್ಲಿ ಒಂದು ಬಗೆಯ ಉತ್ಸಾಹವಿರುವುದನ್ನು ಒರೆಗಣ್ಣಿನಿಂದ ನೋಡಿ ತಿಳಿದು

Regd.




# ಮೇಹಧ್ವಂಸಿನಿ

ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ. ಶರೀರವನ್ನು ಕೃಶಿಸಿ ಮಾನವನ ಜೀವಶ್ರವಗೈಯುತ್ತಿರುವ ಬಿಳುಪು, ಕೆಂಪು, ಪರಂಗಿ ಹುಣ್ಣು, ಮೇಹಗಡ್ಡೆ, ಮೇಹಜ್ವರ, ಚರ್ಮವ್ಯಾಧಿ, ಕೀಲುಗಳ ನೋವು, ಅತಿಮೂತ್ರ ವಗೈರೆ ಚಿನ್ಹೆಗಳನ್ನು 'ಮೇಹಧ್ವಂಸಿನಿ'ಯು ಶೀಘ್ರವಾಗಿ ಖಂಡಿಸಿ, ರಕ್ತಶುದ್ಧಿ ಮಾಡಿ ನರಗಳಿಗೆ ಬಲವನ್ನೀಯುವುದು. ಸೇವಿಸುವುದಕ್ಕೆ ಹಿತಕರ. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತಗುಣವಿದೆ

ದೊಡ್ಡಸೈಜು 4-0-0- ಮಿಡಿಯಂ ಸೈಜು 2-4-0. ಚಿಕ್ಕ 1-2-0

ಹಂಚಿ ಕೊಡುವ ಪ್ರಮುಖರು:- **ಬಾಸೆಲ್ ಮಿಶ್ಯನ್ ಪ್ರೆಸ್, ಮಂಗಳೂರು.**
ಸಬ್ ಏಜಂಟರು:— **ಉಡುಪಿ ಮಿಶ್ಯನ್ ಶೋಪ್, ಸಂತೆಕಟ್ಟೆ, ಉಡುಪಿ.**
**ವಿ. ವಿ. ಶೆಣ್ಯೆ, ಕಾರ್ಕಳ.** **ಭಕ್ತಾ ಬ್ರದರ್ಸ್, ಕಾಸರಗೋಡು.**

ಕೊಂಡ. ಉಪ್ಪಿನಕಾಯಿ, ಪಲ್ಯ, ಬಡಿಸಲು ದರ್ಪದಿಂದಲೇ ಬಂದು ಹೋದಳೆಂದುತೋರಿತುಜವಾನನಿಗೆ. ಅವಳು ಅನ್ನ ತಂದು ಜಾರಿಸಲು ಬಗ್ಗಿದಾಗವೆಲ್ಲಗೆ ಹಾಗೂ ಗರಮ್ಮಿನಿಂದ ಹೇಳಿದ “ಹಾಗೆಲ್ಲಾ ತರಳೆ ಹೇಳುವ ಆಗತ್ಯ ನಿನಗೇನಿತ್ತು? ಅವಳನ್ನು ನೀವಿಬ್ಬರೂ ದಾಸಿಯ ಹಾಗೆ ಕಾಣುವದು ಬೇರೆ; ಆ ಮೇಲೆ ಈ ರೀತಿ ಅಪವಾದ ಹೊರಿಸುವುದು ಬೇರೆ!”

“ಮತ್ತೆ ನೀವೇನಿದು ಸೂಳೇರ ಮನೆಯೆಂದು ಭಾವಿಸಿದಿರಾ?” ಅನ್ನ ಝಾಡಿಸುವಾಗ ಈ ಮಾತನ್ನೂ ಝಾಡಿಸಿ ಹೇಳಿದಳು ಯಮುನಮ್ಮ. ‘ಓಹೋ! ನೀನು ದೊಡ್ಡ ಸೀತಾದೇವಿ’ ಯಮುನ ಸಾರು ತಂದಾಗ ಜವಾನನ ಮಾತು.

‘ನೀವು ಹೇಳುವದೇನು, ಸೀತಾದೇವಿಯೇ! ಆ ಸೂಳೆಯ ಹಾಗಲ್ಲಾ!’ ಹಿಂದಿರುಗುವಾಗ ಯಮುನೆಯ ಉತ್ತರ.

ಹುಳಿ ಬಡಿಸಲಿಕ್ಕೆಂದು ಬಂದ ಯಮುನ ಮುಂಭಾಗದಲ್ಲಿ ನಿಂತಿದ್ದಳು. ಸಾರನ್ನವನ್ನು ಕಲಸುತ್ತಾ ಬಗ್ಗಿದಲ್ಲಿಯೇ ಜವಾನನೆಂದ: ‘ಈ ಮೊದಲು ಎಷ್ಟು ಜನರನ್ನು ಕಂಡವ ನಾನು! ನಿನ್ನ ಘನಸ್ಥಿಕೆಯೆಷ್ಟರದು! ಪಂಥ ಹಾಕುವಿಯಾ- ಲೆಕ್ಕಮಾಡಿ ಎಂಟು ದಿನಗಳೊಳಗೆ ಅಕ್ಕನ ಗತಿಯೇ ತಂಗಿಗೂ ಬಂತೆಂಬುದನ್ನು ತೋರಿಸಿಕೊಡಬೇಕೆ?’

‘ಓಹೊಹೊ! ಏನೂ ಅಡ್ಡಿಯಿಲ್ಲ- ಊಟಮಾಡಿದ ಹಾಗಲ್ಲ!’

‘ಹಾಗಾದರೆ ಕೇಳು. ಇಂದಿನಿಂದ ಒಂದು ವಾರದೊಳಗೆ ‘ನಿನ್ನ ಪಂಥ ಹೋಯಿತು’ ಅನ್ನಿಸದಿದ್ದರೆ ನಾನು ಪೋಲೀಸು ಕೆಲಸವನ್ನೇ ಬಿಡುತ್ತೇನೆ!’ ಎಲೆಯಿಂದ ಕೈತೆಗೆದು ಶಪಥಹಾಕಿದ ಜವಾನ. ಯಮುನೆ ಹುಳಿಯನ್ನಷ್ಟು ಎಲೆಗೆ ಹಾಕಿ ಹಿಂದಿರುಗುವಾಗ ಹೇಳಿದಳು:—

‘ಹಾಗಾಗುವಾಗ ನೋಡಿಕೊಂಡರಾಯಿತು!’

ooo ooo

ಘಂಟೆ ಹತ್ತೂವರೆ ಆಯಿತು. ಪೋಲಿಸಿನವ ಊಟಕ್ಕೆಬಂದಿರಲಿಲ್ಲ. ‘ಯಾವಾಗ ಸಾಯುತ್ತಾನೆಂದು ಕಾಯುವದು? ನೀವು ದೀಪ ಸಣ್ಣದು ಮಾಡಿ ಮಲಗಿಕೊಳ್ಳಿ ನೋಡುವಾ! ಬಂದಾಗ ಎದ್ದರಾಯಿತು!” ಎಂದಳು ಕೆಲಸದವರೊಡನೆ ಯಮುನಾ. ‘ಎಲ್ಲಿಯೋ ಹಳ್ಳಿಯಲ್ಲೊಂದು ಕೇಸುಂಟಂತೆ. ಅಲ್ಲಿಗೆ ಹೋಗಿದ್ದಾರಂತೆ. ಎಷ್ಟು ರಾತ್ರಿಯೊದರೂ ಊಟಕ್ಕೆ ಬಾರದಿರುವದಿಲ್ಲವೆಂದು ಯಜಮಾನರೊಡನೆ ಹೇಳಿ ಹೋಗಿದ್ದಾರಂತೆ.’ ಎಂದು ಕೆಲಸದವ ಹೇಳಿದ. ‘ಯಜಮಾನರಿಗೇನು? ಅವರಲ್ಲಿ ಬಂಗಿಯೆಳೆದು ಬಿದ್ದಿದ್ದಾರಲ್ಲ. ಬಂದರೆ ಮತ್ತೆ ತಂಗಳನ್ನ ಉಣ್ಣಲಿ! ನೀವೀಗ ಮಲಗಿ” ಎಂದು ಯಮುನಾ ಅವರನ್ನೆಲ್ಲಾ ಕಳುಹಿಸಿದಳು. ದೀಪ ಕಿರಿದು ಮಾಡಿ ತಾನೂ ಮಲಗಿಕೊಂಡಳು.

ಘಂಟೆ ಹನ್ನೆರಡಕ್ಕೆ ಸಮೀಪಿಸಿರಬಹುದು ಒಳಬದಿಯ ಕಿರುದ್ವಾರವನ್ನು ಯಾರೋ ತಟ್ಟಿದಂತಾಯಿತು ‘ನರ್ಸಪ್ಪಾ! ನರ್ಸಪ್ಪಾ!’- ಪೋಲಿಸು ಜವಾನನ ಸ್ವರ. ಮುಂಜಾನೆ ಐದು ಘಂಟೆಯಿಂದ ರಾತ್ರಿ ಹನ್ನೊಂದು ಘಂಟೆಯ ವರೆಗೆ ದುಡಿದು ‘ಅಯ್ಯಪ್ಪ’ ಎಂದು ಚಾಪೆ ಹಿಡಿದಿದ್ದ ನರ್ಸಪ್ಪ ಈ ಲೋಕದಲ್ಲಿದ್ದರಲ್ಲವೇ ಎದ್ದಾನು? ಒಳಗಿನಿಂದ ಯಮುನೆ ಸ್ವಲ್ಪ ಗಟ್ಟಿಯಾಗಿಯೇ ‘ನರ್ಸಪ್ಪಾ - ನರ್ಸಪ್ಪಾ’ ಎಂದಳು.

ನರ್ಸಪ್ಪ ಗೊರಿಕೆ ಹೊಡೆಯುತ್ತಿದ್ದ. ‘ಹಾ. ನರ್ಸಪ್ಪನನ್ನೇ ಎಬ್ಬಿಸುತ್ತಾಳಲ್ಲಾ-ಒಮ್ಮೆ ಅವಳು ಬಾ


# ಶ್ರೀ ಹರಿಕಥಾಮೃತಸಾರ

[ಶ್ರೀ ಪದ್ಮನಾಭರಿಂದ ರಚಿತವಾದ ಭಾವಪ್ರಕಾಶಿಕೆ ಎಂಬ ವ್ಯಾಖ್ಯಾನ ಸಹಿತ]

(ಡೆಮ್ಮಿ ⅛ 1600 ಪುಟಗಳು)

**ಬೆಲೆ ರೂ. 12-0-0 ಟ. ಖ. ಬೇರೆ**

## ಎಂ. ಮೂರ್ತಿ ರಾವ್

**‘ಶ್ರೀ ಹರಿಕೃಪಾ’ ಕಾರ್ಯಾಲಯ,**

**ಮಲ್ಲೇಶ್ವರಂ --- ಬೆಂಗಳೂರು ಸಿಟಿ.**

ಗಿಲು ತೆಗೆಯಬೇಕಿತ್ತು. ಮತ್ತೇನೇ ಆಗಲಿ-ಆವಳ ಪಂಥವೊಮ್ಮೆನೋಡಿ ಬಿಡುತ್ತಿದ್ದೆ!' ಎಂದು ಜವಾನ ತುದಿ ಗಾಲಲ್ಲಿ ನಿಂತಿದ್ದ.

'ಅಯ್ಯಬ್ಬ ದೇವಾ!' ಎನ್ನುತ್ತಾ ಯಮುನ ಮೈ ಚಿಟಕಿ ತೆಗೆಯುವದು ಕೇಳಿಸಿತು. ಹ್ಞಾಂ!-ಎದ್ದಳು. ಪೋಲೀಸ್ ತಯಾರಾಗಿ ನಿಂತ. ಬಾಗಿಲಿನ ಚಿಲುಕ ಜಾರಿತು-ಕದ ತೆರೆಯಲ್ಪಟ್ಟಿತು. ಆ ಕಗ್ಗತ್ತಲಲ್ಲಿ ದೀಪ ತಂದಿರಲಿಲ್ಲ.

ಅಷ್ಟಾಯಿತೋ ಇಲ್ಲವೋ ಎನ್ನುವಾಗ ಪೋಲೀಸು ಜವಾನನ ಒಂದು ಕೈಯ್ಯು ಯಮುನೆಯ ನಡುವನ್ನು, ಮತ್ತೊಂದು ಕೈಯು ಅವಳ ಬಾಯಿಯನ್ನು ಅವಸರವಸರದಿಂದ ಹುಡುಕುತಿತ್ತು.

'ಒಳಗೆ ಬನ್ನಿ, ಒಳಗೆ ಬನ್ನಿ!' ಮೈಯೊತ್ತಿನಿಂತು ಪಿಸುಗುಟ್ಟಿದಳು ಯಮುನಾ. ಅವಳ ಕೈಗಳು ಜವಾನನ್ನ ಕೈಗಳನ್ನು ಹಿಡಿದುಕೊಂಡವು; ಮುಖವು ಮುಖದ ಕಡೆಗೆ ಮುಂದರಿದು ತಾಗಿತು.

'ಯಮುನಾ! ಹೀಗಿದ್ದ ಮೇಲೆ ನರ್ಸಪ್ಪನನ್ನೇಕೆ ಆಗ ಕೂಗಿದೆ?" ಅವಳ ತುಟಿಯ ಬಳಿಯಲ್ಲಿ ಪೋಲಿಸನ ಪಿಸುಮಾತು.

'ಅವರೆಚ್ಚರಿರುವರೋ- ಎಚ್ಚರಾಗುವರೋ ಎಂಬುದನ್ನು ತಿಳಿಯುವದಕ್ಕಾಗಿ!' ಯಮುನೆಯ ಗುಣುಗುಣು ಉತ್ತರ.

'ನೀನು ಆ ದಿನ ಭಾಗೀರಥಿ ಮತ್ತು ನನ್ನ ಕುರಿತು ಅಷ್ಟೆಲ್ಲಾ ಗೊಂದಲ ಮಾಡಿ ಹಾಕಿದಿಯಲ್ಲಾ -ಯಾಕೆ?'

'ಮತ್ತೆ ನಾನಿರುವಾಗ ನೀವವಳನ್ನು ಪ್ರೀತಿಸಿದಿರೇಕೆ?'

'ಓ—ಹೋ! ಹಾಗಾದರೆ ನೀನು ಪಂಥ ಹಾಕಿಕೊಂಡಿದ್ದೇಕೆ ಯಮುನಾ!'

'ನನಗೂ ಪಂಥ ಬಿತ್ತು, ಹಿ ಹಿ ಹಿ ಹಿ ಹಿ!'

'ಹ ಹ ಹ ಹ ಹ ಹ ಹ ಹ!'

................

—ವಿ. ಹೆ.

---


ದಕ್ಷಿಣ ಹಿಂದುಸ್ಥಾನದ
ಪ್ರಸಿದ್ಧ ಯಾತ್ರಾಸ್ಥಳವಾದ
ಉಡುಪಿ ಕ್ಷೇತ್ರದಲ್ಲಿ
ಜರಗುವ ಉತ್ಸವಗಳಲ್ಲಿ
ಅತಿ ವಿಶೇಷವಾದ
ಮಕರ ಸಂಕ್ರಾಂತಿ
ಜಾತ್ರೆಯ ಕಾಲದಲ್ಲೇ
ಹೊರಡುವುದು—

ಪ್ರಸಿದ್ಧ ಬ್ಯಾಂಕುಗಳು,
ಇನ್ಶೂರೆನ್ಸ್ ಕಂಪೆನಿಗಳು,
ಇತರ ವ್ಯಾಪಾರಿ ಮತ್ತು
ಕೈಗಾರಿಕೆಯ ಸಂಸ್ಥೆಗಳು
ಇವುಗಳ ಪರಿಚಯ, ಬೆಳವಣಿಗೆ ಮುಂತಾದ
ಮಾಹಿತಿಯನ್ನು ಕೊಡಲಾಗುವುದು.

ನವಯುಗದ

# ಮಕರ ಸಂಕ್ರಾಂತಿ ವಿಶೇಷ ಸಂಚಿಕೆ

ಹೊಸ ಮಾದರಿ!
ಹೊಸ ಆಕರ್ಷಣ!
ಹೊಸ ವಿಚಾರ!
ಬೆಲೆ ಆಣೆ ೪ ಮಾತ್ರ!


ಜಾಹೀರಾತುದಾರರಿಗೆ ಇದಕ್ಕಿಂತ
ಉತ್ತಮ ಸಂದರ್ಭವಿನ್ನೊಂದಿಲ್ಲ.
ವಿಶೇಷ ಸಂಚಿಕೆಯ ಜಾಹಿರಾತಿನಿಂದ
ವಿಶೇಷ ಲಾಭವಾಗುವುದು.
ತ್ವರೆ ಮಾಡಿರಿ! ತ್ವರೆ ಮಾಡಿರಿ!

ಜಾಹಿರಾತಿನ ದರಗಳಿಗೂ ಏಜನ್ಸಿ ಶರ್ತಗಳಿಗೂ ಕೂಡಲೇ ಬರೆಯಿರಿ.

ಮೆನೇಜರ್, ನವಯುಗ, ಉಡುಪಿ, ದಕ್ಷಿಣ ಭಾರತ.

**Advertise in NAVAYUGA ANNUAL 1939.**

**Date of Publication 12 - 1 - 1939.**



# ನಿಮಗೆ ಬೇಸರವಾದಾಗ ನನಗೆ ಬರೆಯಿರಿ.

- ಪ್ರತಿವಾರವೂ ಕರ್ನಾಟಕದ ವಿವಿಧ ಭಾಗಗಳಿಂದ ಅಧಿಕ ಸಂಖ್ಯೆಯಲ್ಲಿ ಪ್ರಶ್ನೆಗಳು ಬರುತ್ತಿರುವುದರಿಂದ ಸ್ಥಳ ಸಂಕೋಚದ ದೆಸೆಯಿಂದ ಎಲ್ಲರ ಪ್ರಶ್ನೆಗಳು ಒಮ್ಮೆಯೇ ಉತ್ತರಿಸಲ್ಪಡಲಾಗುವುದಿಲ್ಲ.
- ಯೋಗ್ಯವಾದ ಪ್ರಶ್ನೆಗಳಿಗೆ ಯೋಗ್ಯವಾದ ಉತ್ತರಗಳು ಕೊಡಲ್ಪಡುವವು. ಕೇವಲ ತಮಾಷೆಗಾಗಿ ಕೇಳಲ್ಪಡುವಂಥವುಗಳಿಗೆ ತಮಾಷೆಯ ಉತ್ತರ ಕೊಡಲಾಗುವುದು.
- ಬಹಳ ಅಶ್ಲೀಲವಾದ ಪ್ರಶ್ನೆಗಳಿಗೆ ಈ ವಿಭಾಗದಲ್ಲಿ ಎಡೆಯಿಲ್ಲ.
- ಇತರ ಪತ್ರಿಕೆಗಳನ್ನು ಅಥವಾ ವ್ಯಕ್ತಿಗಳನ್ನು ಬೈದು ಕೇಳುವ ಪ್ರಶ್ನೆಗಳಿಗೆ ಉತ್ತರವು ಸಿಗಲಾರದು.
- ಪ್ರಶ್ನೆಗಳು ಸಾಧ್ಯವಾದಷ್ಟು ಮಟ್ಟಿಗೆ ಸಾರ್ವಜನಿಕ ಅಭಿರುಚಿಯುಳ್ಳದಾಗಿರಬೇಕು.

**ಶ್ರೀ. ಯನ್. ಬಿ. ಪಟ್ವರ್ಧನ್**
**ಮಾಂಡ್ಯ.**

'ಮದ್ರಾಸ್ ನ್ಯಾಯ ವಿಧಾಯಕ ಸಭೆಯ ಕಾಂಗ್ರೆಸ್ ಸದಸ್ಯರಾದ ಶ್ರೀ. ಕೆ. ಆರ್. ಕಾರಂತರ ಮೇಲೆ ತಕ್ಕ ಕಾರ್ಯಕ್ರಮ ಜರಗಿಸಬೇಕೆಂದು ಕೆ. ಪಿ. ಸಿ. ಸಿ.ಗೆ ದ. ಕ. ಜಿಲ್ಲಾ ಸಮಿತಿಯು ಶಿಫಾರಸು ಮಾಡಲು ಕಾರಣವೇನು? ಶ್ರೀ. ಕಾರಂತರು ತುಂಬಾ ನುರಿತ ಕಾಂಗ್ರೆಸ್ ಧುರೀಣರು, ಅಪಾರ ವಿಚಾರ ಶಕ್ತಿಯನ್ನು ಉಪಯೋಗಿಸಿ ಕೆಲಸ ಮಾಡತಕ್ಕವರೆಂದು ನನ್ನ ಭರವಸೆ. ಹೀಗಿದ್ದವರ ಮೇಲೆ ಈ ರೀತಿ ಖಂಡನಾತ್ಮಕವಾದ ಠರಾವುಗಳನ್ನು ಪಾಸು ಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಇದಕ್ಕೆ ನಿಮ್ಮ ಸೂಚನೆ ಏನೆಂಬುದನ್ನು ತಿಳಿಸಿರಿ'

ಶ್ರೀ. ಕಾರಂತರ ಕುರಿತು ದ. ಕ. ಜಿಲ್ಲಾ ಸಮಿತಿಯವರು ಕೆ. ಪಿ. ಸಿ. ಸಿ. ಗೊಂದು ಶಿಫಾರಸು ಮಾಡಿ ಕಳುಹಿಸುವಾಗಲೇ ಜತೆಯಲ್ಲಿ ಒಂದು ಕಾರಣವನ್ನೂ ಕೊಟ್ಟು ಕಳುಹಿಸಿದ್ದಾರೆ. ಹಾಗೆ ಕಳುಹಿಸಿದ ಕಾರಣವು ಶ್ರೀ. ಕಾರಂತರ ಮಟ್ಟಿಗೆ ಸಾಕಾಗದೆಂದು ನಮ್ಮ ಅಭಿಪ್ರಾಯವಾದರೆ ಕಳುಹಿಸಿದವರ ಸ್ವಾಧೀನ ಬೇರೆ ಕಾರಣವೂ ಉಂಟೆಂದು ಭಾವಿಸಿಕೊಳ್ಳಿ. 'ಶ್ರೀ. ಕಾರಂತರು ವಿಚಾರಶಕ್ತಿಯನ್ನುಪಯೋಗಿಸಿ ಕೆಲಸ ಮಾಡತಕ್ಕವರೆ'ಂದು ನಿಮಗೆ ಭರವಸೆ ಹೇಗೂ ಉಂಟಲ್ಲ; ಮತ್ತೇನು, ಅದು ಈ ಸಂದರ್ಭದಲ್ಲಿ ಕೆಲಸಕ್ಕೆ ಬೀಳಲಾರದೆಂಬ ಅನುಮಾನ ಮಾತ್ರವಿದೆಯೆ? ನನ್ನ ಸೂಚನೆ ಬೇರೇನಿದ್ದೀತು? ದ. ಕ. ಸಮಿತಿಯವರದು 'ಖಂಡನಾತ್ಮಕ ಸೂಚನೆ'ಯಾದ ಮೇಲೆ ಅದರ ಮೇಲೆ ನಿಮ್ಮಂತೆಯೇ ನನ್ನದೂ ಒಂದು ಖಂಡನಾತ್ಮಕ ಸೂಚನೆ.

'ಹೋದ ಸಲದ ಮಂಗಳೂರು ನಗರ ಸಭೆಯ ಚುನಾವಣೆಯಲ್ಲಿ ಶ್ರೀ. ತಲಚೇರಿ ರಂಗರಾಯರ ಬದಲು ಶ್ರೀ. ಕೃಷ್ಣ ಶೇಟ್ ರವರನ್ನು ಕಾಂಗ್ರೆಸ್ ಉಮೇದುವಾರರನ್ನಾಗಿ ನಿಲ್ಲಿಸಲು, ದ. ಕ. ಜಿಲ್ಲಾ ಸಮಿತಿಯ ಉದ್ದೇಶವೇನಿರಬಹುದು? ಕೃಷ್ಣ ಶೇಟ್ ಮತ್ತು ರಂಗರಾಯರು, ಇವರಿಬ್ಬರಲ್ಲಿ ಆತ್ಮೀಯವಾಗಿ ಕಾಂಗ್ರೆಸಿಗೆಂದು ದುಡಿಯುತ್ತಿರುವವರು ಯಾರೆಂದು ನಿಮ್ಮ ಅಭಿಪ್ರಾಯ?'

ಶ್ರೀ. ರಾಯರ ಬದಲು ಶ್ರೀ. ಶೇಟರನ್ನು ಉಮೇದ್ವಾರರನ್ನಾಗಿ ನಿಲ್ಲಿಸುವಾಗ, ರಾಯರ ಬದಲು ಶೇಟರು ಬರಬೇಕೆಂಬ ಒಂದೇ ಉದ್ದೇಶವಲ್ಲದೆ ಬೇರಾವುದೂ ಇರಲು ಸಾಧ್ಯವಿಲ್ಲವಷ್ಟೆ. ಕಾಂಗ್ರೆಸಿಗೆಂದು ಆತ್ಮೀಯವಾಗಿ 'ದುಡಿಯುತ್ತಿರುವ' ರಾಯರು ಅಥವಾ ಶೇಟರು ಮಾತ್ರ ನಿಮಗೆ ಬೇಕಾಗಿದ್ದರೆ ಬೇರೆ ಕಡೆ ಹುಡುಕಿರಿ. ಮೇಲಿನವರ ಪೈಕಿ ಹಾಗೆ 'ದುಡಿಯುತ್ತಿದ್ದವರು' ಶ್ರೀ. ರಂಗರಾಯರು.

'ಶ್ರೀ. ರಂಗರಾಯರ ಪ್ರಕರಣದ ಬಗ್ಗೆ ನ್ಯಾಯಾನ್ಯಾಯವನ್ನು ವಿಮರ್ಶಿಸಲು ಒಂದು ಉಪಸಮಿತಿಯನ್ನು ನಿಯಮಿಸಬೇಕೆಂದು ಶ್ರೀ.ರಂಗರಾಯರು ಕೆ.ಪಿ.ಸಿ.ಸಿಯಲ್ಲಿ ಪ್ರಾರ್ಥಿಸಿದರೂ ಕೆ. ಪಿ. ಸಿ. ಸಿಯು ಗಮನ ಕೊಡದಿರಲು ಕಾರಣವೇನಿರಬಹುದು?'

ಡಿ. ಸಿ. ಸಿ. ಯೂ ಒಂದು ಸಮಿತಿ;

ಕೆ. ಪಿ. ಸಿ. ಸಿ ಯೂ ಒಂದು ಸಮಿತಿಯೇ. ಆ ಸಮಿತಿಯು ಒಂದು ಉಪಸಮಿತಿಯನ್ನು ಹುಟ್ಟಿಸುತ್ತಿದ್ದರೆ ಅದರ ಹುಟ್ಟು ಗುಣ ಬೇರೆಯೇ ಆಗುತ್ತಿತ್ತೆಂಬ ಭರವಸೆಯೇನು? ಶ್ರೀ. ರಾಯರ ಮೇಲೆ ಹುಟ್ಟಿ ಬೆಳೆದ ಆರೋಪವೂ ಇದೆ; ಆ ಮೊದಲೇ ಹುಟ್ಟಿ ಬೆಳೆದು ಬಂದ ತಾನೂ ಇದ್ದೇನೆ- ಇದಕ್ಕಾಗಿ ಇನ್ನೊಂದು 'ಉಪ'ವನ್ನು ಹುಟ್ಟಿಸುವ ಪ್ರಯಾಸವೇಕೆಂದು ಕೆ. ಪಿ. ಸಿ. ಸಿ. ಗೆ ತೋರಿತೇನೊ!

'ಕಾಂಗ್ರೆಸ್ ಸಂಸ್ಥೆಗಳಲ್ಲಿ ಜವಾಬ್ದಾರಿ ಅಧಿಕಾರಗಳನ್ನು ಚಲಾಯಿಸುವವರ ವಿಷಯವಾಗಿ ಅನುಮಾನಕ್ಕೆ ಎಡೆ ಬಂದರೆ ಅದರನ್ನು ವಿಕ್ಕುಳಿದ ಅಂದರೆ ಜವಾಬ್ದಾರಿಯಿಲ್ಲದ ಕಾಂಗ್ರೆಸ್ ಅನುಯಾಯಿಗಳಿಗೆ ಟೀಕಿಸಲಧಿಕಾರವಿದೆಯೆ?'

ಅಧಿಕಾರಕ್ಕೆ ಬಂದವರ ಮೇಲೆ ಜವಾಬ್ದಾರಿಯೇನೋ ತಾನಾಗಿ ಬರುತ್ತದೆ. ಅಧಿಕಾರವನ್ನು ತಾವಾಗಿ ಬರಮಾಡಿಕೊಂಡವರು ಅದರ ಕಡೆಗೆ ಪೂರ್ಣ ಲಕ್ಷ್ಯ ಕೊಡುತ್ತಾರೇನೋ ನಿಜ; ಆದರೆ ತಾನಾಗಿ ಬಂದ ಜವಾಬ್ದಾರಿಗೂ ಎಲ್ಲರೂ ಅಷ್ಟೇ ಮನ್ನಣೆ ಕೊಡುತ್ತಾರೇಕೆ? ಅಂಥವರನ್ನು ಇತರ ಕಾಂಗ್ರೆಸ್ ಅನುಯಾಯಿಗಳು ಅಗತ್ಯವಾಗಿ ಟೀಕಿಸಬೇಕು. ಆಹರೆ ಮೇಲಿನವರಂತೆಯೇ ಟೀಕೆಯೊಟ್ಟಿಗೆ ಬರುವ ಜವಾಬ್ದಾರಿಯನ್ನು ಮಾತ್ರ ಮರೆತು ಬಿಟ್ಟರೆ ಒಂದೇ ತಾಯಿ ಮಕ್ಕಳು ಬೈದಾಡಿ ಕೊಂಡಂತಾಗಬಹುದು!

೦ ೦ ೦

ಟಿ. ರಮಾನಾಥ ಪೈ, ಚರ್ಚ್ ರೋಡ್ ಉಡುಪಿ.

"ಮದರಾಸು ಸರಕಾರದ ವಿದ್ಯಾಖಾತೆಯ ಕಾಂಗ್ರೆಸ್ ಮಂತ್ರಿಗಳಲ್ಲೊಬ್ಬರಾದ ಮಾನ್ಯ, ಶ್ರೀ, ಸುಬ್ಬರಾಯನರು, ಉಡುಪಿ ಮುನ್ಸಿಪಲ್ ಮಾನಪತ್ರಕ್ಕುತ್ತರ ವೀಯುತ್ತಾ "ಈ ಹಿಂದೆ ಮದ್ರಾಸ್ ಎಸ್ಸೆಂಬ್ಲಿ ಚುನಾವಣೆಗೆ ನಿಂತ ಓರ್ವ ಮಹಿಳೆಯನ್ನು ಚುನಾಯಿಸದಿರುವುದಕ್ಕಾಗಿ ವಿಷಾದ ಪಡುತ್ತೇನೆ" ಎಂದು ಹೇಳಿರುತ್ತಾ, ಮಂಗಳೂರು ವಿದ್ಯಾರ್ಥಿಗಳು ಆ ಕುರಿತು ಮಾಡಿದ ಪ್ರಶ್ನೆಗುತ್ತರವಾಗಿ ಹಾಗೆ ಹೇಳಿದ್ದಿಲ್ಲವೆಂದೂ, ಪತ್ರಿಕೆಗಳು ತಪ್ಪಾಗಿರಬಹುದೆಂದೂ ಹೇಳಿರುವರು, ಈ ಎರಡು ಅಭಿಪ್ರಾಯಗಳು ಪರಸ್ಪರ ವಿರುದ್ಧವಾಗಿರುವುದರಿಂದ ಇದರಲ್ಲಿ ಅಂತರಂಗವೇನಾದರೂ ಇರಬಹುದೇ?"

ಮಾನ್ಯ ಡಾ। ಸುಬ್ಬರಾಯನರು ಉಡುಪಿ ಸಭೆಯಲ್ಲಿ ಹೀಗೆ–ಮಂಗಳೂರು ಸಭೆಯಲ್ಲಿ ಹಾಗೆ ಹೇಳಿದುದು ನಿಜವಾಗಿದ್ದರೆ ಎಲ್ಲವೂ ಬಹಿರಂಗವಾಯಿತೇ ಹೊರತು 'ಅಂತರಂಗದಲ್ಲೇನಾದರೂ ಇರಬಹುದೆ' ನ್ನಲು ಉಳಿದುದೇನು? ಈ ಏರಿಳಿತವು 'ಪರಸ್ಪರ ವಿರುದ್ಧವಾಗಿರುವದರಿಂದ ಇದರಲ್ಲಿ ಅಂತರಂಗವೇನಾದರೂ ಇರಬಹುದೆ?' ಎಂದು ನಿಮ್ಮ ಪ್ರಶ್ನೆಯಲ್ಲವೆ? ಇರಬಹುದು. ಸಂಗತಿ ಸತ್ಯವಾಗಿದ್ದರೆ ಉಡುಪಿ-ಮಂಗಳೂರು ಸಭೆಗಳಲ್ಲಿ ಹಾಗೆ ಏರಿಸುವ- ಇಳಿಸುವ ಶಕ್ತಿಯಿದ್ದಿರಲೂ ಬಹುದು; ಅಥವಾ 'ಈ ಹಿಂದೆ ನಿಂತ ಓರ್ವ ಮಹಿಳೆ'ಯು ಹಾಗೆ ನಿಂತ ಸ್ಥಾನದಲ್ಲಿ ಅಂತಹ ಏರಿಳಿತವಿದ್ದಿರಲೂ ಬಹುದು. ಅದು 'ಹೀಗೆಯೇ ಇದೆ' ಎಂದು ಸ್ಪಷ್ಟವಾಗಿ ಹೇಳಿ ಮಾನ್ಯರು ಮೊದಲೇ ಸೂಚಿಸಿರುವ 'ಪತ್ರಿಕೆಗಳ ತಪ್ಪನ್ನು' ನಾನೂ ಮಾಡಲಾರೆ.

"ತಾವು ರೋಟರಿ ಕ್ಲಬ್ಬಿನ ಅಧ್ಯಕ್ಷರಾಗಿರುವುದು ಕಾಂಗ್ರೆಸ್ ಧ್ಯೇಯಕ್ಕೆ ಸರಿಯಾದದ್ದೇ? ಎಂಬ ವಿದ್ಯಾರ್ಥಿಗಳ ಪ್ರಶ್ನೆಗುತ್ತರವಾಗಿ 'ತಾನು ತಮ್ಮ ಮುಖಂಡರ ಅಪ್ಪಣೆ ಪಡಕೊಂಡಿರುವೆನೆಂದೂ, ಈ ಹಿಂದೆಯೂ ಅಧ್ಯಕ್ಷನಾಗಿದ್ದೆ, ಈಗಲೂ ಆಗಿದ್ದೇನೆ, ನೀವು ನನ್ನನ್ನು ಕೇಳುವರೆ ನನ್ನ ಮುಖಂಡ ರಾಜಾಜಿಯವರಕ್ಕಿಂತಲೂ ಮಿಗಿಲಾದವರಲ್ಲ" ಎಂಬ ಉತ್ತರ. ನನಗೆ ಈ ಪ್ರಶ್ನೆಯಲ್ಲಿ ಬೇಕಾಗಿರುವ ಉತ್ತರವೆಂದರೆ ಕಾಂಗ್ರೆಸ್ ಧ್ಯೇಯ, ಸತ್ಯ, ಅಹಿಂಸೆ, ಶಾಂತಿ, ಇವು ಮಿಗಿಲೋ? ಅಥವಾ, ರಾಜಾಜಿಯವರು ಮಿಗಿಲೋ?"

ಕಾಂಗ್ರೆಸ್ ಧ್ಯೇಯ, ಸತ್ಯ, ಅಹಿಂಸೆ, ಶಾಂತಿಯನ್ನು ಮತ್ತು ರಾಜಾಜಿಯವರನ್ನು ಬೇರೆ ಬೇರೆ ತಕ್ಕಡಿಯಲ್ಲಿರಿಸಿ ತೂಕಮಾಡಿ ಯಾವುದು ಜಾಸ್ತಿ ಹೇಳಿ-ಎಂದಲ್ಲವೇ ನೀವು ಕೇಳುವದು? ತೀರಾ ಕಷ್ಟದ ಕೆಲಸ ಕೊಟ್ಟಿರಿ- ರಾಜಾಜಿಯವರು ಇದಿರಿನ ತಕ್ಕಡಿಯಲ್ಲಿ ಕುಳಿತು ಕೊಳ್ಳಲು ಒಪ್ಪಲಾರರು. ನಿಮಗೆ ಸುಲಭದಲ್ಲಿ ಹೇಳುತ್ತೇನೆ- ರೋಟರೀ ಕ್ಲಬ್ಬಿನ ಅಧ್ಯಕ್ಷತೆಯಿಂದಾಗಿ ತಮ್ಮ ಭಾರ ಕಡಿಮೆಯಾಗದಂತೆ ರಾಜಾಜಿಯವರ ಆಜ್ಞೆಯನ್ನು ಕೂಡಿಸಿಕೊಂಡೆನೆಂದು ಮಾನ್ಯ ಸುಬ್ಬರಾಯನರೇ ಹೇಳಿರುವರಲ್ಲ. ನಿಮಗಿಷ್ಟವಿದ್ದರೆ ನಿಮ್ಮ ಧ್ಯೇಯವೋ, ಅಹಿಂಸೆಯೋ, ಶಾಂತಿಯೋ ಎಲ್ಲಾ ರಾಜಾಜಿಯವರ ಅಪ್ಪಣೆಯೊಳಗೆ ಸೇರಿಕೊಂಡವೆಂದು ಭಾವಿಸಿಕೊಳ್ಳಿ; ಬದಲಾಗಿ ತೂಕಕ್ಕೇನೆ ನಿಲ್ಲುವದಾದರೆ, ರಾಜಾಜಿಯವರ ಅಪ್ಪಣೆಯು ಮಿಗಿಲಾಗಿ ಕಂಡುದರಿಂದಲೇ ಮಾನ್ಯ ವಿದ್ಯಾಮಂತ್ರಿಗಳು ಅದನ್ನು ಮಾತ್ರ ಕೇಳಿಕೊಂಡರೆಂದು ತಿಳಿದುಕೊಳ್ಳಿ.

"ತಾನು ನಿಮ್ಮಲ್ಲಿ ಪರೀಕ್ಷೆಗೆ ಕುಳಿತಿಲ್ಲವೆಂದು ವಿಧ್ಯಾರ್ಥಿಗಳ ಮತ್ತೊಂದು

ಪ್ರಶ್ನೆಗೆ ಮಾನ್ಯ ಮಂತ್ರಿವರ್ಯರ ಉತ್ತರ. ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಯು ಮಾತ್ರ ಪ್ರಶ್ನೆಗುತ್ತರ ಈಯಬಹುದೆಂದು ಭಾವಿಸಬೇಕೇ?''

ಅದರಲ್ಲಿ ತಪ್ಪೇನೂ ಇಲ್ಲ. ಪ್ರಶ್ನೆಗುತ್ತರ ಯಾರೂ ಕೊಡಬಹುದು-ಬಿಡಬಹುದು. ಆದರೆ ವಿದ್ಯಾರ್ಥಿಯಾದವನು ವಿದ್ಯಾರ್ಥಿದೆಶೆಯಿಂದ ಪಾರಾಗಬೇಕಾದರೆ ಪರೀಕ್ಷಾ ಪ್ರಶ್ನೆಗಳಿಗುತ್ತರಕೊಡಲೇ ಬೇಕು. ಮಾನ್ಯ ಡಾ| ಸುಬ್ಬರಾಯನರು ಅಂತಹ ಪ್ರಶ್ನೆಗಳನ್ನು ಉತ್ತರಿಸಬೇಕೆಂಬ ನಿರ್ಬಂಧವು ಈಗೇನೂ ಇಲ್ಲ. ಅವರು ಅಂತಹ ಪ್ರಶ್ನೆಗಳಲ್ಲಿ ಈ ಮೊದಲೇ ತೇರ್ಗಡೆ ಹೊಂದಿ ಮಂತ್ರಿಪದವಿಗೇರಿದ್ದಾರಲ್ಲ.

ooo .

**ಶ್ರೀ. ಆರ್. ಜಿ. ಕೊಚ್ಚಿಕಾರ್, ಪರಮಾನಂದ ಬಿಲ್ಡಿಂಗ್, ಬೊಂಬಾಯಿ.**

'ಸಮಾಜದಲ್ಲಿ ಸತತವೂ, ಹಿರಿಯರು ಕಿರಿಯರು ಎಂಬ ಭಾವನೆಯಿಲ್ಲದ್ದ, ವಿವಾಹಿತರು ಅವಿವಾಹಿತರು ಎಂಬ ಭಾವನೆಯಿಲ್ಲದೆ ಅಪ್ರತ್ಯಕ್ಷದಲ್ಲಾಗಲೀ, ಪ್ರತ್ಯಕ್ಷದಲ್ಲಾಗಲೀ ಗಂಡಸರಾಗಲೀ ಹೆಂಗಸರಾಗಲೀ ಅನೇಕ ಅತ್ಯಾಚಾರಗಳನ್ನು ಮಾಡುತ್ತಿರುತ್ತಾರೆ. ಆದರೆ ನನಗೋರ್ವ ನಲ್ಲೆಯಿರುವಳು. ನಾನು ಅವಿವಾಹಿತನು, ಆಕೆಯು ವಿವಾಹಿತಳು ಅಲ್ಲದೇ ನನಗಿಂತ ಒಂದೆರಡು ವರ್ಷಕ್ಕೆ ಹಿರಿಯಳು, ಆದರೆ ಆಕೆಯು ಗಂಡನಿಂದ ದೂರವಾಗಿದ್ದಾಳೆ. ಆಕೆಯು ಒಪ್ಪದೆ ಆದ ವಿವಾಹವದು! ಆದುದರಿಂದ ನಾನು ಆಕೆಯನ್ನು ವಿವಾಹವಾಗುವುದು ಉಚಿತವೋ ಅನುಚಿತವೋ? ಯಾವುದಕ್ಕೂ ಕಾರಣಗಳನ್ನು ಕೊಟ್ಟು ವಿವರಿಸುವಿರಾಗಿ ನಂಬುತ್ತೇನೆ. ಸಮಾಜದಲ್ಲಿ ಇಂತಹ ಅಕೃತ್ಯಗಳು ದಿವಸಾಗಲೂ ಎಷ್ಟೋ ಆಗಿ ಹೋಗುತ್ತವೆ. ಇದು ಎಲ್ಲರಿಗೂ ಗೊತ್ತು! ಆದರೆ ನಾನು ಆಲೋಚಿಸಿದ ಹಾಗೆ ವಿವಾಹ ಪದ್ಧತಿಯು ಆಗುತ್ತದೋ ಇಲ್ಲವೋ? ಇಷ್ಟರ ವರೆಗೆ ಈ ರೀತಿಯ ವಿವಾಹಗಳು ನಡೆದಿವೆಯೋ ಇಲ್ಲವೋ? ಯಾವುದಕ್ಕೂ ದಯವಿಟ್ಟು ಸಕಾರಣ ಉತ್ತರವನ್ನು ಬರೆದು ತಿಳಿಸುವಿರಾಗಿ ನಂಬುತ್ತೇನೆ.'

ನೀವು ಸ್ವಲ್ಪ ಧೈರ್ಯ ತಂದುಗೊಳ್ಳಿ. ಎಲ್ಲವೂ ಸರಿ ಹೋಗುತ್ತೆ. ತನ್ನ ಒಪ್ಪಿಗೆಯಿರದೆ ಮದುವೆಯಾದ ಗಂಡನನ್ನು ಆ ವೇಳೂ ಒಪ್ಪದೆ ದೂರವಾಗುವಷ್ಟು ದೃಢ ಮನಸ್ಸಿನ ನಿಮ್ಮ ನಲ್ಲೆ ಮತ್ತು ಇಷ್ಟು ಚಂಚಲ ಬುದ್ಧಿಯ ನಿಮ್ಮೊಳಗೆ ಜತೆ ಸರಿಗೂಡೀತೆ? ಎಂಬ ಅನುಮಾನವೊಂದಲ್ಲದೆ ನಿಮ್ಮೊಳಗಿನ ವಿವಾಹಕ್ಕೆ ಬೇರಾವ ತೊಡಕೂ ನನ್ನ ಮಟ್ಟಿಗೆ ಕಾಣುವದಿಲ್ಲ. ಬಹುಮತ ವಿರುದ್ಧವಾದ ಪದ್ಧತಿಯಿದು ಎಂದು ನಿಮಗೆ ಗೊತ್ತಿದ್ದೂ ಮನಸ್ಸು ಮಾಡಿದ್ದೀರಿ. ಆ ಮೇಲೆ 'ಅಪರೂಪದಲ್ಲಾದರೂ ಹೀಗಾದುದುಂಟೆ?' ಎಂದು ಶೋಧೆ ಮಾಡುವ ಅದೊಂದು ಕುಂಟು ಯೋಚನೆ ಯಾಕೆ? ಇಂತಹ ಮದುವೆಗಳಾಗಿವೆ. ಧೈರ್ಯದಿಂದ ಮುಂದಡಿಯಿಟ್ಟು ಆ ಧೀರ ಸತಿಗೆ ತಕ್ಕ ವರನೆನ್ನಿಸಿಕೊಳ್ಳಿ.

o o o

**ಶ್ರೀ. ಬಿ. ಆರ್. ನಟರಾಜೇ ಅರಸ್ ಬಿಡಗಿ, ಬೆಂಗಳೂರು**

'ಒಂದು ಸಾಮಾನ್ಯವಾದ ಊರಿನಲ್ಲಿ ಈರ್ವರು ಪುಂಡರಿರುತ್ತಾರೆಂದು ಭಾವಿಸಿ. ಅವರು ಸರ್ವ ವಿಧದಲ್ಲೂ ಪುಂಡರೇ. ಅವರು ಅದೇ ಊರಿನ ಮಾನ್ಯ ಜನರನ್ನು ಬಾಧಿಸುತ್ತಲಿರುತ್ತಾರೆಂದು ತಿಳಿಯಿರಿ. ಆಗ ಮಾನ್ಯರು ಪುಂಡರ ಅತ್ಯಾಚಾರವನ್ನು ಸಹಿಸಲಾರದೆ, ಅದೇ ಊರಿನ ಸರ್ಕಾರಿ ಸಣ್ಣ ಸಣ್ಣ ನೌಕರರು ಕೂಡ ಆ ಪುಂಡರಿಗೆ ಹೆದರುವುದಾದ ಕಾರಣ ಮಾನ್ಯರು ಕೊರ್ಟಿನಲ್ಲಿ ಮೊಕದ್ದಮ್ಮೆಯನ್ನೆ ಹೂಡುತ್ತಾರೆ, ಆ ಊರಿನ ಸಾರ್ವಜನಿಕರು ಪುಂಡರಿಗೆ ಹೆದರುವುದರಿಂದ ಮಾನ್ಯರ ಕಡೆ ಸಾಕ್ಷಿ ಹೇಳದಂತೆಯೇ ಆಗುತ್ತೆ. ಆದ್ದರಿಂದ ಮಾನ್ಯರಿಗೆ ಕೋರ್ಟಿನಲ್ಲಿ ಜಯವು ಲಭಿಸುವುದಿಲ್ಲ. ಪುಂಡರಿಗೆ ಶಿಕ್ಷೆಯಾಗುವುದಿಲ್ಲ. ಆದ್ದರಿಂದ ಅಂಥಾ ಊರಿನಲ್ಲಿ ಮಾನ್ಯರು ಹೇಗೆ ವಾಸಿಸಬೇಕು ಎಂಬುದನ್ನು ದಯವಿಟ್ಟು ತಿಳಿಸಿ. (ಇದು ಪ್ರತ್ಯಕ್ಷ, ನನ್ನ ಕೆಲವು ಮಿತ್ರರು ಅನುಭವಿಸುತ್ತಿರುವ ತೊಂದರೆಯಾದ್ದರಿಂದ ಇದಕ್ಕೆ ನಿವಾರಣೆಯನ್ನು ತಿಳಿಸಬಲ್ಲಿರಾ?')

ಇಷ್ಟೆಲ್ಲಾ ಕಷ್ಟಪಡುವವರಾದರೆ ನಿಮ್ಮ ಆ 'ಮಾನ್ಯರು' ಶಬ್ದದ ಅರ್ಥವೇನೆಂದೇ ನನಗರಿಯದು. ಪುಂಡರು ಅಷ್ಟು ಕಾರಣಿಕದವರಾದರೆ ಒಂದು ದಿನ ನಿಮ್ಮ 'ಮಾನ್ಯರು' ಎಂಬ ಶಬ್ದವನ್ನೇ ಅವರು ತೊಡೆದು ಹಾಕಲಾರರೇ?

ಆಗಲಿ, ಮಾನ್ಯರು ಮತ್ತು ಪುಂಡರು ಪರಸ್ಪರ ವಿರೋಧಿಗಳೆಂದಾಯಿತು. ಮಿಕ್ಕವರೆಲ್ಲಾ ಮಾನ್ಯರಂತೆ ಪುಂಡರಿಗೆ ಹೆದರುವದರಿಂದಾಗಿಯೆ ಪುಂಡರಪಕ್ಷ ಹಿಡಿಯುತ್ತಾರೆನ್ನುತ್ತೀರಿ. 'ಪುಂಡರಿಗೆ ಹೆದರುವದಲ್ಲ; ಹೆದರುವವರೆಲ್ಲಾ ಒಟ್ಟಾಗಿ ಅವರನ್ನಿದಿರಿಸುವುದೇ ಹೆದರಿಕೆಗೊಂದು ಶಮನ' ವೆಂದು ಊರವರಿಗೆ ಬೋಧಿಸಿ ಒಗ್ಗಟ್ಟುಂಟು ಮಾಡಿರಿ. ಮಾನ್ಯರೆನ್ನಿಸಿಕೊಳ್ಳಬೇಕು ಹಾಗೆ! ನಿಮ್ಮಿಂದ ಅದೂ ಸಾಧ್ಯವಿಲ್ಲವೆನ್ನುವಿರಾ? 'ಊರಿಗೊಂದು ಹಾದಿಯಾದರೆ ಪೋರನಿಗೊಂದು ಹಾದಿ'ಯೆಂಬಂತಿರುವ ನಿಮಗೆ ಆ ಊರನ್ನೆ ಬಿಡಿ-ಎಂದು ನಾನು ಸೂಚಿಸಬೇಕಾಗುವದು-

(೪೫ನೆ ಪುಟ ನೋಡಿರಿ.)

# ನಗೆ ಢೋಲು!



## ನಾಡಿಯು ಬಡಿತ

ಡಾಕ್ಟರರು ರೋಗಿಯನ್ನು ಪರೀಕ್ಷಿಸಲೋಸುಗ ಕೈಯನ್ನು ಹಿಡಿದು ಎರಡು ಮಿನಿಟು ನಿಂತರು. ಆಮೇಲೆ ಹೇಳಿದರು:—

“ಹೋ! ನಾಡಿಯು ಬಲವಾಗಿಬಡಿಯುತ್ತಿದೆ”

“ನೀವೀಗ ಕೈಯಿಟ್ಟಿರುವದು ನನ್ನ ಕೈಗಡಿಯಾರದ ಮೇಲೆ ಸಾರ್”

## ಮುಂದಿನ ಸುಧಾರಣೆ.

ಕಿಸೆಗಳ್ಳನೊಬ್ಬ ಕದಿಯಲು ಪ್ರಯತ್ನಿಸುವಾಗಲೇ ಪೋಲಿಸರ ಕೈಯಲ್ಲಿ ಸಿಕ್ಕಿಬಿದ್ದ. ಮೆಜಿಸ್ಟ್ರೇಟರ ಮುಂದೆ ಹಾಜರುಪಡಿಸಿದಾಗ ಅವರು ಕೇಳಿದರು:—

“ಕಳ್ಳತನಕ್ಕೆ ಪ್ರಯತ್ನಿಸಿ ಸಿಕ್ಕಿಬಿದ್ದಿ. ನಿನ್ನನ್ನೊಮ್ಮೆಗೆ ಬಿಟ್ಟರೆ ಇದನ್ನು ಮರೆಯದೆ ಮುಂದಾದರೂ ಸುಧಾರಣೆ ಹೊಂದುವಿಯಲ್ಲ?”

“ಆಯ್ತು ಸ್ವಾಮಿ! ಖಂಡಿತವಾಗಿ ಸುಧಾರಣೆ ಹೊಂದುವೆನು. ನಾನು ಸಿಕ್ಕಿಬಿದ್ದುದನ್ನು ಎಂದಿಗೂ ಮರೆಯಲಾರೆ!”

## ಶತ್ರುವನ್ನು ಮಿತ್ರನಂತೆ ತಿಳಿ

ಸೋಜರು ವಿಪರೀತ ಕುಡಿದಿದ್ದರು. ದಾನಿಯೇಲರು ಆ ಸಮಯದಲ್ಲೇ ಹಿತೋಪದೇಶಕ್ಕೆ ತೊಡಗಿದರು.

“ನೋಡು, ಹೆಂಡವೆಂಬುದು ಮನುಷ್ಯನ ಪರಮಶತ್ರು.”

“ಹೇ ಹೆ-ಹೆ! ಹೋಗು-ನಡಿ! ನಾನು ಬ್ಯಾಬಲ್-ನೋಡಿಯೇ ಇದ್ದೇನೆ. ಶತ್ರುವನ್ನು ಮಿತ್ರನಂತೆ ತಿಳಿ ಅನ್ನುತ್ತದೆ ಅದರಲ್ಲಿ-ಆ ಹಾ ಹಾ!”

## ಪರಿಚಯದ ಪರಿಣಾಮ.

ಹೆಂಡತಿ— ನಮ್ಮ ಪರಿಚಯವಾಗುವ ಮೊದಲೇ ನೆರೆಮನೆಯವರು ಬಿಡಾರ ಬಿಡುತ್ತಾರಂತೆ.

ಗಂಡ— ಅವರಿಗೆ ನಿನ್ನ ಪರಿಚಯವಿದ್ದಿರಬೇಕು.

### ಇವನಿಗೂ ಆಮಂತ್ರಣವೆ?



ವಾತರೋಗಕ್ಕೆ ತಾಗಿದ, ಪ್ರಾಯ ೫೦ ದಾಟಿದ ಮುದುಕನೊಬ್ಬನು ಕೋಣೆಯೊಳಗೆ ಕಾಲಿಡುವಾಗ ‘ಪ್ರಿಯ ಬಾ ಬಾರೊ . . . . . . ಸಾರ ಸುಖವ ತೋರೊ | ಮಾರ ತಾಪವೇರಿ ನಿನ್ನ ಕೋರಿದೆ ಪ್ರಿಯಾ| ಪ್ರಿಯ ಬಾ ಬಾರೊ’ ಬರುತಿತ್ತೆಂದು ಉಮೇದಿನ ಕರೆ!

ಗೆಳೆಯರ ತಂಡದ ಸದಸ್ಯರಾಗಿ ಅಖಿಲ ಕರ್ನಾಟಕದ ಗೆಳೆಯರೊಡನೆ ಸಂಬಂಧ ಬೆಳೆಸಿರಿ.

# ಗೆಳೆಯರ ತಂಡ

ಗೆಳೆಯರ ತಂಡದ ಚಟುವಟಿಕೆಗಳಲ್ಲಿ ಭಾಗವಹಿಸಿ ನಿಮ್ಮ ಲೋಕಜ್ಞಾನವನ್ನು ಹೆಚ್ಚಿಸಿರಿ.

**ಗೆಳೆಯರ ತಂಡಕ್ಕೆ ಬರೆಯುವಾಗ "ಗೆಳೆಯರ ತಂಡ", C/o ಅಂತರಂಗ, ಉಡುಪಿ, ಎಂದು ಬರೆಯಿರಿ.**

ಒಲವಿನ ಗೆಳೆಯರೇ,

ನಿಮ್ಮ ತಂಡದ ಸಂಖ್ಯೆಯು ದಿನದಿಂದ ದಿನಕ್ಕೆ ಬೆಳೆಯುತ್ತಾ ಬರುತ್ತಿದೆ. ಗೆಳೆತನವೆಂದರೆ ತಾನು ಮಿಕ್ಕವರೊಡನೆ ಕೂಡಿಕೊಳ್ಳುವದೂ ಮಿಕ್ಕವರನ್ನು ತನ್ನೊಡನೆ ಕೂಡಿಸಿಕೊಳ್ಳುವದೂ ಆಗಿದೆ. ಈ ತತ್ವವನ್ನು ತಂಡದ ಕೆಲವು ಸದಸ್ಯರು ತಮ್ಮ ಆಚರಣೆಯಲ್ಲಿ ತೋರಿಸಿ ಉತ್ತಮ ಗೆಳೆಯರನ್ನಿಸಿಕೊಂಡಿದ್ದಾರೆ. ೧೧ನೇ ನಂಬ್ರದ ಗೆಳೆಯರಾದ ಶ್ರೀ. ಎಮ್. ಆರ್. ಕೃಷ್ಣಮೂರ್ತಿಯವರು ಅಂಥವರಲ್ಲೊಬ್ಬರು. ಅವರು ಈ ಸಲ ಇಬ್ಬರು ಹೊಸ ಗೆಳೆಯರನ್ನು ಸಂಪಾದಿಸಿಕೊಟ್ಟಿರುವರು. ಮತ್ತು ನಿಮ್ಮೊಡನೆಲ್ಲಾ ವ್ಯವಹಾರ ನಡೆಸುವ ಇಚ್ಛೆಯಿಂದ ಒಂದು ಪತ್ರವನ್ನೂ ಕಳುಹಿಸಿರುವರು. ಅದನ್ನಿಲ್ಲಿ ಪ್ರಕಟಿಸಿದ್ದೇನೆ, ಓದಿ ನೋಡಿರಿ. ಅವರು ಕೇಳುವಂಥಾ ನಾಣ್ಯಗಳು ನಿಮ್ಮಲ್ಲೇನಾದರೂ ಇದ್ದರೆ ತಿಳಿಸಿರಿ.

ಗೆಳೆತನವಿರುವವರು ನಗನಾಣ್ಯಗಳನ್ನು ಕೊಟ್ಟು ಪಡೆಯುವದಿದೆ; ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ತಿಳಕೊಳ್ಳುವದಿದೆ. ಹಾಗೆ ನಿಮಗೇನಾದರೂ ತಿಳಿಸಲಿಕ್ಕಿದ್ದರೆ ಸಂಕೋಚಪಡದೆ ತಿಳಿಸಿರಿ.

ನಮ್ಮ ತಂಡವು ಇನ್ನೂ ಬೆಳೆಯಬೇಕು. ಅದಕ್ಕಾಗಿ ಗೆಳೆಯ ಕೃಷ್ಣಮೂರ್ತಿಯವರಂತೆ ಇತರ ಗೆಳೆಯರೂ ಸದಸ್ಯರನ್ನು ಸೇರಿಸಿಕೊಡುವ ಗೆಳೆತನ ತೋರಿಸಬೇಕು.

ನಾನು ಕಳೆದ ಸಂಚಿಕೆಯಲ್ಲಿ ಗೆಳೆಯರ ತಂಡದ ಪುಟಕ್ಕೆ ಶಿರೋನಾಮೆಯಾಗಿಡಲು ಒಂದು ಚಿತ್ರವನ್ನು ಗೊತ್ತಿದ್ದವರು ಕಳುಹಿಸಿಕೊಡಿರೆಂದು ಕೇಳಿಕೊಂಡಿದ್ದನಷ್ಟೆ. ಚಿತ್ರಕಲೆಯರಿತವರು ಅದಕ್ಕಾಗಿ ಪ್ರಯತ್ನಿಸಲು ಮರೆಯಬೇಡಿರಿ. ಈ ಮೊದಲು ನಾನು ಕೊಟ್ಟಿದ್ದ ಸೂಚನೆಗಳೆಲ್ಲಾ ನೆನಪಿರಲಿ.

ಇತಿ ನಿಮ್ಮ
'ಗೆಳೆಯ'


**ತಂಡದ ಹೊಸ ಸದಸ್ಯರು.**

೧೭. ಶ್ರೀ. ಎನ್. ಬಿ. ಪಟ್ವರ್ಧನ್
C/o ಬಸ್‌ಸ್ಟಾಂಡ್ ಹೋಟಿಲ್,
ಮಂಡ್ಯಾ.

ನಿಮ್ಮ ಸದಸ್ಯತನದ ನಂಬರು ೧೭.

೧೮. ಶ್ರೀ. ಕೆ. ನರಸಿಂಗ ರಾವ್,
V Form ಮುನಿಸಿಪಲ್ ಹೈಸ್ಕೂಲು, ಮಂಡ್ಯಾ.

ನಿಮ್ಮ ಸದಸ್ಯತನದ ನಂಬರು ೧೮.




ಪ್ರಿಯ ಗೆಳೆಯರೆ!

ನನ್ನಲ್ಲಿ ಕೆಲವು ನಾಣ್ಯಗಳಿವೆ, ಅವುಗಳಲ್ಲಿ ಕೆಲವು ಭಾರತ (ಹಿಂದೂ) ನರೇಂದ್ರರ ಕಾಲಕ್ಕೆ ಸೇರಿದುವು; ಕೆಲವು ಮುಸಲ್ಮಾನ ನರೇಂದ್ರರ ಕಾಲಕ್ಕೆ ಸೇರಿದುವು; ಮತ್ತೆ ಕೆಲವು ಇಂಗ್ಲೀಷರ ಕಾಲಕ್ಕೆ ಸೇರಿದ್ದು.

ಹಿಂದುಗಳ ಮತ್ತು ಮುಹಮ್ಮದೀಯರ ನಾಣ್ಯಗಳೆರಡು ನನ್ನಲ್ಲಿ ಅವಶ್ಯಕ್ಕಿಂತಲೂ ಮಿಗಿಲಾಗಿರುವುದರಿಂದ ಬೇರೆ ಯಾವುದಾದರೂ ಪುರಾತನ ಕಾಲದ ನಾಣ್ಯಗಳೆರಡನ್ನು ನನಗೆ ಕಳುಹಿಸುವ ಗೆಳೆಯರಿದ್ದರೆ, ನಾನು ನನ್ನಲ್ಲಿರುವ ೨ ನಾಣ್ಯಗಳನ್ನು ಬಹಳ ಸಂತೋಷದಿಂದ ಅವರಿಗೆ ಕಳುಹಿಸುತ್ತೇನೆ.

ಇಂತೀ ತಮ್ಮ ೧೧ನೇ ಗೆಳೆಯ
ಎಂ. ಆರ್. ಕೃಷ್ಣಮೂರ್ತಿ
ಮಂಡ್ಯಾ.

# NO LIFE INSURANCE ?

IT OFTEN TAKES THE DEPENDANTS TO KNOW THE DIFFERENCE BETWEEN "**LIFE INSURANCE**" AND "**NO LIFE INSURANCE**". THE DIFFERENCE TO THEM IS CHEQUE OR NO CHEQUE WHEN THE BREAD-WINNER DIES.




*The above is a cheque issued recently to a claimant by the Company.*

**"But if any provide not for his own, and especially for those of his own house, he hath denied the faith, and is worse than an infidel."**

*I. Timothy, V 8.*

INSURE YOUR LIFE WITH

## THE CANARA MUTUAL ASSURANCE COMPANY, LIMITED.

**THE COMPANY IS MUTUAL**
**THERE ARE NO SHARE-HOLDERS**

# ಯುರೋಪು ಸಂಚಾರದಲ್ಲಿ

## ಪಂಡಿತ ನೆಹರುಗಳು ಪಾಶ್ಚಾತ್ಯ ಪೋಷಾಕಿನಲ್ಲಿದ್ದುದೇಕೆ?



## ಕುಮಾರಿ ಇಂದಿರೆಯ ಮದುವೆಯ ವಾರ್ತೆ ಹಸೀ ಸುಳ್ಳು!

## ಪ್ರಾಯಶಃ ನಹಾಸ್ ಪಾಶರಿಗೆ ಪುತ್ರನಿಲ್ಲ!

---

ಪಂಡಿತ ನೆಹರುಗಳು ಯುರೋಪು ಸಂಚಾರದಲ್ಲಿದ್ದಾಗ ಪತ್ರಿಕೆಗಳಲ್ಲಿ ಬರುತ್ತಿದ್ದ ಅವರ ಭಾವಚಿತ್ರಗಳನ್ನು ನೋಡಿದಲ್ಲಿ, ಅವರು ಇಂಗ್ಲೆಂಡಿನ ಲೋರ್ಡ್ ಕುಟುಂಬದವರಂತೆ ತೋರುತ್ತಿದ್ದರು. ಈಗ ಭಾರತದಲ್ಲಿ ಸರ್ವತ್ರ ವ್ಯಾಪಿಸಿಕೊಂಡಿರುವ ಎದೆಯಂಗಿಗಳಿಗೆ ಪಂಡಿತರ ಎದೆಯಂಗಿಯೇ ಮೂಲವೆನ್ನಬೇಕು. ಆದೀಗ ಗಾಂಧಿ ಟೋಪಿಯಂತೆ, 'ಜವಾಹರ್ ವೆಸ್ಟ್' ಎಂಬ ಹೆಸರನ್ನೂ ಸಂಪಾದಿಸಿದೆ. ಹಿಂದೀಯರೀಗ 'ಗಾಂಧಿ'ಯನ್ನು ತಲೆಯ ಮೇಲೇರಿಸಿಕೊಂಡು ಪೂಜಿಸುತ್ತಿರುವರೆಂದರೆ 'ಜವಾಹರ'ಗೆ ಎದೆಯಲ್ಲೊಂದು ಸ್ಥಾನವಿತ್ತಿರುವರು.

ಧೋತಿಯುಟ್ಟು, ನೀಳ ಶರ್ಟಿನ ಮೇಲೆ ಎದೆಯಂಗಿಯನ್ನು ತೊಟ್ಟು, ತಲೆಯಲ್ಲೊಂದು ಬಿಳೀ ಟೊಪ್ಪಿಯಿಟ್ಟ ಪಂಡಿತ ಜವಾಹರಲಾಲರ ಮೂರ್ತಿಯು ಹಿಂದೀಯರು ಆಗಾಗ ಸ್ಮರಿಸಿಕೊಳ್ಳುವಸಂಗತಿಗಳಲ್ಲೊಂದಾಗಿತ್ತು. ಆದರೆ ಯುರೋಪು ಸಂಚಾರಕ್ಕೆ ಹೋದಾಗ ಅಲ್ಲಿಂದ ಬರುತ್ತಿದ್ದ ಅವರ ಭಾವಚಿತ್ರಗಳನ್ನು ಕಂಡರೆ, ಕೂಡಲೇ ಅವರ ಗುರುತ ಹತ್ತುವದು ಕೂಡಾ ಕಷ್ಟಕ್ಕಿಡುತಿತ್ತು. ಚಲ್ಲಾಣ, ಕೋಟು, ಟೈ, ಹೇಟು, ಬೂಟುಗಳಿಂದ ತಾಜಾ ಧೊರೆಯಾಗಿ ಜವಾಹಿರಲಾಲರು ಸಭೆಯಲ್ಲಿ, ಕೂಟಗಳಲ್ಲಿ ಭಾಗವಹಿಸುತ್ತಿದ್ದರು. ಇದರಿಂದಾಗಿ ಹಿಂದುಸ್ಥಾನದಲ್ಲೊಂದು ವಿಧದ ಸಂದೇಹವುಂಟಾಗಿತ್ತಲ್ಲದೆ 'ಇದು ಸರಿಯೇ?' ಎಂಬ ಪ್ರಶ್ನೆಯೂ ಮುಂದೆ ಬಂತು. ಇದೇ ತಾ ೨ರಲ್ಲಿ ಪತ್ರಿಕಾ ಪ್ರತಿನಿಧಿಗಳೊಬ್ಬರು ಆ ಕುರಿತು ಪಂಡಿತರನ್ನು ಪ್ರಶ್ನಿಸಿದಾಗ ಅವರದಕ್ಕೆ ಈ ರೀತಿ ಸಮಾಧಾನ ಕೊಟ್ಟರು.

### ಪಂಡಿತರ ಉತ್ತರ.

"ನಾನು ಯುರೋಪು ಸಂಚಾರಕ್ಕೆ ಹೋದಷ್ಟು ಸಲವೂ ಯುರೋಪಿಯನ್ ಡ್ರೆಸ್ಸನ್ನೇ ಧರಿಸಿದ್ದೇನೆ; ಅಲ್ಲಿಯ ಹವಾಮಾನ ಹಾಗೂ ವಾತಾವರಣಕ್ಕೆ ಆ ಪೋಷಾಕುಗಳೇ ಹೊಂದಿಕೆಯಾಗುತ್ತವೆ. ಭಾರತದ ಒಂದು ಹಳ್ಳಿಯಲ್ಲಿ ಯುರೋಪಿಯನ್ ಪೋಷಾಕಿನಲ್ಲಿರುವುದು ಎಷ್ಟು ಅಯೋಗ್ಯವೋ, ಲಂಡನ್ ಅಥವಾ ಪ್ಯಾರಿಸಿನಂತಹ ಪಾಶ್ಚಾತ್ಯ ಪಟ್ಟಣಗಳಲ್ಲಿ

ಧೋತ್ರಿ ಶರ್ಟುಗಳಿಂದಿರುವದೂ ಅಷ್ಟೇ ಆರೋಗ್ಯವೆಂದು ನನ್ನ ಭಾವನೆ. ನಾವು ಹಿಂದುಸ್ಥಾನದಲ್ಲಿ ಖಾದಿಯನ್ನು ಪಯೋಗಿಸುವದರಲ್ಲಿ, ರಾಜಕೀಯ ಆರ್ಥಿಕ ಹಾಗೂ ಸಾಮಾಜಿಕ ಕಾರಣಗಳಿವೆ. ಹಿಂದುಸ್ಥಾನದಲ್ಲಿರುವ ಈ ಕಾರಣಗಳು ದೂರದ ದೇಶಗಳಲ್ಲಿರುವಾಗಲೂ ಅನ್ವಯಿಸಲಾರವು. ಹಿಮ ಮುಚ್ಚಿಕೊಂಡಿರುವ ಸ್ವಿಝರ್ಲೆಂಡಿನಂತಹ ಸ್ಥಳಗಳಲ್ಲಿ ಆ ಕಠಿನ ಛಳಿಗೆ ನಮ್ಮ ನಿತ್ಯದ ಹಿಂದೀಪೋಷಾಕಿನಲ್ಲಿರುವದು ತೀರಾ ಅಸಾಧ್ಯ. ಹೀಗಾಗಿ ಅಲ್ಲಿಯ ಹವಾಮಾನ ಮತ್ತು ವಾತಾವರಣಕ್ಕನುಗುಣವಾಗುವ ತೊಡಿಗೆಯನ್ನೇ ತೊಡಬೇಕಾಗುತ್ತದೆ. ಇದಕ್ಕೂ ಹಿಂದೀ ರಾಷ್ಟ್ರೀಯತ್ವಕ್ಕೂ ಸಂಬಂಧವಿಲ್ಲ. ರಾಷ್ಟ್ರೀಯ ಪೋಷಾಕಿನ ತತ್ವವು ರಾಷ್ಟ್ರದೊಳಗೆ ಮಾತ್ರ ಅನ್ವಯಿಸುತ್ತದೆ. ಮಹಾತ್ಮಾ ಗಾಂಧಿಯವರಂತಹ ವ್ಯಕ್ತಿಗಳ ರೀತಿಯನ್ನು ಕಾಣುವ ವಿಶೇಷ ದೃಷ್ಟಿಯಿಂದಲೇ ಸಾಮಾನ್ಯ ಕೆಲಸಗಾರನನ್ನೂ ಕಂಡು, ಅವನು ಭಾರತದೊಳಗೂ ಹೊರಗೂ ಒಂದೇ ರೀತಿಯಲ್ಲಿರಬೇಕೆಂದು ಭಾವಿಸಿಕೊಂಡರೆ ತಪ್ಪಾಗುವದು.

ಇನ್ನು, ಪರದೇಶಗಳಲ್ಲಾಗುವ ಭಾರತೀಯ ವಿಶೇಷ ಸಮಾರಂಭಗಳ ಸಮಯದಲ್ಲಿ, ಅಥವಾ ಭಾರತೀಯರ ಸಭೆಗಳಲ್ಲಿ, ಹಿಂದೀ ಪೋಷಾಕನ್ನು ಧರಿಸಿಕೊಳ್ಳುವದು ಅಗತ್ಯವಿದೆ. ಅಂತಹ ಸಂದರ್ಭಗಳಲ್ಲೆಲ್ಲಾ ನಾನು ಹಾಗೆಯೇ ಮಾಡಿರುವೆನೆಂದು ಪುನಃ ಹೇಳುತ್ತೇನೆ. ಇತರ ಸಂದರ್ಭಗಳಲ್ಲಿಯೂ ಭಾರತೀಯ ಪೋಷಾಕಿನಲ್ಲಿರುವ ಸಾಹಸ ಪಟ್ಟರೆ, ಅದರಿಂದಾಗಿ ಜನಸಂದಣಿಯ ಲಕ್ಷ್ಯವು ಅನಾವಶ್ಯಕವಾಗಿ ವ್ಯಕ್ತಿಯ ಕಡೆಗೆ ಬಿದ್ದು, ಕೆಲಸಕ್ಕೆ ತೊಂದರೆಗಳೊದಗುವವು.''

**ಕುಮಾರಿಯ ವಿವಾಹ ವಾರ್ತೆ ಕೇವಲ ಕಲ್ಪನೆ.**

ಪಂಡಿತ ನೆಹರುಗಳ ಏಕಮಾತ್ರ ಪುತ್ರಿ ಕುಮಾರಿ ಇಂದಿರೆಯು ಯುರೋಪಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಇಜಿಪ್ತಿನ ಮಾಜಿ ಮುಖ್ಯ ಮಂತ್ರಿಗಳಾದ ನಹಾಸ್ ಪಾಶರ ಮಗನ ಪರಿಚಯಮಾಡಿಕೊಂಡಿರುವಳೆಂದೂ, ಅವರೊಳಗೆ ವಿವಾಹವಾಗುವ ಸಂಭವವುಂಟೆಂದೂ ಕೆಲವು ಪತ್ರಿಕೆಗಳು ಪ್ರಕಟಸಿದ್ದವು. ಪಂಡಿತರು ತನ್ನ ತಂಗಿ ವಿಜಯಲಕ್ಷ್ಮೀ ಪಂಡಿತರನ್ನು ಯುರೋಪಿಗೆ ಅದಕ್ಕಾಗಿಯೇ ಬರಮಾಡಿಸಿಕೊಂಡುದೆಂದು ಕೂಡ ಪ್ರಕಟವಾಗಿತ್ತು. ಈ ಸಂಗತಿಯನ್ನು ಪಂಡಿತರ ಅವಗಾಹನೆಗೆ ತಂದಾಗ ಅವರು 'ಇದು ಪೂರ್ಣ ತಪ್ಪು ಕಲ್ಪನೆ'ಯೆಂದು ಬಿಟ್ಟರು. ಆ ಮೇಲೆ ನಗುತ್ತಾ ಹೇಳಿದರು– "ಪ್ರಾಯಶಃ ನಾಹಾಸ್ ಪಾಶಾರಿಗೆ ಪುತ್ರನೇ ಇಲ್ಲ!''

ಕೆಳಗೆ ಕಾಣಿಸಿದವರಲ್ಲಿಯೂ
2ನೆ ಪುಟದಲ್ಲಿ ಕಾಣಿಸಿದ
ಡೈರಿಗಳು
ಸಿಕ್ಕುತ್ತವೆ.
ಶ್ರೀನಿವಾಸ ಬ್ರದರ್ಸ್, ಮಂಗಳೂರು.
ಕೆ. ಭೋಜರಾವ್ ಎಂಡ್ ಕೋ ಮಂಗಳೂರು.
ಚಂದಪ್ಪ ಇಂದ್ರ, ಮೂಡಬಿದ್ರೆ.
ಬಿ. ಅಚ್ಚುತ ಪೈ, ಕಾರ್ಕಳ.

## ತುಸು ವಿನೋದ

**ತಮಾಷೆಯ ಹ್ಯಾಟು.**

ಥಿಯೇಟರೊಂದರಲ್ಲಿ ತೀರಾ ಹೊಸಮಾದರಿಯ ಉದ್ದ ಹೇಟೊಂದನ್ನಿಟ್ಟುಕೊಂಡು ಲೇಡಿಯೊಬ್ಬಳು ಕುಳಿತಿದ್ದಳು. ಫಕ್ಕನೆ ಸ್ಮರಣೆ ಬಂದಂತಾಗಿ ಹಿಂಬದಿಯ ಸೀಟಿನಲ್ಲಿದ್ದವನ ಕಡೆಗೆ ತಿರುಗಿ ಹೇಳಿದಳು.

"ಕ್ಷಮಿಸಿರಿ ಥಿಯೇಟರಿನಲ್ಲಿ ಪ್ರದರ್ಶಿಸಲ್ಪಡುವ ಆ ತಮಾಷೆಯು ನನ್ನ ಹ್ಯಾಟಿನ ತಡೆಯಿಂದಾಗಿ ನಿಮಗೆ ಕಾಣಲಿಲ್ಲವೇನೋ! ಹ್ಯಾಟು ತೆಗೆಯಬೇಕೇನು?"

"ಬೇಡ ಬೇಡ, ಹಾಗೆಯೇ ಇರಲಿ. ಆ ತಮಾಷೆಗಿಂತ ನಿಮ್ಮ ಹ್ಯಾಟೇ ಬಹಳ ತಮಾಷೆಯದಾಗಿ ಕಾಣುತ್ತದೆ".

---

ರಾಮ – ಯಾಕೆ ಸುಮ್ಮಗೆ 'ಒನ್ಸ್ ಮೋರ್' ಹಾಕಿ ಚಪ್ಪಾಳೆ ಹೊಡಿಯುತ್ತೀಯಾ? ಅವಳ ಗಾಯನವು ತೀರಾ ನಿಸ್ಸಾರವಾದ್ದು.

ಶ್ಯಾಮ—ನಾನದನ್ನು ಬಲ್ಲೆ. ಆದರೆ ಅವಳ ಡ್ರೆಸ್ಸಿನ ನಾಜೂಕಿಗಾಗಿ ಅವಳು ಮತ್ತೊಮ್ಮೆ ಸ್ಟೇಜಿಗೆ ಬರಲಿ ಅನ್ನಿಸಿತು.

---

ಶ್ರೀ. ಆಲೂರು ವೆಂಕಟರಾಯರ ಗೀತಾ ಪುಸ್ತಕಗಳು ತುಳುನಾಡ್ ಪ್ರೆಸ್ಸಿನಲ್ಲಿ ದೊರೆಯುತ್ತವೆ.

# ಅಂತರಂಗ

**ಆದಿತ್ಯವಾರ, ದಶಂಬರ ೧೧, ೧೯೩೮.**

# ಜಿಲ್ಲಾ ಕಾಂಗ್ರೆಸ್ ಕಮಿಟಿಯೊಳಗಿನ ಶೋಚನೀಯ ವಿದ್ಯಮಾನಗಳು

(BY S. U. PANIADY)

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೂವರು ಅಧಿಕಾರಿಗಳ ಕುರಿತು ಬಂದಿರುವ ಅವಿಶ್ವಾಸ ಸೂಚನೆಯಿಂದಾಗಿ, ಕಾಂಗ್ರೆಸ್ ವಾತಾವರಣವು ದಿನದಿಂದ ದಿನಕ್ಕೆ ಕಲಷಿತವಾಗುತ್ತಾ ಬರುತ್ತಿರುವುದು ಶೋಚನೀಯವಿದೆ. ಸೂಚನೆಯ ಕುರಿತು ನಮ್ಮ ಅಭಿಪ್ರಾಯವನ್ನು ಈ ಮೊದಲೇ ಸೂಚಿಸಿರುವೆವು. ಆ ಸಂಬಂಧವಾಗಿ ಶ್ರೀ. ಎ. ಬಿ. ಸೆಟ್ಟಿ ಮೊದಲಾದವರು ಕೊಟ್ಟ ರಾಜೀತೀರ್ಮಾನವು ನ್ಯಾಯವಾದುದಿತ್ತು. ಕಾಂಗ್ರೆಸ್ ಕಮಿಟಿಯು ಜಿಲ್ಲೆಯ ಮಹಾಜನರಿಗೆ ಜವಾಬ್ದಾರಿಯಿರುತ್ತಾ, ಸಂದರ್ಭ ದೊರೆತಾಗಲೆಲ್ಲಾ ಜನರಿಗೆ ತಮ್ಮಲ್ಲಿ ವಿಶ್ವಾಸವಿದೆಯೇ? ಎಂಬುದನ್ನು ತಿಳಿದುಕೊಳ್ಳಲು ಅದರ ಅಧಿಕಾರಿಗಳು ಸಿದ್ಧರೇ ಇರಬೇಕು. ಪ್ರಜಾ ಜವಾಬ್ದಾರಿಯ ಈ ಮೂಲತತ್ವವನ್ನೇ ಮೂಲೆಗೊತ್ತಿದವರು, ನೆವಕ್ಕಾಗಿ ಇತರ ನಿಯಮನಿಷ್ಠೆಗಳನ್ನು ಎತ್ತಿತೋರಿಸುವದರಲ್ಲಿ ಅರ್ಥವಿಲ್ಲ. ಜನರ ಒಪ್ಪಿಗೆಯು ಯಥಾರ್ಥವಾಗಿರಬೇಕೇಹೊರತು, ಅದು ಇಲ್ಲದಿರುವಲ್ಲಿ ಕೃತಕವನ್ನು ನಿರ್ಮಿಸಿ ತೋರಿಸುವ ಚಾಣಾಕ್ಷತೆಯು ಕಾಂಗ್ರೆಸ್ ಸಂಸ್ಥೆಗಳೊಳಗೆ ಸಲ್ಲದೆಂದು ನಮ್ಮ ನಿಶ್ಚಿತಾಭಿಪ್ರಾಯ. ಮೇಲಿನವರ ರಾಜೀತೀರ್ಮಾನದಂತೆ, ಅವಿಶ್ವಾಸ ಸೂಚನೆಯನ್ನು ತಂದವರು ಹಿಂದೆಗೆದು, ಅಧಿಕಾರಿಗಳು ಸ್ವೇಚ್ಛೆಯಿಂದ ರಾಜೀನಾಮೆ ಕೊಟ್ಟು ಪುನಃ ಚುನಾವಣೆಗೆ ನಿಲ್ಲುತ್ತಿದ್ದರೆ, ಯಾವ ಗೊಂದಲವೂ ಇಲ್ಲದೆ ಈ ಕಲಹದ ತೀರ್ಮಾನವಾಗುತ್ತಿತ್ತು. ಅದು ಕಾಂಗ್ರೆಸ್ ಹಿತದ ಮೇಲೆ ದೃಷ್ಟಿಯಿಟ್ಟವರು ಅನುಸರಿಸಬೇಕಾದರೀತಿಯಾಗಿತ್ತು. ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರು - ಯಾವ ಕಾರಣವನ್ನೇ ಕೊಡಲಿ– ಆ ಇತ್ಯರ್ಥಕ್ಕೆ ಹಿಂಜರಿದುದರಲ್ಲಿ ನಮಗಾವ ಔಚಿತ್ಯವೂ ಕಾಣುವುದಿಲ್ಲ.

### ವ್ಯಕ್ತಿ ಸಂಬಂಧವಿಲ್ಲ.

ಜಿಲ್ಲೆಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ಶ್ರೀ. ಕೆ. ಕೆ. ಸೆಟ್ಟರ ಅಂದಿನ ಮತ್ತು ಇಂದಿನ ಪತ್ರವ್ಯವಹಾರಗಳಿಂದ ಅವರಉದ್ದೇಶವು ಸರಳವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನಾವಿಲ್ಲಿ ಶ್ರೀ. ಕೆ. ಕೆ ಸೆಟ್ಟರಂತಹ ವಿರುದ್ಧಪಕ್ಷೀಯರ, ಅಥವಾಅಧಿಕಾರಿಗಳ ವ್ಯಕ್ತಿಗತ ಅಭಿಪ್ರಾಯಗಳಿಗೆ ಅಗತ್ಯವಿಲ್ಲದಷ್ಟು, ಪ್ರಾಮುಖ್ಯತೆಯೀಯಲು ಸಿದ್ಧರಿಲ್ಲ. ಮುಖ್ಯವಾಗಿ ಅವಿಶ್ವಾಸ ಸೂಚನೆಯೊಂದು ಬಂದಿದೆ; ಅದು ಸಾಕಷ್ಟು ಮೆಂಬರರ ಸಹಿಯೊಡನೆ ಬಂದಿದೆ ಕಾಂಗ್ರೆಸ್ ತತ್ವ ಮತ್ತು ಕಾರ್ಯದ ದೃಷ್ಟಿಯಿಂದ ಅದಕ್ಕಾಗಬೇಕಾದ ಇತ್ಯರ್ಥವೊಂದು ಆಗಲೇ ಬೇಕು. ಶ್ರೀ. ಕೆ. ಕೆ. ಸೆಟ್ಟರಲ್ಲಿದ್ದಂತಹ ಅನ್ಯೋದ್ದೇಶವಾದರೂ ಸಾಧಿಸಲ್ಪಡಬೇಕಾದರೆ ಕಾಂಗ್ರೆಸಿನಲ್ಲಿ ನೀತಿನಿಯಮ ವಿರುದ್ಧ ಪರಿಸ್ಥಿತಿಯಿದ್ದಲ್ಲಿ ಮಾತ್ರಸಾಧ್ಯ. ಕಾಂಗ್ರೆಸ್ ನಿಯಮವನ್ನು, ಕಾಂಗ್ರೆಸ್ ಧರ್ಮವನ್ನು ಅನುಸರಿಸಿ ಕಾಂಗ್ರೆಸ್ ಸಂಸ್ಥೆಯಿರಬೇಕಾದರೆ, ಅದರಲ್ಲಿ ಅಂತಹ ದುರುದ್ದೇಶಗಳಿರಲೂ ಬಾರದು; ಈಗಿನ ಅಧಿಕಾರಿಗಳು ಅವಿಶ್ವಾಸ ಸೂಚನೆಯನ್ನು ತಡೆದಿಟ್ಟ ರೀತಿಯ ಕುಂಟು ನೆವನಗಳಿರಲೂ ಬಾರದು. ಅಧಿಕಾರಿಗಳು ಅವಿಶ್ವಾಸ ಸೂಚನೆಯನ್ನು ತಮ್ಮ ಬೆಂಬಲಕ್ಕಿರುವ ಜನರ ವಿಶ್ವಾಸದಿಂದಲೇ ಅಪ್ಪಳಿಸಬೇಕು. ಹೊರತು, ಅದನ್ನಡ್ಡಗಾಲಿಟ್ಟು ಕೆಡಹುವದು ಸಲ್ಲದು. ಇಂತಹ ಚಾಪಲ್ಯಕ್ಕೆ ಎಂತಹ ಸಂದರ್ಭದಲ್ಲಾದರೂ ತಮ್ಮಅಧಿಕಾರವನ್ನು ಬಿಡಲು ಮನಸ್ಸಿಲ್ಲವೆಂಬ ಅರ್ಥವಾಗುವುದಿಲ್ಲವೆ? ಅಧ್ಯಕ್ಷರ ಮಾತಿನಂತೆ ದ. ಕ. ಜಿಲ್ಲಾ ಕಮಿಟಿಯು ಅವಿಶ್ವಾಸ ಸೂಚನೆಗೆ ಸ್ವಲ್ಪವೂ ಬೆಂಬಲವಿಲ್ಲದಿರುವಾಗ, ಆ ಬೆಂಬಲದ ಪರೀಕ್ಷೆಯನ್ನೊಮ್ಮೆಗೆ ನಡೆಸಿಬಿಡಲು ಬೆಚ್ಚುತ್ತಿರುವ ಅಧಿಕಾರಿಗಳು ಯಾವ ನೈತಿಕ ಧೈರ್ಯವನ್ನು ತೋರ್ಪಡಿಸಿದಂತಾಯಿತು? ಅವಿಶ್ವಾಸ ಠರಾವಿನ ಯಾವತ್ತು ಚರಿತ್ರೆಯನ್ನೂ ಪತ್ರವ್ಯವಹಾರವನ್ನೂ ಜನತೆಯಮುಂದಿಟ್ಟುದಕ್ಕಾಗಿನಮ್ಮ ಸಹೋದ್ಯೋಗಿಸ್ವತಂತ್ರ ಭಾರತಕ್ಕೆ ಜಿಲ್ಲೆಯು ಚಿರಋಣಿಯಾಗಬೇಕಾಗಿದೆ ಸ್ವತಂತ್ರಭಾರತದಲ್ಲಿಯೂ ತನ್ನ ಸ್ವಾತಂತ್ರ್ಯ ಸಿಗದಿದ್ದುದಕ್ಕಾಗಿ ಸ್ವತಂತ್ರಭಾರತ ಪತ್ರಿಕೆಯ ಸಂಬಂಧವನ್ನು ಕಡಿದುಕೋಂಡುದ

(೪ನೇ ಪುಟ ನೋಡಿರಿ)

# ಯಹೂದೀ ಮರ್ದನದ ಹಿ

## ಹೆರ್ ರೇತನ ಕೊಲೆಗೆ ಹಿಟ್ಲರನ ಒಳಸಂಚು!

**ಹಿಟ್ಲರನೇ ಕೊಲ್ಲಿಸಿದ!**

ಪೇರಿಸಿನಲ್ಲಿ ಜರ್ಮನ್ ರಾಯಭಾರಿಯಾಗಿದ್ದ ಹೆರ್. ಫೋನ್. ರೇತನನ್ನು ಕೇವಲ ೧೭ ವರ್ಷ ಪ್ರಾಯದ ಬಿಸಿನೆತ್ತರಿನ ಯಹೂದೀ ತರುಣನೊಬ್ಬನು ಗುಂಡಿಟ್ಟು ಕೊಂದುದನ್ನು ಕಾರಣವಾಗಿಟ್ಟು ಕೊಂಡು, ಜರ್ಮನಿಯಲ್ಲಿ ಯಹೂದೀ ಜಾತಿಯನ್ನೇ ಹಿಂಡಿ ಹಿಪ್ಪೆ ಮಾಡಿ ಹೊರಗೆಸೆಯುವ ಅಮಾನುಷೀ ದಬ್ಬಾಳಿಕೆಗೆ ಹಿಟ್ಲರನು ತೊಡಗಿರುವನಷ್ಟೆ. ಫ್ರಾನ್ಸಿನಲ್ಲಿದ್ದ ಯಹೂದೀ ತರುಣನೊಬ್ಬನು ಮಾಡಿದ ಕೊಲೆಗೆ, ಜರ್ಮನಿಯಲ್ಲಿದ್ದ ಅವನ ಜಾತಿಯವರಿಂದ ಲಕ್ಷಗಟ್ಟಳೆ ಪರಿಹಾರ ದ್ರವ್ಯವನ್ನೂ ಅವರ ಎಲ್ಲಾ ಹಕ್ಕುಬಾಧ್ಯತೆಗಳನ್ನೂ ಸೆಳೆಗೊಂಡು ಹೊರಗಟ್ಟುವದರಲ್ಲಿ ಅರ್ಥವೇನಿದೆ, ಎಂಬುದು ಯಾರಿಗೂ ತಿಳಿಯದ ಸಂಗತಿ. ಅದನ್ನೊತ್ತಟ್ಟಿಗಿಟ್ಟು, ಹೆರ್. ರೇತನ ಕೊಲೆ ಹೇಗೆ ನಡೆಯಿತೆಂಬುದನ್ನು ಅವಲೋಕಿಸಿದಲ್ಲಿ, ಅದು ಮತ್ತಷ್ಟು ಸೋಜಿಗದ್ದಿದೆ. ಕೊಲೆಗಾರ ತರುಣನಿಗೆ, ಯಹೂದಿಯರಿಗೆ ಪಾಸ್ ಪೋರ್ಟು ದೊರಕದ ಆ ದಿನಗಳಲ್ಲಿ ಜರ್ಮನಿಯಿಂದ ಫ್ರಾನ್ಸಿಗೆ ಹೋಗುವರೆ ಬಹುಸುಲಭದಲ್ಲಿ ಪಾಸ್ ಪೋರ್ಟು ದೊರೆತಿತ್ತು. ಮಿಕ್ಕ ಜ್ಯೂಜನರನ್ನಾದರೆ ಅವರ ಸೊತ್ತನ್ನೆಲ್ಲಾ ಅಪಹರಿಸಿ ಜರ್ಮನಿಯಿಂದ ಹೊರಗೆ ಕಳುಹಿಸುವ ಪದ್ಧತಿ. ಜ್ಯೂಮನುಷ್ಯನೆಂದೊಡನೆ ಉಂಗು



ಜ್ಯೂಗಳನ್ನು ಸುಲಿಯುವದೇ ನ್ಯಾಯವೆಂದು ಎದೆತಟ್ಟುತ್ತಿರುವ ಹಿಟ್ಲರನ ಪ್ರಚಾರ ಮಂತ್ರಿ **ಡಾ। ಗೇಬಲ್ಸ್.**

ಷ್ಠದಿಂದ ತಲೆಕೂದಲ ವರೆಗೆ ಪರೀಕ್ಷಿಸಿ, ಮುಂದಡಿಯಿಡಲು ಬಿಡುವ ಜರ್ಮನರ ನಡುವೆ, ಪೇರಿಸಿನ ಜರ್ಮನ್ ವಸತಿಯೊಳಗು ಪಿಸ್ತೂಲನ್ನು ಜೇಬಿನಲ್ಲಿಟ್ಟು ಕೊಂಡು ಈ ಯಹೂದಿಯನು ತಡೆಯಿಲ್ಲದೆ ಪ್ರವೇಶಿಸಿದುದರ ರಹಸ್ಯವೇನು? ಆ ಮೇಲೆ ದೊಡ್ಡ ಜರ್ಮನ್ ಆಫೀಸರನೊಬ್ಬನನ್ನು ಏಕಾಏಕಿ ಗುಂಡಿಟ್ಟು ಉರುಳಿಸಲು ಅನುಕೂಲದೊರೆತುದು ಹೇಗೆ? ಈ ಎಲ್ಲಾ ಆಧಾರಗಳನ್ನು ಕೊಟ್ಟು, ಸರ್. ವೋನ್ ರೇತರ ಕೊಲೆಗೆ ಹಿಟ್ಲರನ ಪ್ರೇರಣೆಯೇ ಕಾರಣವೆಂದು ಕೆಲವು ಯಹೂದೀ ಮುಖಂಡರು ವಾದಿಸುತ್ತಿರುವರು. ವಿದ್ಯಮಾನಗಳನ್ನು ವಿಮರ್ಶಿಸಿ ನೋಡಿದಲ್ಲಿ ಅದು ಸುಳ್ಳೆನ್ನಲು ಬರುವದಿಲ್ಲ. ಯಹೂದಿಗಳನ್ನು ಅರ್ಧಮರ್ಧ ಸುಲಿಯುವದರಲ್ಲಿ ಹಿಟ್ಲರನಿಗಷ್ಟೇನೂ ಸಮಾಧಾನ ಕಾಣಲಿಲ್ಲ. ಯಹೂದಿಗಳು ತಮ್ಮ ಪಾಲಿಗೆ ದೊರೆತುದನ್ನೇ ಭಾಗ್ಯವೆಂದು ಭಾವಿಸಿ ಸುಧಾರಣೆ ಹೊಂದುವ ವ್ಯವಹಾರ ಚತುರರು. ಅವರ ಸಂಪತ್ತೆಲ್ಲಾ ಏಕ ಗಂಟಿನಿಂದ ಬಗಳೊಳಗೆ ಬೀಳುವ ಆವಶ್ಯಕತೆಯು ಹಿಟ್ಲರನಿಗಿತ್ತು. ಪ್ರಜೆಗಳ ಲಕ್ಷ್ಮಿಯನ್ನು ಬೇರೆ ಕಡೆಗೆಳೆದು, ಅವರು ಸ್ವಂತ ಭವನಗಳನ್ನು ಮರೆಯುವಂತೆ ಮಾಡುವ ಜಾಣ್ಮೆಯನ್ನಂತೂ ಸರ್ವಾಧಿಕಾರಿಗಳು ಸದಾಕಾಲ ತೋರಿಸಬೇಕಾಗುವದು. ಆದರೆ ಹಾಗೆಮಾಡಲು ಏನಾದರೊಂದು ನೆವನ ಬೇಕಲ್ಲ. ಮನುಷ್ಯನ ಮುಖನೋಡಿ ಮಾತಾಡಲಿಚ್ಛೆಯಿಲ್ಲದವನು ಹುಲ್ಲುಕಡ್ಡಿಯನ್ನಾದರೂ ಹಿಡಿದು ಬೈಯ್ಯಬೇಕಂತೆ. ಹಾಗೆ ಲೋಕನೀತಿಗಲ್ಲವಾದರೂ ನೆವಕ್ಕೊಂದು ಕಾರಣವನ್ನು ದೊರಕಿಸಿಕೊಳ್ಳುವ ಸಲುವಾಗಿ ಹೆರ್. ರೇತರನ್ನು ಕೊಲೆ ಮಾಡಲು ಹಿಟ್ಲರನೇ ಸಂಚು ನಡಿಸಿದನೆಂದು ನಂಬಬಹುದು. ಹೀಗಾಗಬಹುದೆಂದು ಪ್ಯಾರಿಸಿನಲ್ಲಿ ನಾಜೀತತ್ವ ಪಠಿಸುತ್ತಾ ಇದ್ದ ಆ ದುರ್ದೈವೀ ರೇತ್ ಥೋರೆಯಾದರೂ ಊಹಿಸಿರಬಹುದೆ? ಇನ್ನು ಕೊಲೆಗಡಕ ಯಹೂದಿಯ

ನಿಗೆ
ಗಳೀ
ಕೊ
ಸೂ
ಯು
ಮೋ
ಆಧ
ತಪ
ಯ
ಲ್ಪಡ
ಅವ
ರನ್ನು
ಅಮ
ದೇಶ
ಅವ



ಮ
ಎ

# ಎಂದೆ ಇರುವ ಸೋಜಿಗಗಳು

ನಾಜಿ
ೀತರ
ಃಖ
ತ್ತು!
ಗಳ
ನನ್ನೇ
ದು

ತನೆ
ಅಟ್ಟ
ಳಿನ
! ಅವ
ನ್ನು,
ರುವ
ಯೂ
ಳುವ



ಗತಿ
ೂಡನೆ

ೆ.

ನ್ಸಿನಲ್ಲಿ
ರ್ಮಿಟ'
ಗ ಯಾ
ಡದು'

# ಯಹೂದಿಯರು ನಿಂತಲ್ಲೆಲ್ಲಾ ಶನಿಕಾಟ!

ಎಂದು ಸ್ಪಷ್ಟವಾಗಿ ಬರೆಯಲ್ಪಡುತ್ತದೆ. ಅಲ್ಲಿ ಯಹೂದಿಗಳು ಖಾಸಗೀ ಜನರಲ್ಲಿ ಆಗಾಗ ದೊರೆಯುವ ದಿನಗೂಲಿಯಿಂದ ಕಾಲತೆಗೆಯಬೇಕಾಗಿದೆ. ಪ್ಯಾರಿಸಿನ ಒಂದು ರಸ್ತೆಯಲ್ಲಿ ಐಸ್ ಕ್ರೀಮನ್ನು ಹೊತ್ತು ದಿನಕ್ಕೆ ನಲ್ವತ್ತು ವೈಲಷ್ಟು ನಡೆದು ಮಾರುತ್ತಿರುವ ಮುದಿ ಯಹೂದಿಯನೊಬ್ಬನನ್ನು ವಿಚಾರಿಸಿದಾಗ ಅವನು ಜರ್ಮನಿಯಲ್ಲಿ ಪ್ರೊಫೆಸರನಾಗಿದ್ದವನೆಂದು ತಿಳಿಯಿತು. ಈಗ ಪ್ಯಾರಿಸ್ ಪಟ್ಟಣ ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ ಜ್ಯೂಜನರನ್ನು ಸೇರಿಸಕೂಡದೆಂಬ ನಿರ್ಬಂಧವಿದೆ. ಜರ್ಮನಿಯಲ್ಲಿ ವಕೀಲರಾಗಿದ್ದವರು ಇಲ್ಲಿ ಮನೆಯಿಂದ ಮನೆಗೆ ಹಣ್ಣುಹಂಪಲುಗಳನ್ನು ಮಾರುವದನ್ನೂ, ಲೇಡಿ ಡಾಕ್ಟರರಾಗಿದ್ದ ಜ್ಯೂಮಹಿಳೆಯರು ಕಸ ಗುಡಿಸುವ ಕೆಲಸದಲ್ಲಿರವದನ್ನೂ ಅಲ್ಲಲ್ಲಿ ಕಾಣಬಹುದಾಗಿದೆ. ಸಾಮಾನ್ಯ ಜ್ಯೂಜನರು ಪ್ರಯತ್ನಪಟ್ಟಲ್ಲಿ ಸಣ್ಣ ಸಣ್ಣ ಕಾರ್ಖಾನೆಗಳಲ್ಲಿ ಕಾಯಂ ಕೆಲಸಪಡಕೊಳ್ಳಲು ಸಾಧ್ಯವಿದೆ. ಹಾಗೆ ಕೆಲಸ ಕೊಡುವವರು ಫ್ರೆಂಚ್ ಕೆಲಸಗಾರರಿಗೆ ಕೊಡುವ ಅರೆವಾಸಿಯಷ್ಟು ತಲಬನ್ನು ಮಾತ್ರವೇ ಜ್ಯೂಜನರಿಗೆ ಕೊಡಲು ಸಿದ್ಧರಿರುವರು. ಅದಕ್ಕೂ ಒಪ್ಪಿ ಕೆಲಸಕ್ಕೆ ನಿಂತಲ್ಲಿ, ಫ್ರೆಂಚ್ ಕೆಲಸಗಾರರು ಕೂಡಲೇ ನಾಜಿಗಳಂತೆ ಇವರ ಮೇಲೆ ರೇಗಿ ಬಿದ್ದು, ನಾನಾವಿಧ ತೊಂದರೆಗಳನ್ನೊಡ್ಡಿ ಓಡಿಸಿಬಿಡುವರು. ಅಂತೂ ಯಹೂದಿಗಳು ಹೋದಲ್ಲಿ ಜೀವನ ಸಾಗಿಸುವದು ಅಸಾಧ್ಯವಾಗಿ ಪರಿಣಮಿಸಿದೆ.

**ಫೋರ್ಜರಿ ಪಾಸ್‌ಪೋರ್ಟಿನ ಸಂಘ.**



ಯಹೂದಿಗಳನ್ನು ಸದೆ ಬಡಿ ದಟ್ಟುತ್ತಿರುವ **ಹಿಟ್ಲರ್.**

ಈ ನಡುವೆ ಯಹೂದಿಗಳಿಗೆ ಠಕ್ಕು ಪಾಸುಪೋರ್ಟನ್ನೊದಗಿಸಿ ಕೊಡುವ ಒಂದು ವ್ಯವಸ್ಥಿತ ಸಂಘವು ಫ್ರಾನ್ಸಿನಲ್ಲಿ ಸ್ಥಾಪಿಸಲ್ಪಟ್ಟಿದೆ. ಸಾಮಾನ್ಯ ಪೋಲಿಸನನ್ನು ಮಂಕುಗೊಳಿಸುವ ಹಲ್ಕಾ ಪಾಸ್‌ಪೋರ್ಟಿನಿಂದ ಹಿಡಿದು, ಯಾರಿಂದಲೂ ತಿಳಿಯಲು ಅಸಾಧ್ಯವಾಗುವಂತಹ ಉತ್ತಮ ಪಾಸ್‌ಪೋರ್ಟಿನವರೆಗೆ, ವಿವಿಧ ತರಗತಿಯ ಪಾಸ್‌ಪೋರ್ಟುಗಳು ಬೆಲೆಯ ಹೆಚ್ಚುಕಡಿಮೆಯನ್ನನುಸರಿಸಿ ದೊರಕುತ್ತವೆ. ಅತ್ಯುತ್ತಮ ಮಾದರಿಗೆ ೨೦೦೦ ಪೌಂಡಿನ ವರೆಗೆ ಕೊಡಬೇಕಾಗುವದು. ಎಲ್ಲಾ ಪಾಶ್ಚಾತ್ಯ ರಾಷ್ಟ್ರಗಳಿಗೂ, ಅಪೇಕ್ಷಿಸಿದಂತೆ ಹಣ ತೆತ್ತು ಪಾಸ್‌ಪೋರ್ಟು ಪಡಕೊಳ್ಳಬಹುದು. ಜರ್ಮನಿ ಮತ್ತು ಆಸ್ಟ್ರಿಯಾಗಳ ಬೆಲೆ ಬಹಳ ಕಡಿಮೆ. ಅಲ್ಲಿಗೆ ಪಾಸ್‌ಪೋರ್ಟ್ ಕೇಳುವದಕ್ಕಿಂತ ಸೀದಾ ಯಮಲೋಕಕ್ಕೆ ಪಾಸ್‌ಪೋರ್ಟು ಪಡಕೊಳ್ಳುವದೇ ಜ್ಯೂಜನರ ಮಟ್ಟಿಗೆ ವಾಸಿಯಲ್ಲವೆ?

ಇನ್ನು ಈ ಸಂಘವು ಯಹೂದೀ ಸ್ತ್ರೀಪುರುಷರಿಗೆ ಸ್ಥಳೀಕ ನಾಗರಿಕ ಹಕ್ಕು ದೊರೆಯುವಂತೆ, ವಧೂವರರನ್ನು ಕೂಡ ಒದಗಿಸಿಕೊಡುವದು. ಪಟ್ಟಣಿಗತನ' ಬರಬೇಕಾದರೆ 'ಸ್ಥಳೀಕರೊಡನೆ ವಿವಾಹ ಸಂಬಂಧವಿರಬೇಕೆಂಬ ನಿಯಮವು ಹೆಚ್ಚಿನ ಪಾಶ್ಚಾತ್ಯ ರಾಷ್ಟ್ರಗಳಲ್ಲಿದೆ.

ಫೋರ್ಜರಿ ಸಂಘದವರ ಇನ್ನೊಂದು ಮಹತ್ಕಾರ್ಯವೆಂದರೆ ಜರ್ಮನಿಯಿಂದ ಹೊರ ಹೋಗಲಿಚ್ಛಿಸುವ ಯಹೂದಿಗಳಿಗೆ ಅವರ ನಿವಾಸದಲ್ಲೇ ಪಾಸ್‌ಪೋರ್ಟನ್ನೊದಗಿಸಿಕೊಟ್ಟು ಹೊರಗೆ ತಂದು ಬಿಡುವದು. ಅಂತೂ ಯಹೂದೀ ಮರ್ದನವು, ಮನುಷ್ಯನ ಎಲ್ಲಾ ತರದ ರಾಕ್ಷಸೀ ಭಾವನೆಗಳಿಗೆ ಒಂದು ಉತ್ತೇಜನವಾಗಿ ಪರಿಣಮಿಸಿದೆ ಎಂಬುದರಲ್ಲಿ ಅನುಮಾನವಿಲ್ಲ.

# ಜಪಾನಿನ ಯುದ್ಧೋತ್ತೇಜಕ ಪದ್ಧತಿಗಳು!

## "ನಾವು ಇನ್ನೊಂದು ಬಾರಿ ಒಟ್ಟಾಗೋಣ" "ಖಂಡಿತವಾಗಿಯೂ ಒಟ್ಟಾಗುವೆವು".

ರಣ ಕ್ಷೇತ್ರದಲ್ಲಿ ಯಾರಾದರಿಬ್ಬರು ಜಪಾನ್ ಸೋಲ್ಜರರು ಒಟ್ಟುಗೂಡಿದಾಗ ಹಾಗೂ ಪರಸ್ಪರ ಅಗಲುವಾಗ ಹೇಳಿಕೊಳ್ಳುವ ಮಾತುಗಳಿವು. ಯುದ್ಧವಾರ್ತಾದಾಯಕನೊಬ್ಬನಿಗೆ ಈ ಮಾತುಗಳನ್ನು ಕೇಳಿ ಕೇಳಿ ಸಾಕಾಯಿತು. ಯಾವಾಗಲೂಹಾಗೆ ಹೇಳಿಅಗಲುವವರು ಆಗಲೇ ಒಟ್ಟಾಗುವ ಸಂಭವವಿದ್ದರೂ, ಈ ಮಂತ್ರವನ್ನು ಜಪಿಸಿಯೇ ತೊಲಗುತ್ತಿದ್ದರು. ವಾರ್ತಾದಾಯಕನು ಅದರ ಅರ್ಥವೇನೆಂಬುದನ್ನು ತಿಳಿಯುವುದಕ್ಕಾಗಿ ಪ್ರಯತ್ನಿಸಿದ. 'ನಾವು ಇನ್ನೊಂದು ಬಾರಿ ಒಟ್ಟಾಗೋಣ' ಎನ್ನುವದರ ಅರ್ಥವೆಂದರೆ ಜಪಾನಿನ ಪವಿತ್ರಯುದ್ಧ ಸ್ಮಾರಕವಾದ 'ಯಾಸುಕುನಿ'ಯಲ್ಲಿ ನಾವು ಒಟ್ಟಾಗೋಣ ಎಂಬುದೆ.

### ಯಾಸುಕುನಿ ಸ್ಮಾರಕ

ಯಾಸುಕುನಿ ಸ್ಮಾರಕವೆಂದರೆ ಜಪಾನ್ ಸರಕಾರವು ಯುದ್ಧದಲ್ಲಿ ಮಡಿದವರ ಸ್ಮರಣೆಗಾಗಿ ರಚಿಸಿರುವ ಜಪಾನರ ಪವಿತ್ರಸ್ಥಳ. ನಾವು ಯಾಸುಕುನಿಯಲ್ಲಿ ಒಟ್ಟಾಗೋಣ-ಎನ್ನುವ ಸೋಲ್ಜರನ ಮಾತಿನಲ್ಲಿ ಜಪಾನ್ ಸಾಮ್ರಾಜ್ಯಕ್ಕಾಗಿ ಹೋರಾಡಿ ಸಾಯಬೇಕೆಂಬ ಆವೇಶ ವೆದ್ದು ಕಾಣುತ್ತದೆ. ನಮ್ಮಲ್ಲಿಯ ರಾಮ ನಾಮದಂತೆ ಜಪಾನ್ ಸೋಲ್ಜರರು ಒಬ್ಬರೊಬ್ಬರನ್ನು ಸಂಧಿಸಿದಾಗ ತಪ್ಪದೆ ಹೊರಬರುವ ಈ ಮಂತ್ರಗಳಿಂದಲೇ ಗೊತ್ತಾಗುತ್ತದೆ.-ಜಪಾನಿನಲ್ಲಿ ಸಾಮ್ರಾಜ್ಯಕ್ಕಾಗಿ ಹೋರಾಡಿ ಸಾಯಬೇಕೆಂಬ ತತ್ವವು ಯಾವ ರೀತಿ ಪ್ರಚಾರದಲ್ಲಿದೆಯೆಂದು.

ಯಾಸುಕುನಿ ಸ್ಮಾರಕದ ವಾರ್ಷಿಕೋತ್ಸವವು ನವಂಬರ ತಿಂಗಳ ಅಂತ್ಯ ಭಾಗದಲ್ಲಿ ನಡೆಯುವುದು. ಆ ಕಾಲದಲ್ಲಿ ಇಡೀ ಜಪಾನು ರಾಷ್ಟ್ರವು ಆ ಉತ್ಸವವನ್ನು ಆಚರಿಸಿ ಮೃತ ಸಿಪಾಯಿಗಳ ಮೇಲಿರುವ ಗೌರವವನ್ನು ತೋರ್ಪಡಿಸುವದು. ಅದೇ ಸಮಯ ಸೈನಿಕರಲ್ಲಿ ಹಾಗೂ ಇಡೀ ರಾಷ್ಟ್ರದಲ್ಲಿ ಯುದ್ಧ ಸ್ಫೂರ್ತಿಯನ್ನೂ ತುಂಬಿಸುವದು.

### ಕುದುರೆಗಳ ಮೇಲಿನ ಪ್ರೇಮ.

ಜಪಾನು ರಾಷ್ಟ್ರವು ಮೃತ ಸೈನಿಕರ ಸ್ಮಾರಕವನ್ನಷ್ಟೇ ಅಲ್ಲ; ಯುದ್ಧ ಕಣದಲ್ಲಿ ಸತ್ತ ಕುದುರೆಗಳ ನೆನಪಿಗಾಗಿ ಎಷ್ಟೋ ಸ್ಮಾರಕಗಳನ್ನೂ ರಚಿಸಿಕೊಂಡಿದೆ. ಜಪಾನ್ ಸೈನಿಕರಿಗೆ ಅತಿ ಹೆಚ್ಚಿನ ಆಸೆಯಿರುವದು ತಮ್ಮ ಪ್ರಾಣದ ಮೇಲಲ್ಲ; ಯುದ್ಧ ಕಾಲದಲ್ಲಿ ತಮಗೊದಗುವ ಪ್ರಾಣಿಗಳ ಮೇಲೆ. ಸೋಲ್ಜರರು ಕುದುರೆ, ನಾಯಿಗಳನ್ನು ಯುದ್ಧಕಾಲದಲ್ಲಿ ಕಂಡ ವಿಧಾನಗಳ ಕುರಿತು ಹಲವು ವಿಚಿತ್ರ ಕಥೆಗಳಿವೆ. ವಿರೋಧಿಗಳ ಗುಂಡಿನೇಟಿಗೆ ಎದೆಗೊಟ್ಟು ತನ್ನ ಹಯವು ಕೈಕಾಲು ಬಡಿದುಕೊಂಡು ಪ್ರಾಣಬಿಡುವಾಗ-ತನ್ನ ಹೊಟ್ಟೆಯ ಪುತ್ರನಿಗೀ ಅವಸ್ಥೆಯೊದಗಿದರೆ ಹೇಗೋ, ಹಾಗೆ ಜಪಾನ್ ಸೈನಿಕನು ಎದೆ ಬಡಕೊಂಡು ಅತ್ತುಬಿಡುವನು. ಕೋವಿಯನ್ನು ಒಂದು ಬದಿಗೆ ಬಿಸಾಡಿ ಕುದುರೆಯ ಹೆಣದ ಮೇಲೆ ಬಿದ್ದು, ಸೈನಿಕನು ತನಗಾ ಕುದುರೆ ಮಾಡಿರುವ ಉಪಕಾರವನ್ನು ಹೇಳಿ ಹೇಳಿ 'ಗೋಳೋ ಎನ್ನುವನು!; ಆಗ ಅವನ ಮೇಲಾಫೀಸರರೂ ಸುತ್ತುಗಟ್ಟಿ ಸಹಾನುಭೂತಿ ತೋರಿಸುವ ಸಲುವಾಗಿ ತಾವೂ ಕಣ್ಣೀರಿಡುವರು. ಇಂತಹ ದೃಶ್ಯಗಳು ಜಪಾನ್ ಸೈನಿಕದಳಗಳಲ್ಲಿ ಸರ್ವಸಾಮಾನ್ಯವಾಗಿವೆ.

ಒಮ್ಮೆ ಒಬ್ಬ ಜಪಾನು ಸೈನಿಕನ ಕುದುರೆಯು ರಭಸದಿಂದ ಹರಿಯುತ್ತಿರುವ ಪ್ರವಾಹವನ್ನು ದಾಟು

ವಾಗ ಹೆಜ್ಜೆತಪ್ಪಿ ತೇಲಲಾರಂಭಿಸಿತು. ಕೂಡಲೇ ಸೈನಿಕನು ಹೊಳೆಗೆ ಹಾರಿ ಕುದುರೆಯ ಮೈಯನ್ನು ತಬ್ಬಿ ಹಿಡಿದುಕೊಂಡ. ಮೇಲಿನಿಂದ ಕೆಳಕ್ಕೆ ಭೋರ್ಗರೆಯುತ್ತಾ ಧುಮುಕುತ್ತಿದ್ದ ಆ ಪ್ರವಾಹದಲ್ಲಿ ಅಡಗಿಹೋದ ಇಬ್ಬರೂ ಮತ್ತೊಮ್ಮೆ ಕಾಣಸಿಗಲಿಲ್ಲ!

### ಕುದುರೆಗಳಿಗೂ ಸ್ಮಾರಕ.

ಯುದ್ಧಾಶ್ವಗಳಿಗೆ ಜಪಾನಿನಲ್ಲಿರುವಷ್ಟು ಗೌರವ ಬೇರಾವ ದೇಶದಲ್ಲಿಯೂ ಇಲ್ಲವೆನ್ನಬಹುದು. ಅವುಗಳಿಗೆ ದೊರೆಯುವ ಸ್ಥಾನಮಾನಗಳು ಸೋಲ್ಜರರ ಸ್ಥಾನಮಾನಗಳಿಗಿಂತ ಯಾವವಿಧದಲ್ಲಿಯೂ ಕಡಿಮೆಯವುಗಳಲ್ಲ. ಧೈರ್ಯದಿಂದ ಹೋರಾಡಿ ಮಡಿದ ಹಯಗಳ ಉಪಕಾರ ಸ್ಮರಣೆಯನ್ನು ಸ್ವತಃ ಸರಕಾರವೇ ಹಲವು ವಿಧದಿಂದ ಮಾಡಿದುದಿದೆ. ಇತ್ತೀಚೆಗೆ ಅಂತಹ ಸ್ಮಾರಕಕ್ಕಾಗಿ ಜಪಾನು ಸರಕಾರವು ಒಂದು ಹೊಸ ತೋರಣಪದ್ಧತಿಯನ್ನು ಜ್ಯಾರಿಗೆ ತಂದಿರುವದು. ಕಳೆದ ಒಕ್ಟೋಬರ್ ತಾ. ೧೧ರಲ್ಲಿ ಜಪಾನ್ ಯುದ್ಧಮಂತ್ರಿಗಳು ಒಂದು ಆಜ್ಞೆ ಹೊರಡಿಸಿ, ಇತ್ತೀಚೆಗಿನ ಬಿಕ್ಕಟ್ಟಿನ ಕಾಲಗಳಲ್ಲಿ ಸ್ಮರಣೀಯ ಧೈರ್ಯಸಾಹಸಗಳನ್ನು ಪ್ರದರ್ಶಿಸಿದ ಕುದುರೆಗಳನ್ನು, ಸೋಲ್ಜರರ ಶೃಂಗಾರದಂತಹ ಭಂಗಾರದ ರಣಹದ್ದು ಮತ್ತು ಉದಿತ ಸೂರ್ಯನ ಗುರುತುಗಳಿರುವ ತೋರಣಗಳಿಂದ ಅಲಂಕರಿಸಬೇಕೆಂದು ತಿಳಿಸಿರುವರು.

### ಸ್ಮಾರಕ ಪದ್ಧತಿಯಲ್ಲಿ ಸುಧಾರಣೆ.

ಆದರೆ ಇವೆಲ್ಲಾ ನಾಯಕಕುದುರೆಗಳ ಅಮೂಲ್ಯ ಸೇವೆಗೆ ತಕ್ಕ ಸ್ಮಾರಕಗಳೆ? ಇವುಗಳಿಗಿಂತ ಹೆಚ್ಚಿಗೆ ಪರಿಣಾಮಕಾರಿಯಾಗಬಲ್ಲ ಇತರ ಉಪಾಯಗಳಿಲ್ಲವೆ? ಜಪಾನಿನ ಪ್ರಸಿದ್ಧ ಲೇಖಿಕೆಯಾದ 'ಹನಾಯೊ ಇಕುಟಾ' ಎಂಬವಳು ಈ ಕುರಿತು ಕೆಲವು ಅಮೂಲ್ಯ ಸೂಚನೆಗಳನ್ನು ಜಪಾನ್ ಪತ್ರಿಕೆಯೊಂದರಲ್ಲಿ ಪ್ರಕಟಿಸಿದಳು. ಹನಾಯೋನ ಅಭಿಪ್ರಾಯದಂತೆ ಸತ್ತ ಕುದುರೆಯ ಕಾರ್ಯವನ್ನು ಅಂತೆಯೇ ಮಾಡಬಲ್ಲ ಇನ್ನೊಂದು ಕುದುರೆಯನ್ನು ಆ ಸ್ಥಾನದಲ್ಲಿ ಇರಿಸುವದೇ ಮೃತ ಕುದುರೆಯಯೋಗ್ಯ ಸ್ಮಾರಕವಾಗಿದೆ. ಯುದ್ಧದಲ್ಲಿ ಬಲಿಯಾದ ಕುದುರೆಯ ಆತ್ಮಕ್ಕೆ ಶಾಂತಿ ದೊರಕಿಸಿಕೊಡುವ ನಿಜವಾದ ಉಪಾಯವಿದು-ಎಂದವಳಅಭಿಪ್ರಾಯ. ಗೋರಿಗಳನ್ನು ಕಟ್ಟುವ ಹಣದಿಂದ ಗಟ್ಟಿಮುಟ್ಟಾದ ಬೀಜದ ಕುದುರೆಗಳನ್ನು ಕೊಂಡು ಕೊಂಡು ಉತ್ತಮ ಕುದುರೆಗಳನ್ನು ನಿರ್ಮಿಸುವ ಜೀವಂತ ಸ್ಮಾರಕವಲ್ಲವೆ? ಎಂದು ಹನಾಯೋನಳ ಪ್ರಶ್ನೆ. ಜಪಾನರು ಚೀನದಲ್ಲಿ ಗೆದ್ದುಕೊಂಡ ಮುಂಚುಕುವೋ ಪ್ರದೇಶದಲ್ಲಿ ಇಂತಹ ಬೀಜದ ಹಯಗಳನ್ನುತಯಾರಿಸುವ ಕಾರ್ಯವು ಇಷ್ಟರಲ್ಲೇ ಕೈಗೊಳ್ಳಲ್ಪಟ್ಟಿದೆ. ಅಲ್ಲಿ ಅದಕ್ಕಾಗಿ ಒಂದು'ಬ್ಯೂರೋ' ತೆರೆಯಲ್ಪಟ್ಟಿದೆ. ಜಪಾನಿನಲ್ಲೂ ಈ ಕಾರ್ಯಕ್ರಮವು ಜಾರಿಗೆ ಬಂದಲ್ಲಿ, ಮೃತನಾಯಕಕುದುರೆಗಳ ಸ್ಮಾರಕವು ಇನ್ನಷ್ಟು ಪರಿಣಾಮಕಾರಿಯಾಗುವದೆಂದು ಊಹಿಸಲಾಗಿದೆ.

---

(೨೫ನೇ ಪುಟದಿಂದ)

ಕ್ಕಾಗಿ ಅದರ ಸಂಪಾದಕರಾಗಿದ್ದ ಶ್ರೀ. ಪಿ. ರಾಮರಾಯ ಮಲ್ಯರ ಸ್ವಾತಂತ್ರ್ಯ ಪ್ರೇಮವನ್ನು ಅಭಿನಂದಿಸುತ್ತೇವೆ.

### ಕಾಂಗ್ರೆಸ್ ಧ್ಯೇಯ.

ಕಾಂಗ್ರೆಸ್ ಕಮಿಟೆಯ ಇತ್ತಂಡೆಗಳೊಳಗಿನ ಕಚ್ಚಾಟದಿಂದಾಗಿ 'ರಾಷ್ಟ್ರಬಂಧು ಮತ್ತು ಅದರ ಮಾಲಕರಾಗಿದ್ದ ಡಾ. ಯು. ರಾಮರಾಯರ ಮೇಲೂ ಕೆಸರೆರಚುವಷ್ಟು ಜಿಲ್ಲೆಯ ಪತ್ರಿಕೆಯೊಂದು ಮುಂದರಿದಿರುವುದು. ಪತ್ರಿಕಾಧರ್ಮ, ಮತ್ತು ಕಾಂಗ್ರೆಸ್ ಧ್ಯೇಯದ ಎಲ್ಲೆಯನ್ನು ಮೀರದೆ ನ್ಯಾಯಬದ್ಧ ಟೀಕೆಯನ್ನು ರಾಷ್ಟ್ರಬಂಧುವು ಮಾಡಿದ ಮಾತ್ರಕ್ಕೆ ಆ ಕುರಿತು ಎಸೆಂಬ್ಲಿಯ ಕಾಂಗ್ರೆಸ್‌ಪಾರ್ಟಿ ಕಾರ್ಯದರ್ಶಿಗಳಿಗೆ ಪತ್ರ ಬರೆದು ಟೀಕಿಸುವಷ್ಟು ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳು ರೇಗಿದ್ದರು. ಈ ಟೀಕೆಗೆ ಡಾ| ಯು. ರಾಮರಾಮರಾಯರು 'ರಾಷ್ಟ್ರಬಂಧುವೇ ಕಾಂಗ್ರೆಸ್ ಧ್ಯೇಯದ ಪತ್ರಿಕೆ' ಎಂದು ಉತ್ತರವಿತ್ತುದರಲ್ಲಿ ತಪ್ಪೇನು? ಅಧಿಕಾರಿಗಳ ತಪ್ಪನ್ನು ತೋರಿಸಿಕೊಡುವದು ಕಾಂಗ್ರೆಸ್ ತತ್ವಕ್ಕನುಗುಣವಾಗಿದೆ ಹೊರತು ವಿರುದ್ಧವಾಗಿಲ್ಲ. ಸ್ವತಂತ್ರ ಭಾರತದಂತಹ ದೊಡ್ಡ ಧ್ಯೇಯವುಳ್ಳ ಪತ್ರಿಕೆಯು ಆ ಕುರಿತು ಕ್ಷುಲ್ಲಕ ಟೀಕೆಮಾಡಿರುವದು ಆಶ್ಚರ್ಯಕರವಿದೆ. ತನ್ನ ಧ್ಯೇಯವನ್ನನುಸರಿಸುವದರಲ್ಲಿ ಹೊರತು, ಅನ್ಯರ ಧ್ಯೇಯವನ್ನು ಅಲ್ಲಗಳೆಯುವದರಲ್ಲಿ 'ಕಾಂಗ್ರೆಸ್ ಧ್ಯೇಯವಿಲ್ಲ' ಎಂದು ನಮ್ಮ ಭಾವನೆ.

---

# ಯುರೋಪಿಯಾನರು ಭಾರತೀಯರಿಂದ ಕಲಿಯತಕ್ಕದ್ದೇನು?

## ನೀರಿನ ಉಪಯೋಗ ಮತ್ತು ನೈರ್ಮಲ್ಯ!


**ಜೀವನದ ಪ್ರತಿಯೊಂದು ವಿಭಾಗದಲ್ಲೂ ಪಾಶ್ಚಾತ್ಯರನ್ನು ಅನುಕರಿಸುವ ಚಟವು ಹಿಂದೀಯರಲ್ಲೀಗ ಅಧಿಕವಾಗುತ್ತಾ ಬರುತ್ತಿದೆ. ಯುರೋಪು ಸಂಚಾರ ಮಾಡಿ ಬಂದ ಪ್ರೊಫೆಸರ್ ಎಸ್. ಆರ್. ಮಲ್ಕಾನಿಯವರ ಈ ಕೆಳಗಿನ ತುಲನೆಗಳು ಈ ಸಂದರ್ಭದಲ್ಲಿ ಗಮನಾರ್ಹವಾಗಿವೆ.**

ಯುರೋಪಿನ ಸ್ವಲ್ಪ ದಿನಗಳ ಅನುಭವದಿಂದ ನನಗೆ ಇದೊಂದು ಖಚಿತವಾಯಿತು——ಯುರೋಪಿನಲ್ಲಿರುವವರಿಗಿಂತ ನಾವೆಷ್ಟೋ ಶುಚಿಯಾಗಿರುವೆವು. ದೃಷ್ಟಾಂತಕ್ಕಾಗಿ, ಯುರೋಪಿಯಾನರ ಹಲ್ಲುಗಳಿಗಿಂತ ನಮ್ಮ ಹಲ್ಲುಗಳು ಬಿಳಿಯಾಗಿ, ಸ್ವಚ್ಛವಾಗಿ ಹಾಗೂ ಗಟ್ಟಿಯಾಗಿವೆ. ನಮ್ಮಲ್ಲಿ ಬಿಳಿ ಜನರಲ್ಲಿದ್ದಷ್ಟು ಹೊಗೆಬತ್ತಿ ಸೇದುವ, ಕುಡಿಯುವ ಮತ್ತು ಮಾಂಸ ತಿನ್ನುವ ಅಭ್ಯಾಸವಿಲ್ಲ. ನಾವು ನಮ್ಮ ಊಟವನ್ನು ಕೈತೊಳೆದು, ಉಜ್ಜಿಕೊಂಡು ಮುಗಿಸುತ್ತೇವಾದರೆ, ಯುರೋಪಿಯಾನನ ಊಟ ಮುಗಿಯುವದು ಹೊಗೆ ಬಿಡುವದರೊಡನೆ. ಯುರೋಪಿನಲ್ಲಿ ಸ್ವಚ್ಛವಾಗಿರುವ ಹಲ್ಲುಗಳನ್ನು ನೀವು ಯಾರಾದರೊಬ್ಬನ ಬಾಯಿಯಲ್ಲಿ ನೋಡಿದಿರಾದರೆ, ಅದು ಡಾಕ್ಟರರಿಟ್ಟ ಕೃತಕ ಹಲ್ಲುಗಳೆಂದು ನಿಸ್ಸಂಶಯವಾಗಿ ತಿಳಿಯಿರಿ. ಒಮ್ಮೆ ಅಮೇರಿಕನ್ ಮಹಿಳೆಯೊಬ್ಬಳು ಹೆಗ್ಗಳಿಕೆಯಿಂದ ನನ್ನೊಡನೆ "ನಮ್ಮಲ್ಲಿ ಲೋಕ ಪ್ರಸಿದ್ಧರಾದ ದಂತವೈದ್ಯರುಗಳೆಷ್ಟೋ ಮಂದಿ ಇದ್ದಾರೆ" ಎಂದಳು. ನಾನು ಕೂಡಲೇ ಉತ್ತರ ಕೊಟ್ಟೆ—"ಇದರಿಂದ ನಿಮ್ಮ ಬಾಯಿಯಲ್ಲಿ ಉತ್ತಮ ಹಲ್ಲುಗಳಿವೆಯೆಂಬ ಅರ್ಥವಾಯಿತೆ?". ನಾವು ಧರಿಸುವ ಮೆಟ್ಟುಗಳಿಂದ ನಮ್ಮ ಕಾಲ್ಬೆರಳುಗಳು ತಾವರೆಯೆಸಳಿನಂತೆ ಅರಳಿಕೊಂಡಿರಲು ಅನುಕೂಲವಿದೆ. ಅವುಗಳ ಮೇಲೆ ಬೇಕಾದಷ್ಟು ಗಾಳಿ ಹೊಡೆಯುತ್ತದೆ. ಆದರೆ ತನಗೆ 'ತಾವರೆ ಪಾದ'ವಾಗಬೇಕೆಂದು ಪಾದಗಳನ್ನು ಬೂಟ್ಸುಗಳಲ್ಲಿ ಬಗ್ಗಿಸಿ ಹದಮಾಡಿಕೊಂಡ ಅಲ್ಲಿಯ ಲೇಡಿಯ 'ಅಡಿದಾವರೆ'ಯನ್ನು ನೀವು ಕಂಡಿರಾದರೆ ಅಸಹ್ಯಪಡದಿರಲಾರಿರಿ. ಒಬ್ಬ ಯುರೋಪಿಯಾನನು ತನ್ನ ಬೂಟ್ಸು ಮತ್ತು 'ಸೋಕ್ಸ್'ಗಳನ್ನು ಕಳಚುವ ಹೊತ್ತಿಗೆ ಬರುವ ದುರ್ವಾಸನೆಯನ್ನು ಹತ್ತಿರವಿದ್ದವನಿಗೆ ತಡೆದುಕೊಳ್ಳಲು ಸಾಧ್ಯವೇ ಇಲ್ಲ.

### ನೀರಿನ ಉಪಯೋಗ.

ಇನ್ನು ಯುರೋಪಿಯಾನರಿಗೆ ಸ್ನಾನದ ಸೊಗಸು ಏನೂ ಗೊತ್ತಿಲ್ಲ. ದಿನನಿತ್ಯ ಸ್ನಾನಮಾಡುವ ಕ್ರಮವು ಅವರಲ್ಲಿಲ್ಲ. ಎಂದಾದರೊಮ್ಮೆ ಒಂದು ತಪ್ಪಲೆಯಷ್ಟು ನೀರಿನಿಂದ ಮುಗಿಸಿಬಿಡುತ್ತಾರೆ. ಹೀಗಾಗಿ ಯುರೋಪಿಯಾನನ ಚರ್ಮದಲ್ಲಿ ಬಿಳೀ ಬಣ್ಣಮಾತ್ರವಲ್ಲ; ಜಡ್ಡು ಕಟ್ಟಿಕೊಂಡಿರುತ್ತದೆ. ಆದರೆ ನಾವು ಭಾರತೀಯರು, ಆಹಾರಕ್ಕಿಂತಲೂ ಹೆಚ್ಚಾಗಿ ಬೆಳಕು ಮತ್ತು ನೀರನ್ನು ಆಧರಿಸಿಕೊಂಡು ಬದುಕುತಿದ್ದೇವೆ. ಹಿಂದೀಯನು ರಾತ್ರಿಕಾಲ ವಸ್ತ್ರವನ್ನು ಬದಲಾಯಿಸಿ, ಬೆಳಿಗ್ಗೆ ಅದನ್ನೇಕೆ ಮಡಿಮಾಡಿಕೊಳ್ಳುತ್ತಾನೆಂಬುದು ಯುರೋಪಿಯಾನನಿಗೆ ಅರ್ಥವಾಗದ ಸಂಗತಿ. ಅವರು ಒಳಗಿನ ಕವಚವನ್ನು ಬದಲಾಯಿಸುವ ಪದ್ಧತಿಯೇ ಇಲ್ಲ. ಅಲ್ಲಿಯವರು ಅಪರೂಪವಾಗಿ ನೀರನ್ನು ಕುಡಿಯುವದಿದೆಯಾದರೂ ಅದೊಂದು ಅಗತ್ಯ ಪಾನೀಯವೆಂಬುದನ್ನು ಅವರರಿತುಕೊಂಡಿಲ್ಲ. ಈ ಸಂದರ್ಭದಲ್ಲಿ ಒಬ್ಬ ಯುರೋಪಿಯಾನನ ನೆನಪಾಗುತ್ತದೆ. ಅವನೊಬ್ಬ ಮಹಾ ಕುಡಿಕನಾಗಿದ್ದು, ಒಮ್ಮೆ ಪಾನಗಳ ಹೆಸರನ್ನು ಹೇಳುತ್ತಾ ಬಂದ. ಬ್ರಾಂಡಿ, ವ್ಹಿಸ್ಕಿ, ವೈನ್ ಮೊದಲಾದ ಎಲ್ಲಾ ರಸಗಳ ಹೆಸರುಗಳು ಅವನ ಬಾಯಿಯಿಂದ ಬಂದವಾದರೂ ನೀರಿನ ನೆನಪಾಗಲಿಲ್ಲ. ಹೇಳಿದರೂ ಗೊತ್ತಾಗಲಿಲ್ಲ. ನಾನು ಮತ್ತೂ ಪರೀಕ್ಷಿಸಿದೆ. ಸ್ವಲ್ಪಹೊತ್ತಿನ ಮೇಲೆ ಥಕ್ಕನೆ ಸ್ಮರಣೆ ಬಂದಂತಾಗಿ 'ಹೊ! ನೀರೆಂದರೆ ನಾನು ಬೆಳಿಗ್ಗೆ ಮುಖ ತೊಳೆಯುವ ರಸ' ಎಂದ. ಬ್ರಿಟಿಷರಿಂದ ನಾವು ಕಲಿಯುವ ಅಂಶಗಳಿರಬಹುದು. ಆದರೆ ನೀರಿನ ಉಪಯೋಗ ಮತ್ತು ಸ್ವಚ್ಛತೆಯನ್ನು ಅವರಂತೆ ಬಿಟ್ಟುಬಿಡಲು ಕಲಿಯಬಾರದು!

---




ಹೈದರಾಬಾದು ಸತ್ಯಾಗ್ರಹದಲ್ಲಿ ಭಾಗವಹಿಸಲು ಮಂಗಳೂರಿನಿಂದ ಸತ್ಯಾಗ್ರಹಿಗಳ ಜಾಥಾವೊಂದು ಹೋಗುವದಂತೆ. ಈ ಜಾಥಾದಲ್ಲಿ ಎಲ್ಲರೂ ಒಡ ತಾಯಂದಿರ ಜಾತರೇ ಇರಬಹುದೆನ್ನಿ!

○ ○ ○

ಹೈದರಾಬಾದಿನ ನೈಜಾಮರು ಜಗತ್ಪ್ರಸಿದ್ಧಿ ಹೊಂದಿದ ದೊಡ್ಡ ಶ್ರೀಮಂತರು. ಅವರ ಆತಿಥ್ಯ ಪಡೆಯಲು ನಮ್ಮಲ್ಲಿಯ ಶ್ರೀಮಂತ ಮುಖಂಡರೇ ಯೋಗ್ಯರಲ್ಲವೆ?

○ ○ ○

ಪಾಪದ ಕಾಂಗ್ರೆಸ್ ಕೆಲಸಗಾರರೊಡನೆ ದುರಾಗ್ರಹ ಹೂಡುವದರಲ್ಲೇನಿದೆ ಅಂತಹ ಸಾರ್ಥಕತೆ? ಹೂಡಿದರೆ ಹೂಡಬೇಕು ಸಾಕ್ಷಾತ್ ನಿಜಾಮರೊಡನೆ ಸತ್ಯಾಗ್ರಹ!

---

ವರುಷಕ್ಕಿಬ್ಬರೊಡನೆ ವಿವಾಹ ವಿಚ್ಛೇದನ ಮಾಡಿಕೊಳ್ಳುವ ಅಂಟುರೋಗ ಈವರೆಗಿದ್ದುದು ಯುರೋಪಿನಲ್ಲಿ. ಈಗ ಅದರ ಚಿಹ್ನೆ ನಮ್ಮ ಜಿಲ್ಲೆಯಲ್ಲಿಯೂ ಕಾಣ ಬರುತ್ತಿದೆಯಲ್ಲ!

○ ○ ○

ನಮ್ಮಲ್ಲಿ ಈವರೆಗೆ ಮನುಷ್ಯರಿಗೆ ತಾಗಿಲ್ಲ; ಪ್ರಥಮತಃ ಒಂದು ಪತ್ರಿಕೆಗೆ ತಾಗಿದೆ. ಮುಂದಕ್ಕೆ?

---

ಶ್ರೀ. ಹಿ. ರಾ. ಮಲ್ಯರು ಅಸಹಕಾರದ ದಿನಗಳಲ್ಲಿ ಕಾಲೇಜು ವಿದ್ಯಾಭ್ಯಾಸವನ್ನು ಅರ್ಧದಲ್ಲೇ ಬಿಟ್ಟು ಹೊರ ಬಂದವರು.

○ ○ ○

ಅಂದು ತನ್ನ ಓದು ಬರಹದಲ್ಲಿ ಆಸೆಯಿಡದಿದ್ದವರು ಇಂದು ಅದರಲ್ಲಿ ಸ್ವಾರ್ಥ ಕಟ್ಟಿಕೊಂಡಿದ್ದಾರಂತೆ. ತನ್ನ ಬರಹವನ್ನು ತಾನೇ ಬರೆಯಬೇಕೆಂಬ ಹಠವಂತೆ ಇದು ಕಾಲ ಮಹಿಮೆಯೆ?

○ ○ ○

ಒಮ್ಮೆ ಸಮತಾವಾದಿ ಪಕ್ಷದ ಮೆಂಬರಿಕೆಗೆ ಅವರ ದಸ್ಕತು ಹೇಗೋ ಬಿತ್ತು. 'ಅದು ನನ್ನ ಬರಹವಲ್ಲ' ಎಂದರು ಶ್ರೀ ಮಲ್ಯರು. 'ನಾನು-ನನ್ನದು' ಎಂಬುದನ್ನು ಬಿಡಬೇಕೆಂದಲ್ಲವೇ ಮಹಾತ್ಮರ ಬೋಧನೆ?

○ ○ ○

ಅವರು ಸಂಪಾದಕರಾಗಿದ್ದ ಸ್ವತಂತ್ರಭಾರತದಲ್ಲೊಂದು ಸಂಪಾದಕೀಯ ಲೇಖನ ಬಂತು. ಅದರಲ್ಲಿ 'ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳ ಮೇಲೆ ಅವಿಶ್ವಾಸ ಠರಾವು ಬಂದುದು ವ್ಯಕ್ತಿದ್ವೇಷದಿಂದ' ಎಂಬ ಟೀಕೆಯಿತ್ತು.

○ ○ ○

ಆಚೆ ಈಚೆ, ಅಥವಾ ಆ ಬದಿ ಈ ಬದಿ ನೋಡಿಕೊಳ್ಳಿ-ಆ ಬದಿಗನುಕೂಲವಾಗಿ ಈ ಸಂಪಾದಕೀಯ ಬರಹವಿದ್ದರೆ, ಈ ಬದಿಯವರು ತಂದಿದ್ದ ಅವಿಶ್ವಾಸ ಠರಾವಿಗೆ ಸ್ವತಃ ಸಂಪಾದಕ ಮಲ್ಯರ ಸಹಿ ಬಿತ್ತು!

○ ○ ○

ಈಗ, ಶ್ರೀ. ಮಲ್ಯರೆಲ್ಲಿದ್ದಾರೆ- ಎಂದು ಹುಡುಕುವ ಕೆಲಸ ಬಿತ್ತು. ಅಲ್ಲಿಯೋ ಇಲ್ಲಿಯೋ? ಬರಹದಲ್ಲಿಯೋ ಸಹಿಯಲ್ಲಿಯೋ?

○ ○ ○

ಸಹಿಯಲ್ಲಿ ಆ ಸಂಪಾದಕೀಯ ಬರಹದಲ್ಲಿ ಅವರಿರಲಿಲ್ಲವಂತೆ. ಸಂಪಾದಿಸಬಲ್ಲವರು ಅದನ್ನೂ ಸಂಪಾದಿಸಿದರಂತೆ.

○ ○ ○

ಇನ್ನು ಮುಂದೆ 'ಸಂಪಾದಕ' ಶಬ್ದಕ್ಕೆ 'ಯಾವುದರ' ಎಂಬ ಪ್ರಶ್ನೆ ಹಾಕಿ ವಿಚಾರಿಸಿ ಅರ್ಥ ಹೇಳಬೇಕಾಯಿತು!

○ ○ ○

ಈಗ ಶ್ರೀ. ಹಿ. ರಾ. ಮಲ್ಯರ ಮತ್ತೊಂದು ಸಹಿ ಬಿದ್ದಿದೆ. ಅದು ಸ್ವತಂತ್ರಭಾರತದ ಸಂಪಾದಕಗಿರಿಯ ರಾಜಿನಾಮೆಗೆ. ಈ ಸಹಿಯ ಕುರಿತು ಅನುಮಾನ ಬೇಡ!

---

ಯಾವ ಕೆಲಸವನ್ನಾದರೂ, ಘಳಿಗೆ ನೋಡಿ ಮಾಡಬೇಕನ್ನುತ್ತಾರೆ ಜೋಯಿಸರು. ಕೆಲಸ ಮಾಡಬಲ್ಲವರಿಗೆ ಘಳಿಗೆ ನೋಡುವ ಮತ್ತೊಂದು ಕೆಲಸವೇಕೆ-ಎನ್ನುವವರು ದ. ಕ. ಜಿಲ್ಲಾ ಕಮಿಟಿಯ ಅಧಿಕಾರಿಗಳ ಮೇಲಿನ ಅವಿಶ್ವಾಸ ಸೂಚನೆಗೊದಗಿದ ಅದೃಷ್ಟದಿಂದ ಪಾಠ ಕಲಿಯಲಿ.

○ ○ ○

ಅವಿಶ್ವಾಸ ಸೂಚನೆಯ ಮುಹೂರ್ತ ಹೊರಟಿತೆಂಬುದನ್ನು ಜೋಯಿಸರಲ್ಲದವರೂ ಹೇಳಬಹುದು ಬಹಳ-ಎಷ್ಟೋ ತಡವಾಗಿ ಹೊರಟಿತಯ್ಯ!

○ ○ ○

ಅದಕ್ಕಿಗ ಮುಂದೆ ಬರುವದಕ್ಕೂ ತಡೆ ತಡೆ ತಡೆ! ಇದಕ್ಕೆ ಬೇರಾವ ಕಾರಣವೂ ತೋರುವದಿಲ್ಲ-ಹೊರಟ ಘಳಿಗೆ ಮಾತ್ರ ಕೆಟ್ಟದು.

—ದೂಮು

# ಭಗದತ್ತನ ಬಹಿರಂಗ ಪತ್ರಗಳು

### ಮಿ. ಝುಟ್ಲೆಂಡ್ ಸಾಹೇಬರಿಗೆ

ನಮ್ಮ ಸಾಹೇಬರೇ

ನಿಮ್ಮಲ್ಲೀಗ ಮಾನವರ ಮೇಲಿನ ದಯಾದೃಷ್ಟಿಯ ಝಳಕ ಹೆಚ್ಚುತ್ತಿದೆಯೆಂದು ಯಹೂದಿಯರ ಸಂಕಷ್ಟದ ಕುರಿತು ನೀವಾಡಿದ ಮಾತುಗಳಿಂದ ತಿಳಿದು ಬರುತ್ತದೆ. ಇತ್ತೀಚೆಗ ಮಾನವ ಪ್ರಪಂಚಕ್ಕಾಗಿರುವ ಮಹದನುಗ್ರಹಗಳಲ್ಲಿ ಇದೂ ಒಂದು ಎಂದು ಭಾವಿಸಿಕೊಳ್ಳೋಣ. ಆದರೆ,ಸಾಹೇಬರೇ!ನೀವು ಜರ್ಮನ್ ಪತ್ರಿಕೆಗಳನ್ನು ಓದುವದಿಲ್ಲವೆ? ಇಂಗ್ಲಿಷರು, ಪೆಲೆಸ್ಟೈನಿನ ಅರಬರಿಗೆ ಆಹಾರ ಸಿಕ್ಕದಂತೆ ಮಾಡಿ ಅರಬರು ಅನ್ನಾನ್ನವೆಂದು ಕೂಗಿ ಕೂಗಿ ಸಾಯುವಂತೆ ಮಾಡುತ್ತಿದ್ದಾರೆಂದು ಅಲ್ಲಿಯ ಪತ್ರಿಕೆಗಳು ಪ್ರಕಟಿಸುತ್ತಿರುವವಲ್ಲ! ಹಾಗಿದ್ದಲ್ಲಿ ನೀವು ನಿಮ್ಮ ದಯಾದೃಷ್ಟಿಯನ್ನು ಪೆಲೆಸ್ಟೈನಿನ ಕಡೆಗೆ ಬೀರುವದು ಬೇಡವೇ?ಅದು ಸುಳ್ಳಾಗಿದ್ದಲ್ಲಿ ಈ ಪ್ರಚಾರದಿಂದ ಎಷ್ಟೋ ಮಾನವರಿಗೆ ನೋವಾಗಬಹುದೆಂಬುದನ್ನು ತಿಳಿದು,ಮಾನವ ದಯಾದೃಷ್ಟಿಯಿಂದಲೇ ಉಗ್ರನೋಟವೊಂದನ್ನು ಹೊರಡಿಸಿ ಜರ್ಮನ್ ಪತ್ರಿಕೆಗಳ ಕಡೆಗೆ ಬೀರಬಾರದೆ? ಅಂತೂ ಕಣ್ಣು ಮುಚ್ಚಿ ಕೊಂಡಿರುವದು ಸರಿಯಲ್ಲವೆನ್ನುವ-

ನಿಮ್ಮ ದಯಾದೃಷ್ಟಿಗೆ ಬಿದ್ದ
ಮಾನವರಲ್ಲೊಬ್ಬನಾದ
**ಭಗದತ್ತ.**

೦೦೦ ೦*೦ ೦೦೦

### ಮಿ. ಚೇಂಬರ್ಲಿನ್ ಧೊರೆಗಳವರಿಗೆ

ಶಾಂತಿಸ್ಥಾಪಕರೇ

ನೀವು ಮೊನ್ನೆ ತಾನೇ ಹಿಟ್ಲರನಿಗಿತ್ತ ಭೇಟಿಯು ಚರಿತ್ರಾರ್ಹವಾಗುವಂತೆ ಮಾಡಿಬಂದಿರಿ. ಹೀಗೆ ಸರ್ವಾಧಿಕಾರಿಗಳನ್ನು ಭೇಟಿಯಾಗುವ ಬುದ್ಧಿ ಇನ್ನೂ ನಿಮ್ಮಲ್ಲುಂಟಂತೆ. ಇಟಲಿಗೆ ಹೋಗಿ ಮುಸಲನಿಯನ್ನು ನೋಡಲಿಕ್ಕಿರುವಿರಂತೆ ನೀವು! ಲೋಕದ ಚರಿತ್ರೆಯಲ್ಲಿ ಎಲ್ಲಿ ಯಾವ ತಪ್ಪಾಗಿರುವದೋ ಎಂದು ಎಲ್ಲರೂ ಭಯಗೊಂಡಿದ್ದಾರೆ ಧೊರೆಗಳೆ! ನಿಮಗೆ ಪೂರ್ತಿ ೭೦ ವರುಷವಾದಂತೆಯೇ ನೂರಕ್ಕೆ ನೂರರಷ್ಟು ಆಯಸ್ಸು ಭರ್ತಿಯಾಗುತ್ತಾ ಬಂದ ಇನ್ನೊಂದುಸಣ್ಣ ತಪ್ಪುವಾವುದೋ- ಎಂದು ಅವರೆಲ್ಲರ ಹೆದರಿಕೆಯಂತೆ. ಅವರೇಕೆ ನಿಮ್ಮ ಮೇಲೆ ಇಷ್ಟು ಅನುಮಾನ ಪಡುತ್ತಿದ್ದಾರೆ? 'ನಾನು ಮಾಡುವದೆಲ್ಲಾ ಲೋಕಶಾಂತಿಗಾಗಿ' ಎಂದು ಹತ್ತತ್ತು ಸಲ ಹೇಳಿದರೂ ನಿಮ್ಮ ಮಾತೇ ಅವರಿಗೆ ಅರ್ಥವಾಗುವದಿಲ್ಲವೇಕೆ? ಅರ್ಥವಾಗುವಂತೆ ಮಾಡಲಾರಿರಾ?

ಇತಿ ನೀವು ಪ್ರೀತಿಸುವ
ಶಾಂತಿಯನ್ನು ಪ್ರೀತಿಸುವ
**ಭಗದತ್ತ.**

೦೦೦ ೦*೦ ೦೦೦

### ಸರ್ವಾಧಿಕಾರಿ ಮುಸಲೋನಿಯವರಿಗೆ.

ಪ್ರಿಯ ಡ್ಯೂಸ್!

ನೀವೀಗ ಫ್ರೆಂಚರ ವಸಾಹತಾದ 'ಟ್ಯೂನಿಸಿಯಾ' ಪ್ರದೇಶದ ಮೇಲೆ ಕಣ್ಣಿಟ್ಟಿರುವಿರಂತೆ, ನಿಜವೆ? ನಿಜವಾಗಿದ್ದರೆ 'ಆಗದೆ ಇರುವದಕ್ಕಿಂತ ತಡವಾಗಿ ಆಗುವದು ಮೇಲು' ಎಂಬ ಗಾದೆಯಂತೆ ಈಗಲಾದರೂ ನೀವೀಕೆಲಸಕ್ಕೆ ಕೈ ಹಾಕಿದುದು ಒಳ್ಳೆತಾಯಿತು. ಟ್ಯೂನಿಸಿಯೊದಲ್ಲಿ ಸೇಕಡಾ ೫೦ಕ್ಕೂ ಹೆಚ್ಚಿಗೆ ಇಟಲಿಯಾನರಿದ್ದಾರಂತೆ. ಮತ್ತೇನಾಗಬೇಕು? ಅವರಿಗೀಗ ಆಗುತ್ತಿರುವದೆಲ್ಲಾ ಅನ್ಯಾಯವೇ ಎಂದು ರುಜುಪಡಿಸಲುನಿಮಗೆಗೊತ್ತುಂಟಷ್ಟೆ. ಬೇಕಾದರೆ ಹಿಟ್ಲರರೊಡನೆಕೇಳಿತಿಳಿದುಕೊಳ್ಳಿ. ನೀವು ಸ್ವಲ್ಪ ತಡಮಾಡಿದಿರಿ. ಜೆಕೊಸ್ಲೊವೇಕಿಯದಲ್ಲಿ ಹಿಟ್ಲರನು ಪ್ರಾರಂಭಿಸಿದಾಗಲೇ ನೀವೂ ಅಲ್ಲಿ ಚಳವಳ ಹೂಡಬೇಕಿತ್ತು. ಮ್ಯೂನಿಚಿನಲ್ಲಿ ದಲಾದಿಯಾರ್, ಚೇಂಬರ್ಲಿನ್, ಹಿಟ್ಲರ್ ಮತ್ತು ನೀವು ಸೇರಿದ ಆ ಪಂಚಾಯತಿಕೂಟದಲ್ಲೇ ಸುಲಭದಲ್ಲಿ ತೀರ್ಪಾಗಿಹೋಗುತ್ತಿತ್ತು. ಆದರೂ ಚಿಂತಿಲ್ಲವೆನ್ನಿ. ಆ ದಿನ ಅವರನ್ನೆಲ್ಲಾ ಮ್ಯೂನಿಚಿಗೆ ಬರಮಾಡಿಸಿದವರೂ ನೀವೆ; ಇನ್ನೂ ಅಗತ್ಯಬಿದ್ದರೆ ರೋಮಿಗೆ ಅವರೆಲ್ಲಾ ಓಡಿ ಬರುವಂತೆ ಮಾಡಲಿಕ್ಕೂ ನಿಮಗೆ ಗೊತ್ತುಂಟೆನ್ನಿ. ಆದರೆ ಸದ್ಯಕ್ಕೆ ಬರಲಿರುವ ಚೇಂಬರ್ಲಿನರೊಡನೆ ಆಗಲೇ ಪ್ರಸ್ತಾಪವೆತ್ತಬೇಡಿ-ಸ್ವಲ್ಪಗೊಂದಲವೆಬ್ಬಿಸಿ ಹೆದರಿಕೆ ಹುಟ್ಟಿಸಿದ ಮೇಲೆ ಹೂತಾಡಿಸಿದರೆ ಮಾತ್ರ ಪ್ರಯೋಜನವಿದೆ- ನೆನಪಿರಲಿ,

ಇತಿ ನಿಮಆಶೆಯು ಫಲಿಸುವದನ್ನೇ
ಹಾರೈಸುತ್ತಿರುವ
**ಭಗದತ್ತ**

# "ಎಲ್ಲಾ ರಷ್ಯನರ ಚಕ್ರವರ್ತಿ"

## ಜಟ್ಕಾವಾಲನಿಗೆ ಮಹತ್ವದ ಬಿರುದು!

### ಡ್ಯೂಕ್ ಆಫ್ ಸಿರಿಲರ "ರಾಜ್ಯಭಾರ"

ರಷ್ಯದ ಝಾರರ ಕುಟುಂಬಕ್ಕೆ ಸಂಬಂಧಿಸಿದ ಗ್ರೇಂಡ್ ಡ್ಯೂಕ್ ಎಂಬ ಮಹಾಶಯ ಮೊನ್ನೆ ಪೇರಿಸಿನ ಒಂದು ಆಸ್ಪತ್ರೆಯಲ್ಲಿ ತೀರಿಕೊಂಡ.

**ಭಾವನಾರಾಜ್ಯದ ಧೊರೆ!**

ಈ ಮಹಾಶಯನು ವಿಶೇಷ ತರದ ಒಬ್ಬ ವ್ಯಕ್ತಿಯಾಗಿದ್ದ. ೧೯೧೭ರ ಮಾರ್ಚ್ ಕ್ರಾಂತಿಯಾದೊಡನೆ ಸಿರೀಲನ ಹುಚ್ಚು ಹೆಚ್ಚುತ್ತಾ ಬಂದಿತ್ತು. ಯಾವುದಾದರೊಂದು ಅಸಾಮಾನ್ಯ ಕೆಲಸವನ್ನು ಮಾಡಿ ತನ್ನ ಹುಚ್ಚುತನದ ಮಹತ್ವವನ್ನು ತೋರಿಸುವುದೇ ಈ ಮಹಾನುಭಾವನ ಜೀವನದ ಒಂದು ವೈಶಿಷ್ಟ್ಯವಾಗಿತ್ತು.

**'ಎಲ್ಲಾ ರಷ್ಯನರ ಚಕ್ರವರ್ತಿ'**

೧೯೨೪ರಲ್ಲಿ ಸೆರೆಮನೆಯಲ್ಲಿದ್ದಾಗ ಈ ರಾಜಕುಮಾರನು ನವೀನವಾದೊಂದು ಹೆಸರನ್ನು ಸ್ವತಃ ಗಳಿಸಲು ಯತ್ನಿಸಿ ನರೇಂದ್ರ ವಂಶವನ್ನೇ ನಾಚಿಕೆಗೀಡು ಮಾಡಿಬಿಟ್ಟ. 'ಎಲ್ಲಾ ರಷ್ಯನರ ಚಕ್ರವರ್ತಿ' ತಾನೆಂದು ಹೇಳಿದ್ದಲ್ಲದೆ ರೊಮನಾಫ್ ಜನಾಂಗದ ಪ್ರಥಮ ರಾಜನೆಂದು ಅವನು ಹೇಳಿಕೊಂಡ.

**'ಚಿಕ್ಕ ಅರಮನೆ'**

ಬಡತನದಲ್ಲಿದ್ದರೂ ಈ ವ್ಯಕ್ತಿಗೆ ಕೀರ್ತಿಯು ಬೇಕಿತ್ತು. ಫ್ರಾನ್ಸಿನ ಬ್ರಿಟಾನಿಯಲ್ಲಿ ಒಂದು ಚಿಕ್ಕ ಮನೆಯನ್ನು ಅವನು ತನ್ನ 'ಅರಮನೆ'ಯೆಂದು ಭಾವಿಸಿದ್ದ. ಅರಮನೆಯೆಂದ ಬಳಿಕ ರಾಜಠೀವಿಯಲ್ಲಿರಬೇಕಲ್ಲವೆ? ಈ ಮಹಾನುಭಾವ ಇತರರಿಗೆ ಧರ್ಮಾರ್ಥವಾಗಿ ಬಿರುದುಗಳನ್ನೋ ಸನದುಗಳನ್ನೋ ಕೊಟ್ಟು ತನ್ನ ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುತ್ತಿದ್ದ.

**ಜಟ್ಕಾವಾಲನಿಗೆ 'ಕಮಾಂಡರ್' ಬಿರುದು!**

'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಪ್ರತಿನಿಧಿಗಳು ಇತ್ತೀಚೆಗೆ ಬ್ರಿಟೇನಿಯಲ್ಲಿ ಒಬ್ಬ ಜಟ್ಕಾವಾಲನನ್ನು ಕಂಡರಂತೆ. ಅವನೊಬ್ಬ ಮಾಜಿ ಕರ್ನಲ್. ರಷ್ಯದಲ್ಲಿ ಸೊವಿಯೆಟ್ ಕ್ರಮ ಬಂದ ನಂತರ ಇವನಿಗೆ ಜಟ್ಕವೇ ಗತಿಯಾಯಿತು. ಇಷ್ಟು ಬಡತನದಲ್ಲಿದ್ದರೂ ಇವನಿಗೆ ಡ್ಯೂಕ್ ಆಫ್ ಸಿರೀಲರು ಒಂದು ಬಿರುದನ್ನು ದಯೆಪಾಲಿಸಿದ್ದಾರೆ. ಪ್ಯಾರಿಸ್ ಜಿಲ್ಲೆಯ ರಷ್ಯನ್ ಸೈನ್ಯದ ದಳಪತಿ ಎಂದು. (Commander of the Russian Cavalary of the Paris District).

**ಮಹಾಝಾರರು!**

ಕೆಲವರು ಈ ಮಹಾಶಯನನ್ನು ಝಾರರೆಂದು ಕರೆಯುತ್ತಿದ್ದರಂತೆ. ಇವನನ್ನು ಇವನ ಅಣ್ಣಂದಿರಾದ ಗ್ರೇಂಡ್ ಡ್ಯೂಕ್ ಬೋರಿಸ್ ಮತ್ತು ಆಂಡ್ರೆಯವರು ಕೂಡಾ 'ಝಾರ'ರೆಂದು ಮಾನ್ಯ ಮಾಡುತ್ತಿದ್ದಿಲ್ಲ. ಬಿರುದನ್ನು ಪಡೆದ ಜಟ್ಕಾವಾಲರಂಥವರು ಮಾತ್ರ ಝಾರರೆಂದು ಕರೆಯುತ್ತಿದ್ದರು. ವಿಕ್ಟೋರಿಯಾ ಡಚೆಸ್ ಆಫ್ ಕಾರ್ಗ್ ಎಂಬವಳೊಡನೆ ವಿವಾಹವಾಗಿ ಒಂದು ಹೆಣ್ಣು ಮತ್ತೊಂದು ಗಂಡು ಮಕ್ಕಳು ಇವರಿಗೆ ಹುಟ್ಟಿದ್ದವು. ಮೊನ್ನೆ ಮೊನ್ನೆ ಕೈಸರನ ಮಗನಿಗೆ ಆಕೆಯನ್ನು ಮದುವೆ ಮಾಡಿ ಕೊಟ್ಟಿದ್ದಾರೆ. ಮಗನು ಮುಂದೆ ತಂದೆಯಂತೆಯೇ 'ಝಾರ'ನಾಗಲೂ ಬಹುದು! ರಷ್ಯದ ಸಿರೀಲರಿಗೆ ನಾಝಿ ಜರ್ಮನಿಯಲ್ಲಿ ತುಂಬಾ ವಿಶ್ವಾಸವಿರುವುದಲ್ಲದೆ ಸೊವಿಯೆಟ್ ಸರಕಾರವನ್ನು ಸದೆಬಡೆಯಬಹುದೆಂದು ಅವರು ನಂಬುತ್ತಿದ್ದಾರೆ.

**ಧಾರವಾಡ 'ಮನೋಹರ ಗ್ರಂಥಮಾಲೆ'ಯ ಪುಸ್ತಕಗಳು ತುಳುನಾಡ್ ಪ್ರೆಸ್ಸಿನಲ್ಲಿ ದೊರೆಯುತ್ತವೆ.**

# ಮಾರಾಟಕ್ಕೆ ತಯಾರಿವೆ

## 1939 ಚಿಕ್ಕ ದೊಡ್ಡ ಸೈಜಿನ ತಾರೀಕು ಪಟ್ಟಿ 1939

**1939ನೇ ಇಸವಿ ಜನವರಿಯಿಂದ ತೊಡಗಿ ದಶಂಬರದ ವರೆಗಿನ 12 ತಿಂಗಳುಗಳ ತಾರೀಕು ಪಟ್ಟಿಗಳು ಈ ಕೆಳಗಿನ ಎರಡು ಸೈಜುಗಳಲ್ಲಿ ತಯಾರಿವೆ.**

### SEPTEMBER 1939

| SUN | MON | TUE | WED | THU | FRI | SAT |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

**ದೊಡ್ಡದು 100 ಸೆಟ್ಟಿಗೆ ರೂ. 1—0—0.**

### 1939 JANUARY 1939

| SUN | MON | TUE | WED | THU | FRI | SAT |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

**ಸಣ್ಣದು 100 ಸೆಟ್ಟಿಗೆ ರೂ. 0—12—0.**

***Calender Slips in the above two sizes are ready for sale at Re. 1/- and As 12/- per 100 Sets.***

APPLY TO—

*Manager:*


**THULUNAD PRESS,**

**UDIPI.**

ಬರೆಯಿರಿ—

**ಮೆನೇಜರ್: ತುಳುನಾಡ್ ಪ್ರೆಸ್**

**ಉಡುಪಿ.**



**ಅಂತರಂಗದ**
**ನಂಬ್ರ ೨ನೇ ಸ್ಪರ್ಧೆಗೆ**
**ಉತ್ತರಗಳನ್ನು ಕಳುಹಿಸತಕ್ಕವರು ಈ ಕೂಪನುಗಳಲ್ಲಿ ಬರೆದು ಕಳುಹಿಸತಕ್ಕದ್ದು.**
[ಕವರಿನ ೩ನೇ ಪುಟ ನೋಡಿರಿ.]

**ಗೆಳೆಯರ ತಂಡದ ಮೆಂಬರರಾಗಲು ಮರೆಯಬೇಡಿರಿ.**

## ಅಂತರಂಗ ಸ್ಪರ್ಧೆ—ನಂ. ೨

ಸ್ಪರ್ಧೆಯ ಉತ್ತರಗಳನ್ನು ಈ ಕೂಪನಿನಲ್ಲಿಯೇ ಬರೆದು ಕಳುಹಿಸಬೇಕು.

ಹೆಸರು . . . . . . . . . . . . . . . . . . . . . .

ವಿಳಾಸ . . . . . . . . . . . . . . . . . . . . . .

. . . . . . . . . . . . . . . . . . . . . .

ಸಹಿ . . . . . . . . . . . . . . . . . . . . . .

ಉತ್ತರಗಳ ಸಂಖ್ಯೆ. . . . . . . . . . . . . . . . . . .

ಕಳುಹಿಸಿದ ಹಣವೆಷ್ಟು . . . . . . . . . . . . . . . . . .

**ಗೆಳೆಯರ ತಂಡದ ಸದಸ್ಯರಾಗುವವರು ಅಂತರಂಗದ ಕೆಳಗಿನ ಕೂಪನಿನಲ್ಲಿ ಬರೆಯಬೇಕು.**

## ಗೆಳೆಯರ ತಂಡದ ಸದಸ್ಯತನದ ಪತ್ರ.

ನಾನು 'ಗೆಳೆಯರ ತಂಡ'ಕ್ಕೆ ಸೇರಲಿಚ್ಛಿಸುತ್ತೇನೆ. ಆ ಬಗ್ಗೆ ಸದಸ್ಯತನದ ಆರು ತಿಂಗಳ ವರ್ಗಣಿಯಾದ ನಾಲ್ಕಾಣೆಯನ್ನು ಕಳುಹಿಸಿರುತ್ತೇನೆ.

**ಹೆಸರು.** . . . . . . . . . . . . . . . . . . . . . .

**ವಿಳಾಸ.** . . . . . . . . . . . . . . . . . . . . . .

**ಉದ್ಯೋಗ.** . . . . . . . . . . . . . . . . . . . .

**ಸಹಿ.** . . . . . . . . . . . . . . . . . . . . . . .

# ನಿಮ್ಗೆ ಸೊರ್ಗ ಬೇಕಾಂದೆ!

ನಿಮ್ಗೆ ಸೊರ್ಗಾ ಬೇಕಾ? ಹ್ಣಾಂ, ಸೊರ್ಗಾಂದ ಕೂಡ್ಲೆ ನಿಮ್ಮ ಬಾಯಿ ಎಷ್ಟು ಅಗ್ಲಾಗುತ್ತೇಂತೇನೆ! ಈಗ್ಲೇ ಸೊರ್ಗಾಕೆ ಹೋಗ್ರೋಕೆ ನೀವು ತಯಾರಾ? ಏನು! ಊಂಹ್ಣೂಂ ಅಂತೀರಾ? ಹೋದಷ್ಟುದಿನಾ ಇಲ್ಲೇ ಹೋಗ್ಲೀ, ಆ ವ್ಯಾಲೆ ಹೋಗ್ದೇ ಯತ್ನವಿಲ್ಲಾಂತ ಆದಾಗ, ಈ ಲೋಕಾ ಬಿಡ್ಲೇಬೇಕೂಂತ ಆದಾಗ ನರಕಕ್ಕೆ ಹೋಗೋದಕ್ಕಿಂತ ಆ ಸೊರ್ಗಕ್ಕೆ ಹೋದರಾದೀತೂ ಅಂತೀರಾ? ಹಾಗಾದ್ರೆ ನಿಮ್ಗೆ ಈ ಲೋಕಕ್ಕಿಂತ ಮಿಗಿಲಾದ ಪ್ರೇಮ ಆ ಸೊರ್ಗದ ಮೇಲಿಲ್ಲಾಂಬೋದು ಖಂಡಿತಾಯ್ತು! ಈ ರೀತಿ ನಿಮ್ಗೆ ಒಂದು ಥರದ ನಾಖುಶಿ ಇರೋಕೆ ಎರಡು ಕಾರಣ ಇರ್ಬಹುದು. ಮೊದಲನೇದು ನಿಮ್ಮಿಂದ ದಾನದಕ್ಷಿಣೆ ದುಡ್ಡು ಕಾಸು ಇಸ್ಕೊಂಡು, ಹರಿಕೆ ಪೂಜೆ ಸೇವೆ ಹೋಮ ನೇಮಾಂತ ನಿಮ್ಮ ದುಡ್ಡು ಸುಲ್ಕೊಂಡು, ಸಿಕ್ಕ ಸಿಕ್ಕ ಹೊಳೆ, ಕೆರೆ, ಕುಂಡಿಕೇಲಿ ನಿಮ್ನ ಮುಳುಗಿಸಿ ಮೋರೆಮೇಲಿ ನಾಮಾಹಾಕಿ ಆ ಸೊರ್ಗದಲ್ಲೊಂದು ಜಾಗ ನಿಮ್ಗೆ ರಿಜರ್ವಮಾಡ್ಸಿಟ್ಟಿದ್ದೇವೆಂತ ಮಂತ್ರಕೂಗೋ ಯಂತ್ರಗಳೆಲ್ಲ ಕೊಟ್ಟ ಗ್ಯಾರಂಟೀಲಿ ನಿಮ್ಗೆ ವಿಶ್ವಾಸ ಇಲ್ಲದೆ ಇರ್ಬಹುದು. ಎರಡನೇದಾಗಿ, ಆ ಸೊರ್ಗದ ವರ್ಣನೇನ್ನ ವಿಚಾರದೃಷ್ಟಿಯಿಂದ ಪರಾಮರ್ಶಿಸಿ ಆ ನಿಸ್ಸಾರದ ಸೊರ್ಗಕ್ಕಿಂತ ನಮ್ಮ ಈ ಲೋಕಾನೇ ಎಷ್ಟೋ ಮೇಲೂಂತ್ಲೂ ಸಾಗಿದಷ್ಟು ದಿನಾ ಇಲ್ಲೇ ಸಾಗ್ಲಿಂತ್ಲೂ ನಿಮ್ಮ ಅಭಿಪ್ರಾಯ ಇರ್ಲೂಬಹುದು. ಮೊನ್ನೆ ಒಬ್ಬರು ಆ ಸೊರ್ಗಕ್ಕೆ ಕಿಚ್ಚಿಕ್ಕು ಅಂತ ಸರ್ವಜ್ಞನ ಹಾಗೆ ಅಧಿಕಾರವಾಣಿಯಿಂದ ಅಂದುಬಿಟ್ರು. ಯಾಕ್ರಾ ಹಾಂಗಂತೀರಿ ಅಂದೆ ನಾನು. ಹಾಗಾದ್ರೆ ಕೇಳೀಂತ ಹೀಗಂದ್ರು:—

ಆ ಸೊರ್ಗದೊಳಗೆ ಇರೋದು ಯಾರು? ದೇವತೆಗಳಲ್ವಾ? ದೇವತೆಗಳೂಂತಾದ ಮೇಲೆ ಅವರಲ್ಲಿ ದೇವಗುಣ ಇರಬೇಕಲ್ಲಾ? ದೇವಗುಣಾಂದ್ರೆ ಕಾಮ, ಕ್ರೋಧ, ಮದ, ಮೋಹ, ಮತ್ಸರಾದಿಗಳು ಇಲ್ಲದೆ ಇರೋದು. ಆದ್ರೆ ದೇವಾದಿದೇವನಾದ ಆ ಇಂದ್ರಪ್ಪನ ಗುಣಾನ್ನ ನೋಡಿದ್ರೆ ಕಾಣೋದಿಲ್ವೆ? ದೇವಾಂಶ ಅವನಲ್ಲಿ ಲವಲೇಶಾ ಇಲ್ಲಾಂತ! ವೇಷಪಲ್ಲಟಿಸಿಕೊಂಡು ಋಷಿಪತ್ನಿನ್ನ ವಂಚಿಸಿ ಅವಳ ಸಂಗಮಾಡಿ ಅವಳ ಪತಿವ್ರತಾ ಧರ್ಮ ಕೆಡಿಸಿ ಮೈಮೇಲೆಲ್ಲಾ ಯೋನಿ ಆಗೋ ಹಾಂಗೆ ಶಾಪಾಹಿಡ್ಸಿಕೊಂಡವನಲ್ಲಿ ಏನು ದೇವತ್ವ ಇದೆ! ಏನು ಇಂದ್ರಿಯನಿಗ್ರಹ ಇದೆ! ಇಂಥವನನ್ನ ದೇವಾಧಿದೇವಾ ಅಂತ ಮಾಡಿಟ್ಟುಕೊಂಡ ದೇವತೆಗಳ ಸುರೂಪ ಹೇಗಿರ್ಬೇಕೂಂದೆ! ಇವನಂಥಾ ಸ್ವಾರ್ಥಿಗಳು ಬೇರಿದ್ದಾರೆಯೆ! ತನ್ನ ಸ್ಥಾನ ಭದ್ರಮಾಡಿಟ್ಟುಕೊಳ್ಳೋಕೆ ಏನೆಲ್ಲಾ ಕುತಂತ್ರ ನಡ್ಸಿದ್ದಾನೆ ಈ ದೇವೇಂದ್ರಪ್ಪ! ಯಾರಾದ್ರೂ ಇಂದ್ರಪದವಿಗೆ ಬಯಸಿ ಯಜ್ಞ ಯಾಗ ಮಾಡಿದ್ರೆ, ತಪಸ್ಸುಮಾಡಿದ್ರೆ, ಆ ಅಪ್ಸರೆಯರೆಂಬ ಹೆಣ್ಣುಗಳನ್ನು ಕಳ್ಸಿಯೋ ಬ್ರಹ್ಮಾ ವಿಷ್ಣು ಮಹೇಶ್ವರರಿಗೆ ದಮ್ಮಯ್ಯದ ಗಡ್ಡೆಹಾಕಿಯೋ ಎಂತೆಂಥಾ ಮೋಸ ದಗಾ ವಂಚನೆ ಮಾಡಿ ಮಾಡಿಸಿ ಶತ ಯಾಗ ಆಗ್ದಂತೆ ಮಾಡ್ಕೊಂಡಿದ್ದಾನೆ! ಯಾಗಮಾಡ್ದಿದ್ರೂ ಸಿಟ್ಟು! ಮಾಡಿದ್ರೂ ಸಿಟ್ಟು! ಈ ದೇವೇಂದ್ರಪ್ಪನೂ ಇವ್ನ ಮೂವತ್ತಮೂರು ಕೋಟಿ ದೇವತೆಗಳೂ ಅಮೃತ ಕುಡ್ದೋರಲ್ವಾ? ಇವರೆಲ್ಲ ನಿತ್ಯತೃಪ್ತರಲ್ವಾ? ಇವರಿಗೆ ಹಸಿವು ಎಂಬೋದೇ ಇಲ್ಲವಲ್ಲಾ? ಮತ್ತೆ ಹವಿರ್ಭಾಗ ಯಾಕಪ್ಪಾ ಇವ್ರಿಗೆ? ನಮ್ಮ ಲೋಕದ ಹವಿರ್ಭಾಗಕ್ಕೇ ಬಾಯಿಕಳ್ಕೊಂಡು ಕೂತಿರುವ ಈ ದೇವಲೋಕದೋರಿಗೆ ಆ ಕಾಮಧೇನು ಯಾಕಪ್ಪಾ, ನೀವೇ ಹೇಳಿ! ಅಮೃತ ಕುಡಿದಿರೋ ಇವ್ರೀಗೆ ಸಾವು ನೋವು ಎಂಬೋದಿಲ್ಲವಲ್ಲ? ನಿತ್ಯಯೌವನವಲ್ಲಾ ಇವ್ರೀಗೆ? ಇದು ಸತ್ಯಾದ್ರೆ, ಎಷ್ಟೋ ರಾಕ್ಷಸರು ದೇವಲೋಕಕ್ಕೆ ನುಗ್ಗಿದಾಗ ಅವರನ್ನ ಸೋಲಿಸಿ ಓಡಿಸೋಕೆ ಇವರಿಂದ ಯಾಕೆ ಆಗ್ಲಿಲ್ಲಾ? ಸಾವಿನ ಹೆದರಿಕೆಯೆ? ನೋವಿನ ಭಯವೆ? ಅಮೃತ ಪಾನಮಾಡಿ ನಿತ್ಯಯೌವನ ಪಡೆದ ಇವರ ತೋಳಿನಬಲ ಹ್ಯಾಗೆ ಇಳಿದುಹೋಯ್ತು! ಹೇಡಿಗಳ ಥರಾ ಊರು ಬಿಟ್ಟು ಓಡ್ಹ್ಯೋಡಿ ಎಲ್ಲೆಲ್ಲೋ ತಲೆಮರೆಸಿಕೊಂಡಿದ್ರಲ್ಲಾ! 'ಅಯ್ಯೊ! ಮಾರಾಯಾ ನಮ್ಮನ್ನ ಕಾಪಾಡೂಂತ ಬ್ರಹ್ಮ ವಿಷ್ಣು

(೩೭ನೆ ಪುಟ ನೋಡಿರಿ)

# ಭಾರತದ ಮಹಿಳೆಯರೊಡನೆ ಸ್ಪೈನ್ ಮಾತೆಯರ ಮೊರೆ

ಸ್ಪೈನಿನ ಪ್ರೆಸಿಡೆಂಟ್ ಅಝಾನಾ, ಎಮ್. ಕೋಂಪಾನಿಸ್, ಸೆನೋರ್. ಡೆಲ್ ವಯೋರವರ ಪತ್ನಿಯರೂ, ಸ್ಪೈನಿನ ಕಮ್ಯೂನಿಸ್ಟ್ ಪಾರ್ಟಿಯ ಧುರೀಣೆಯಾದ ಲಾ. ಪಾಸ್ಸೋನಾರಿಯಾರವರೂ ಒಟ್ಟಾಗಿ ಹಿಂದೀ ಸ್ತ್ರೀಯರೊಡನೆ ಈ ಕೆಳಗಿನ ಹೃದಯದ್ರಾವಕ ವಿನಂತಿಯನ್ನು ಮಾಡಿಕೊಂಡಿರುವರು:— ಸ್ಪೈನಿನ ತಾಯಂದಿರು ಹಾಗೂ ಸಹಧರ್ಮಿಣಿಯರು ತೀವ್ರ ಸಂತಾಪದಿಂದ ಇನ್ನೊಂದು ಛಳಿಗಾಲವನ್ನು ಇದಿರು ನೋಡುತ್ತಿದ್ದಾರೆ. ಈ ದುಃಖವು ನಮಗಾಗಿ ಅಥವಾ ನಮ್ಮ ಸೋಲ್ಜರರಿಗಾಗಿ ಅಲ್ಲ; ಯುದ್ಧದಿಂದ ಅನಾಥರಾಗಿ ಬಾಯ್ಬಿಡುತ್ತಿರುವ ನಿರಪರಾಧಿ ಮಕ್ಕಳಿಗಾಗಿ. ನಾವಾಗಲಿ ನಮ್ಮ ಸೈನಿಕರಾಗಲೀ ಈ ಹೋರಾಟದಲ್ಲಿ ಸರ್ವಸ್ವವನ್ನೂ ಕಳಕೊಳ್ಳಲು ಹಿಂಜರಿಯಲಾರೆವು. ನಮ್ಮ ದೇಶವು ದಂಗೆಗಾರರ ಹಿಡಿತದಿಂದ ತಪ್ಪಿ ಸ್ಪೈನೆಂಬುದು 'ಸ್ಪೇನಿಯಾರ್ಡರ'ದೆಂದು ಆಗವ ವರೆಗೂ-ಸ್ವಾತಂತ್ರ್ಯ ದೊರಕುವ ವರೆಗೂ ತಡೆಗಟ್ಟುವೆವು, ಹೋರಾಡುವೆವು, ಬಂದುದನ್ನೆಲ್ಲಾ ಅನುಭವಿಸುವೆವು. ಆದರೆ ನಮ್ಮ ಮಕ್ಕಳು- ಅವು ಭೀಕರ ಗಂಡಾಂತರದಿಂದ ರಕ್ಷಿಸಲ್ಪಡಬೇಕು.

ಆದ್ದರಿಂದ ಹಿಂದುಸ್ಥಾನದ ಮಾತೆಯರೇ ಮತ್ತು ಮಡದಿಯರೇ, ನಿಮ್ಮ ರಾಜಕೀಯ ಮತವಾವುದೇ ಇರಲಿ, ನಮ್ಮಾ ಹೋರಾಟದ ಕುರಿತು ನಿಮ್ಮ ಅಭಿಪ್ರಾಯವೇನೇ ಇರಲಿ, ಸ್ಪೈನ್ ಮಾತೆಯವರ ಬೆಂದೊಡಲಿನಿಂದ ಹೊರಟ ಈ ಮೊರೆಗೆ ದಯವಿಟ್ಟು ನಿಮ್ಮ ಹೃದಯದಲ್ಲೊಂದು ಸ್ಥಾನಕೊಡಿರಿ. ನಮಗೆ ಆಹಾರ, ಹಾಲು, ಮೊಟ್ಟೆ, ವಸ್ತ್ರಗಳನ್ನೊದಗಿಸಿ ಸಹಾಯ ಮಾಡಿರಿ. ನಮ್ಮ ಹಸುಗೂಸುಗಳನ್ನು ಚಳಿಯಿಂದ ಮತ್ತು ಹಸಿವೆಯಿಂದ ಸಾಯಲು ಬಿಡಬೇಡಿರಿ. ನಮ್ಮಾ ಮೊರೆಯನ್ನು ಸ್ತ್ರೀಸಹಜವಾದ ದಯಾದೃಷ್ಟಿಯಿಂದ ಮನ್ನಿಸಿರಿ!

—

(೩೫ನೆ ಪುಟದಿಂದ)

ಮಹೇಶ್ವರರಿಗೆಲ್ಲಾ ಕಾಲಿಗೆ ಅಡ್ಡಬಿದ್ದರಲ್ಲಾ, ಯಾಕಂತೇನೆ? ಆಜರಾಮರರಾದೋವರಿಗೆ ಸಾವು, ನೋವುಗಳ ಭಯ ಹ್ಯಾಗ್ಬಂತೂ? ಆ ಇಂದ್ರಪ್ಪನ ವಜ್ರಾಯುಧಕ್ಕೆ ಒರಳೆ ಹಿಡಿದಿತ್ತೇ? ಅದು ಹೆಂಗಾರಕನ ಮರದ್ದಾ? ಈ ಹೇಡಿಗಳನ್ನ, ಈ ಸೋಮಾರಿಗಳನ್ನ, ಬದುಕಿಸೋಕೆ (ಸಾವು ನೋವಿಲ್ಲದವರನ್ನ ಬದುಕಿಸೋದೆಂದರೇ ಒಂದು ಅಸಂಬದ್ಧ!) ಆ ಬ್ರಹ್ಮಾ ವಿಷ್ಣು ಮಹೇಶ್ವರರೂ ಏನೆಲ್ಲ ಠಕ್ಕು ಮೋಸ ಮಾಡ್ಬೇಕಾಯಿತಪ್ಪ! ನಮಗಿಂದು ಸಾವು ನೋವಿನ ಭಯ ಇಲ್ಲಾಂತಾದ್ರೆ, ನಿತ್ಯ ಯೌವನಾಂತಾದ್ರೆ, ನಮಗೊಂದು ಕಾಮಧೇನೂ ಉಂಟೂಂತಾದ್ರೆ ಡ್ರೆಡ್‌ನಾಟ್ ಬರ್ಲೀ, ಎಮ್ಡನ್ ಬರ್ಲೀ, ಬಾಂಬುಗಳ ಸುರಿಮಳೆ ಬರ್ಲೀ, ವಿಷವಾಯುವಿನ ವಾತಾವರಣವೇ ಆಗ್ಲೀ ನಾವು ವೈರಿಗಳನ್ನು ಓಡಿಸಿ ಇಡೀ ಲೋಕಾನ್ನೇ ಆಳೋದಿಲ್ವೇ? ಎಂಥಾ ದೇವತೆಗಳ್ರಾ ಅವ್ರು ಹೇಡಿಗಳು! ಅವ್ರ ಲೋಕದೊಳ್ಗೆ ಏನು ಸುಖಾ ಇರ್ಬಹುದು!

ಅಂದ್ರೆ. ಮತ್ತೂ ಅಂದ್ರೂ. ಇನ್ನೂ ಅಂದ್ರೆ! ಅವ್ನೆಲ್ಲಾ ಇನ್ನೊಮ್ಮೆ ಮತ್ತೊಮ್ಮೆ ಸ್ವಲ್ಪ ಸ್ವಲ್ಪ ಹೇಳ್ತೀನೆ. ಈಗ ಹೇಳಿದ್ದನ್ನ ತುಸೂ ವಿಚಾರಿಸೀಂದ್ರೆ!

'ವಿಚಾರಪ್ರಿಯ'

## - - ತುಸು ನಗು - -

**ಸಾಲದೆ?**

**ಹೆಂಡತಿ:**—ನಾನು ಹಣ ಕೇಳಿದೊಡನೆಯೇ ನೀವು ಚುಂಬಿಸುತ್ತೀರಿ.

ಗಂಡ:-ಅಷ್ಟು ಸಾಲದೆ ಮುದ್ದು?

—

**೨೫ ಕತೆಗಳ ಸಂಗ್ರಹ ಮಧುವನ ರೂ.1-8-0 ತುಳುನಾಡ್ ಪ್ರೆಸ್, ಉಡುಪಿ**

# श्री प्रसाद ಶ್ರೀ ಪ್ರಸಾದ SRI PRASADA

ಸಮಗ್ರ ಭಾರತದಲ್ಲಿ ಅನೇಕ ವರ್ಷಗಳಿಂದ ಸಂಚರಿಸುತ್ತಲಿರುವ
ಮಂತ್ರವಿದ್ಯೆಯಲ್ಲಿ ಪಾರಂಗತರಾದ ತನ್ನ ಮಂತ್ರಶಕ್ತಿಯಿಂದ
ಅನೇಕ ಜನರಿಗೆ ಪ್ರಯೋಜನವನ್ನುಂಟುಮಾಡಿದ
ಯೋಗಿ ಮಹಾಶಯರೊಬ್ಬರ

# ಮಹಾಮಂತ್ರಶಕ್ತಿಯ ಪ್ರಸಾದ

ಈ ಪ್ರಸಾದಗಳ ಸೇವನೆಯಿಂದಲೂ, ಧಾರಣೆಯಿಂದಲೂ, ಪ್ರಯೋಗದಿಂದಲೂ ಅನೇಕರು ಅನೇಕ ವಿಧಗಳಿಂದ ಪ್ರಯೋಜನವನ್ನು ಹೊಂದಿರುವರು.

*Personal interviews are prohibited*

## ಈ ಪ್ರಸಾದದಿಂದ

ಮುಖತಃ ಭೇಟಿಯನ್ನು ಇಟ್ಟುಕೊಳ್ಳಲಾಗುವುದಿಲ್ಲ.

ಪರೀಕ್ಷೆಯಲ್ಲಿ ಪಾಸಾಗುವದು, ಶತ್ರುಗಳನ್ನು ಸ್ವಾಧೀನಪಡಿಸುವದು, ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುವದು, ಮುಂತಾದ ಯಾವತ್ತು ಅಭೀಷ್ಟಗಳನ್ನು ಸಾಧಿಸಬಹುದು.

**ಒಂದು ತಿಂಗಳು ಉಪಯೋಗಿಸುವ ಪ್ರಸಾದಕ್ಕೆ ರೂಪಾಯಿ ಒಂದು.**

**ವಿಶೇಷತರದ ಪ್ರಸಾದಕ್ಕೆ ರೂಪಾಯಿ ಐದು.**

**ಪ್ರಸಾದ ಬೇಕಾದವರು**—ತಮ್ಮ ನಕ್ಷತ್ರ, ಯಾ ಜನನ ಸಮಯವನ್ನೂ ತಾರೀಕನ್ನೂ ತಿಳಿಸಬೇಕು. ಅದು ಗೊತ್ತಿಲ್ಲದಿದ್ದರೆ ಕಾಗದಬರೆಯುವ ಸ್ಥಳ, ಸಮಯಗಳನ್ನೂ ನಿರ್ದೇಶಿಸಬೇಕು.

**ವಿ. ಪಿ. ಕ್ರಮವಿಲ್ಲ**—ಹಣವನ್ನು ಮುಂಗಡವಾಗಿಯೇ ಕಳುಹಿಸಬೇಕು. ಹಣವನ್ನು ಕಳುಹಿಸದೆ ಬರುವ ಕಾಗದಗಳಿಗೆ ನಿಗಾ ಕೊಡಲಾರದು.

**ಪತ್ರವ್ಯವಹಾರಃ—ಇಂಗ್ಲಿಷ್, ಸಂಸ್ಕೃತ, ಯಾ ಕನ್ನಡ ಭಾಷೆಯಲ್ಲಿ ಮಾಡಬಹುದು.**
**ಎಲ್ಲ ಪತ್ರಗಳು ಗುಪ್ತವಾಗಿರಿಸಲಾಗುತ್ತವೆ.**

C. C. No. 4.

**C/o. ANTARANGA, UDIPI.**

# ವಾರದ ಪಂಚಾಂಗ

ಬಹುಧಾನ್ಯ ಸಂ|ರದ ಮಾರ್ಗಶಿರ ಕೃಷ್ಣಪಕ್ಷ ದಕ್ಷಿಣಾಯನಂ ಹೇಮಂತರ್ತುಃ

ವೃಶ್ಚಿಕ ೨೫ರಿಂದ ಧನು ೨ರ ವರೆಗೆ. ಮಹಾನಕ್ಷತ್ರ ಜ್ಯೇಷ್ಠಾ—ಮೂಲಾ. ದಶಂಬರ ೧೯೩೮

## ಆರ್ಯಭಟ ವಾಕ್ಯಕರಣರೀತ್ಯಾ ನಿತ್ಯಪಂಚಾಂಗಂ

| ತಾ. | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 11 | ೪ | ರ೪೪ಉ್ಪ ೫೪\| | ಪೃ೧೮ | ಐಂ೩೫\|\| | ಬಾ೪ | ೪೭\|\|\| | ೩ | ಸ್ವಾ೧ಕು೩ ಶುಕ್ರವಕ್ರತ್ಯಾಗಃ |
| 12 | ೬ | ಚ೫೩\|\| | ಆ್ಲ೧೩\|\| | ವೈ೨೭\|\|\| | ಗ೨೫\| | ೪೨ | ೧೦\| | ಜ್ಯೆ೪ರ೨೩ ಸಿಂಹೆಚ೧೩\|\|\| |
| 13 | ೭ | ಕು೪೭\|\|\| | ವು೧೦\| | ವ್ಯಿ೨೦\| | ಭ೨೦ | ೨೯\| | ೪\|\|ಅ೫೨ | ಜ್ಯೆ೪ವ್ಯ.ವಬು೩೦ ಪ್ರದೋ. ತಿಸ್ರಾ. |
| 14 | ೮ | ಬು೪೩\|\| | ಹು೭\| | ಪ್ರೀ೧೩\|\| | ಬಾ೧೫\|\| | ೨೪\|\| | ೪೭\|\| | ಕನ್ಯಾಚ೨೨ ತಿಸ್ರಾಸ್ಪೃಕಂ |
| 15 | ೯ | ಗು೪೦ | ಉ್ತ೪\|\|\| | ಆ೭ | ತೈ೧೦\|\| | ೨೫\| | ೪೮\|\|\| | ಧನುಸಂಕ್ರಮಃ೩೯\|ಜ್ಯೇ೩ಪಬು೪೦§ [§ತಿಸ್ರಾಸ್ಪೃಕಂ |
| 16 | ೧೦ | ಶು೩೭\|\| | ಹ್ತ೩\| | ಸೌ೧\|\| ಉ್ಪ೫೫\|\| | ವ೮\|\| | ೨೩\| | ೪೭ | ತುಲಾಚ೩೩\| ಸ್ವಾ೨ಕು೧೯ ಧನು‡ |
| 17 | ೧೧ | ಶ೩೬\| | ಚಿ೩ | ಅ್ತ೫೩\| | ಬ೬\|\|\| | ೧೭ | ೪೧\|\| | ಸರ್ವೇಷಾಂ೧೧ [‡ಪೂಜಾರಂಭಃ |

## ಕೇತಕೀ ದೃಕ್ಸಿದ್ಧರೀತ್ಯಾ ನಿತ್ಯಪಂಚಾಂಗಂ

| ತಾ. | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 11 | ೫ | ರ೪೩ | ಪೃ೯\|\|ಉ್ಪ ೫೪\|\|\| | ಐ೨೨\| | ಕೌ೧೬\|\|\| | ೩೩\|\|\| | ೫೫\|\| | ಸಿಂಹೆಚ೫೯\| ಸ್ವಾ೧ಕು೭೨ |
| 12 | ೬ | ಚ೩೭ | ಮ೫೫\| | ವೈ೧೩\|\| | ಗ೧೦ | ೨೭\| | ೪೯\|\|\| | ಜ್ಯೆ೪ರ೧೯ ವಿ೩ಶ೫೫ |
| 13 | ೭ | ಕು೩೨\| | ಪೂ೫೨\|\|\| | ವ್ಯಿ೬\|ಉ್ಪ ೫೩\|\| | ಭ೪\|\|\| | ೧೪\|\| | ೩೭\|\| | ಜ್ಯೆ೪ವಬು೨೭ |
| 14 | ೮ | ಬು೨೮\|\|\| | ಉ್ತ೫೧\|\| | ಆ೫೪\|\| | ಬಾ\|\| | ೧೦\| | ೩೩\|\|\| | ಕನ್ಯಾಚ೭\|\| |
| 15 | ೯ | ಗು೨೭ | ಹ೫೧\|\|\| | ಸೌ೫೦\|\| | ಗ೨೭ | ೧೨ | ೩೬\|\|\| | ಮೂಲೇರ್ಕಃಧನುಸಂಕ್ರಮಃ† [†೩೪\|೧೧ಜ್ಯೆ೩ಬು೩೪ |
| 16 | ೧೦ | ಶು೨೬\|\| | ಚಿ೫೩\| | ಶೋ೪೭\|\|\| | ಭ೨೬\|\| | ೧೨\| | ೩೭ | ತುಲಾಚ೨೨\|\|ಸ್ವಾ೨ಕು೪೧‡ [‡ಮಾರ್ಗಶೀರ್ಷ |
| 17 | ೧೧ | ಶ೨೭\|\| | ಸ್ವಾ೫೬\| | ಅ್ತ೪೫\|\|\| | ಬಾ೨೭\|\| | ೮ | ೩೩\| | ಸರ್ವೇಷಾಂ ೧೧ |

# ಈ ವಾರದಲ್ಲಿ

# ನಿಮ್ಮ ಭವಿಷ್ಯವು ಹೇಗಿದೆ?

ತಾ. ೧೧-೧೨-'೩೮ರಿಂದ
ತಾ. ೧೭-೧೨-'೩೮ರ ವರೆಗೆ.

**ಮೇಷ:—**

ವಿಧಿಲಿಖಿತವನ್ನು ಯಾರಿಂದಲೂ ಮೀರಲು ಸಾಧ್ಯವಿಲ್ಲವು. ''ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ। ಸುರೈರಪಿ ಲಲಾಟ ಲಿಖಿತಾ ರೇಖಾ ಪರಿಮಾರ್ಷ್ಟುಂ ನ ಶಕ್ಯತೇ'' ಹಣೆಬರಹವನ್ನು ತ್ರಿಮೂರ್ತಿಗಳಿಗೂ ಇಂದ್ರಾದಿ ದೇವತೆಗಳಿಗೂ ಕೂಡಅನ್ಯಥಾ ಮಾಡಲಿಕ್ಕೆ ಶಕ್ತಿಯಿಲ್ಲವು. ಅಂದ ಮೇಲೆ ಆ ವಿಧಿಬರಹವನ್ನು ಅನುಭವಿಸಿಯೇ ತೀರಿಸತಕ್ಕದ್ದೆಂದಾಯಿತಷ್ಟೆ. ಆದಕಾರಣದಿಂದಲೇ ನೀವು ಈ ವಾರದಲ್ಲಿ ಪುರುಷ ಪ್ರಯತ್ನವನ್ನು ಎಷ್ಟೊಂದು ಮುಂದರಿಸಿದರೂ ಅದು ಫಲಕಾರಿಯಾಗಲಾರದು. ನಿಮ್ಮ ಉದ್ಯೋಗದಲ್ಲಿ ಬಹಳ ಶ್ರಮವಹಿಸಿ ತಕ್ಕ ಪ್ರತಿಫಲವನ್ನು ಪಡೆಯುವಿರಿ. ಆದರೂ ಹೆಚ್ಚಿನ ಸಂಸಾರ ತಾಪತ್ರಯಗಳಿಗೆ ನೀವು ಸಿಲುಕುವುದರಿಂದ ದಿನಗಳೆಯುವುದು ಬಹಳ ಕಷ್ಟಕ್ಕೆ ಬರುವುದು. ಪತ್ನಿಯಳ ಪ್ರಕೃತಿಯು ಕೆಡುವುದರಿಂದಲೂ ಖರ್ಚಿನ ಭಾಗಗಳು ವೃದ್ಧಿಯನ್ನೈದುವದರಿಂದಲೂ ಶೋಕಾವಿಷ್ಟರಾದ ನಿಮಗೆ ತಾ. ೧೧, ೧೨, ೧೩. ಈ ದಿನಗಳು ಬಹಳ ಹಾನಿಕಾರಕಗಳಾಗಿರುವುವು.

**ವೃಷಭ:—**

ನಿಮಗೀ ವಾರವು ಹೆಚ್ಚಿನ ಬಾಗಗಳಲ್ಲಿ ವಿಪರೀತವಾಗಿ ಕಂಡುಬಂದರೂ ಕೆಲವಂಶಗಳಲ್ಲಿ ಉತ್ತಮವಾಗಿರುವುದು. ನಿಮಗೂ ನಿಮ್ಮ ವಿರೋಧಿಗಳಿಗೂ ಬಹಳ ಸಮಯದಿಂದಿದ್ದ ಮನಸ್ತಾಪವು ನಿವೃತ್ತಿಯಾಗಿ ಪರಸ್ಪರ ಐಕ್ಯಭಾವದಿಂದಿರುವಿರಿ. ಕೈಗೊಂಡ ಕಾರ್ಯಗಳಲ್ಲಿ ಪ್ರಯತ್ನಕ್ಕೆ ತಕ್ಕ ಫಲವು ಸಿಕ್ಕಿಯೇ ತೀರುವುದು. ಪುಣ್ಯಕ್ಷೇತ್ರ ಮತ್ತು ತೀರ್ಥಗಳ ದರ್ಶನ ಸಲುವಾಗಿಯೂ ಹೊಸ ಊರುಗಳ ಸಂಚಾರದ ಸಲುವಾಗಿಯೂ ಧನ ವ್ಯಯವಾಗುವುದು. ಅಂಗಾಂಗಗಳಲ್ಲಿ ಉರಿ ಮತ್ತು ತಾಪದಾಯಕವಾದ ರೋಗಗಳಿಂದ ಶರೀರವು ಬಹಳ ಪೀಡಿಸಲ್ಪಟ್ಟು ಬಣ್ಣವೂ ಕೂಡ ಬದಲಾಯಿಸುವದು. ವಾರದ ಆದ್ಯಂತ ದಿನಗಳನ್ನು ಬಿಟ್ಟು ಮಿಕ್ಕುಳಿದ ದಿನಗಳಲ್ಲಿ ಅಜೀರ್ಣ ಸಂಬಂಧವಾದ ರೋಗಗಳೂ ಆಪ್ತ ಜನರಲ್ಲಿ ಮನಸ್ತಾಪವೂ ಉಂಟಾಗುವುದು.

**ಮಿಥುನ:—**

ಇಷ್ಟಾನಿಷ್ಟಗಳು ಮಿಶ್ರವಾಗಿರೋಣದರಿಂದ ನಿಮಗೀ ವಾರವು ಉತ್ತಮವೆಂದಾಗಲಿ ಯೂ ಕನಿಷ್ಟವೆಂದಾಗಲಿ ಹೇಳಲಾಗದು. ನೀವು ಒಳ್ಳೇ ವ್ಯವಹಾರ ಕುಶಲರಿರುವಿರಿ. ''ಬಲ್ಲವರ ಮಾತು ಬೆಲ್ಲಕ್ಕಿಂತ ಸವಿ'' ಎಂಬ ನಾಣ್ನುಡಿಯು ನಿಮ್ಮಲ್ಲಿ ಚೆನ್ನಾಗಿ ಕಂಡುಬರುತ್ತದೆ. ಆದ್ದರಿಂದಲೇ ವೈರಿ ಜನರನ್ನು ಕೂಡ ಒಳ್ಳೆಯ ನಯ ನುಡಿಗಳಿಂದ ಮಿತ್ರರನ್ನಾಗಿ ಮಾರ್ಪಡಿಸುವಿರಿ. ಬಂಧು ಮಿತ್ರವರ್ಗವೂ ಕೂಡ ಸಮೀಚೀನವಾಗಿರುವುದರಿಂದ ಹರ್ಷಚಿತ್ತರಾಗಿರುವಿರಿ. ಇಷ್ಟೆಲ್ಲಾ ಸೌಭಾಗ್ಯಗಳಿದ್ದರೇನು? ನಿಮ್ಮ ಪ್ರಕೃತಿಯ ದೌರ್ಭಾಗ್ಯದಿಂದಲೂ ಅಪತ್ಯವರ್ಗದಿಂದಲೂ ಶೋಕವು ಅಧಿಕವಾಗುವುದು. ಈ ಕಾರಣದಿಂದಾಗಿ ನಿಮ್ಮ ಮನಸ್ಸೆಂಬುದು ಯಾವಾಗಲೂ ಕಲುಷಿತವಾಗಿರುವುದು. ಸಾಂಪತ್ತಿಕಸ್ಥಿತಿಯು ಬಹು ಮಟ್ಟಿಗೆ ಸುಧಾರಿಸಿರುವುದು. ತಾ. ೧೨, ೧೩. ಈ ದಿನಗಳು ಇತರ ದಿನಗಳಿಗಿಂತ ಸರ್ವಭಾಗಗಳಲ್ಲೂ ಉತ್ತಮಗಳಾಗಿವೆ.

**ಕರ್ಕಾಟಕ:—**

ದೈತ್ಯಗುರುಗಳಾದ ಶುಕ್ರಾಚಾರ್ಯರೊಬ್ಬರು ನಿಮ್ಮ ಮೇಲೆ ದಯೆದೋರಿರುವರು. ಇವರನ್ನು ಹೊರತು ಇತರ ಸರ್ವಗ್ರಹರೂ ನಿಮ್ಮ ಭಾಗಕ್ಕೆ ವಿಪರೀತಕಾರಿಗಳೇ ಆಗಿರುವರು. ಆದ್ದರಿಂದ ನಿಮಗೀ ವಾರವು ಬಹಳ ಅಸಹ್ಯವಾಗಿ ತೋರುವುದು. ಜಾತಿಮತಕ್ಕೆ ವಿಹಿತವಾದ ಧರ್ಮವು ನಿಮ್ಮಲ್ಲಿ ಇಲ್ಲವೆಂದರೂ ತಪ್ಪಾಗಲಾರದು. ದುರಾಚಾರಗಳಲ್ಲಿ ಪ್ರವರ್ತಿಸುವ ನಿಮಗೆ ದುರ್ಜನರ ಸಂಸರ್ಗಗಳು ಹೆಚ್ಚುವವು. ಇದರಿಂದ ಮುಂದೆ ಬಹಳ ಹಾನಿ ಸಂಭವಿಸುವದು. ನಿಮ್ಮ ಕುಟುಂಬಕ್ಕೆ ಈ ರೀತಿಯ ವರ್ತನೆಯು ಸಹನೆಯಾಗುವುದಿಲ್ಲ. ಆದ್ದರಿಂದಲೇ ನಿಮಗೂ ಅವರಿಗೂ ನಿತ್ಯ ಕಲಹ ತಪ್ಪದಿರುವುದು. ರೋಗ

ಪೀಡೆಯೂ ಶತ್ರುಪೀಡೆಯೂ ನಿಮ್ಮನ್ನು ಆವರಿಸಿಕೊಂಡಿರುವುದರಿಂದ ಶಾರೀರಕ ಮಾನಸಿಕ ಸುಖಗಳು ನಿಮಗಿಲ್ಲವು. ತಾ. ೧೧, ೧೪, ೧೫, ೧೬ ಈ ದಿನಗಳು ಪೂರ್ವೋಕ್ತ ವಿಚಾರಗಳ ಭಾಗಕ್ಕೆ ಹಾನಿಕಾರಕವಾಗಿರುವುದು.

**ಸಿಂಹ:—**

ಕಾರ್ಯಾಕಾರ್ಯ ವಿಚಾರಣಾಶಕ್ತಿಯೂ ಮತ್ತು ಕಾರ್ಯಕಾರಿತ್ವವೂ ನಿಮ್ಮಲ್ಲಿ ಚೆನ್ನಾಗಿರುವುದು. ಆದ ಕಾರಣದಿಂದಲೇ ನೀವು ಮಾಡತಕ್ಕ ಹೆಚ್ಚಿನ ಕಾರ್ಯಭಾಗಗಳು ನಿರಾಯಾಸದಿಂದ ಕೊನೆಗೊಳ್ಳುವವು. ನಿಮ್ಮ ಆಕಾಂಕ್ಷೆಯು ಕೂಡಾ ಪೂರ್ತಿಹೊಂದುವುದು. ಕೆಲವೊಮ್ಮೆ ಅವಿಚಾರದಿಂದ ಮುಂದುವರಿದ ಕಾರ್ಯದ ಸಂಬಂಧವಾಗಿ ಶತ್ರುಗಳ ಬಲೆಗೆ ಸಿಲುಕಿ ಮಾನವನ್ನು ಕಾಪಾಡಿಕೊಳ್ಳುವುದು ಕಷ್ಟಸಾಧ್ಯವಾದೀತು ಅಲ್ಲದೆ ಪ್ರಕೃತಿಯ ಆರೋಗ್ಯದ ಸಲುವಾಗಿ ಮತ್ತು ಶತ್ರುಪೀಡಾ ನಿವೃತ್ತಿಗಾಗಿಯೂ ಕೆಲವಂಶ ಧನವ್ಯಯವಾಗುವುದು. ಅಂತೂ ಸಾಂಪತ್ತಿಕ ಸ್ಥಿತಿಯು ಬಹಳ ಚೆನ್ನಾಗಿರುವುದರಿಂದ ಇತರ ಶೋಕಗಳೆಲ್ಲವೂ ನಿವಾರಣೆಯಾಗುವುವು. ತಾ. ೧೨, ೧೩ ಮತ್ತು ೧೭ ಈ ದಿನಗಳಲ್ಲಿ ಕಾರ್ಯಜಯ, ಧನಲಾಭ, ಸ್ತ್ರೀಸುಖ.

**ಕನ್ಯಾ: –**

ವಿದ್ಯಾವಂತರಾಗಿದ್ದು ನಿರುದ್ಯೋಗದಿಂದ ಕಾಲ ಕಳೆಯುವುದು ಬಹಳ ಕಷ್ಟ. ಈ ಕಷ್ಟ ನಿವಾರಣೆಯಾಗಬೇಕಾದರೆ ತಕ್ಕ ಉದ್ಯೋಗವು ಲಭಿಸಬೇಕು. ಅಂತೂ ನಿಮಗೆ ಈ ವಾರದಲ್ಲಿ ನಿರುದ್ಯೋಗ ಸಮಸ್ಯೆಯು ವಿಶೇಷತಃ ನಿವಾರಣೆಯಾಗುವುದು. ಯುಕ್ತವಾದ ಉದ್ಯೋಗವನ್ನು ಹೊಂದಿ ತಕ್ಕ ಪ್ರತಿಫಲವನ್ನು ಪಡೆದು ದಿನಗಳನ್ನು ಸಂತೋಷದಿಂದ ಕಳೆಯುವಿರಿ. ಸಹಜ. ಆದರೆ ಕೋರ್ಟು ಕಛೇರಿಗಳ ವ್ಯವಹರಣೆಯೂ ರಾಜಕೀಯ ಭಾಗದಲ್ಲಿ ಹೆಚ್ಚಿನ ಧನವ್ಯಯವಾಗುವುದು ಮಾತ್ರವಲ್ಲದೆ ಉಷ್ಣಪಿತ್ಥವಿಕಾರಗಳಾದ ರೋಗ ವಿಶೇಷಗಳಿಂದ ಶರೀರವು ಬಹಳ ವೇದನೆಗೊಳಗಾಗುವುದರಿಂದ ಮನೋವ್ಯಥೆಯು ಅನಿವಾರ್ಯವಾಗುವುದು. ಮತ್ತು ಅವಿಚಾರದಿಂದ ವರ್ತಿಸಿದ್ದಲ್ಲಿ ಶತ್ರುಗಳ ಬಲೆಗೆ ಸಿಲುಕಬೇಕಾದೀತು. ತಾ. ೧೨, ೧೩ ಮತ್ತು ೧೭ ಈ ದಿನಗಳಲ್ಲಿ ಎಚ್ಚರಿಕೆಯಿಂದಿರುವುದೊಳ್ಳಿತು.

**ತುಲಾ:—**

ಬಹ್ವಂಶ ನಿಮಗೆ ಈ ವಾರವು ಶುಭ ಫಲದಾಯಕವೇ ಆಗಿರುವುದರಿಂದ ಸಕಲ ನೂತನ ಕಾರ್ಯಾರಂಭಕ್ಕೂ, ಶತ್ರುಗಳ ನಿವಾರಣೆಗೂ ಈ ಸಮಯವು ಯುಕ್ತವಾಗಿರುವುದು. ಆದರೆ ನಿಮ್ಮಲ್ಲಿ ಮನೋಧೈರ್ಯವು ಬಹಳ ಕಡಿಮೆಯಾಗಿರುವುದರಿಂದ ಯಾವ ವಿಷಯದಲ್ಲೂ ಮುಂದಾಗಲು ಹೆದರುವಿರಿ. ನೇತ್ರರೋಗ ಮತ್ತು ಆಕಸ್ಮಿಕ ಅವಘಡಗಳಿಂದ ಯೂ ಕತ್ತಿ ಚೂರಿ ವಗೈರೆಗಳಿಂದ ಶರೀರಕ್ಕೆ ಪೀಡೆಯಾಗುವುದು. ಸಾಂಸಾರಿಕ ತಾಪತ್ರಯಗಳಿಂದ ನಿವೃತ್ತರಾದ ನಿಮಗೆ ವಾರವು ದಿನದಂತೆ ಕಳೆದು ಹೋಗುವುದು. ಆಯವ್ಯಯಗಳು ಶುಕ್ಲ ಕೃಷ್ಣಪಕ್ಷದ ಚಂದ್ರನನ್ನನುಸರಿಸಿವೆ. ಸ್ತ್ರೀವಿಷಯಕವಾದ ನಿಮ್ಮ ಇಷ್ಟಾರ್ಥವು ಕೈಗೂಡುವುದು. ತಾ. ೧೪, ೧೫, ೧೬ ಈ ದಿನಗಳಲ್ಲಿ ಮೇರೆ ಮೀರಿ ಖರ್ಚಾಗುವ ಸಂಭವವಿರುವುದರಿಂದ ತದ್ವಿಷಯದಲ್ಲಿ ದೃಷ್ಟಿಯನ್ನಿಡಿರಿ.

**ವೃಶ್ಚಿಕ:—**

ಅರ್ಥವ್ಯಯಕ್ಕೆ ಕಾರಣಗಳಾದ ಅನರ್ಥಶತಗಳು ನಿಮಗೀ ವಾರದಲ್ಲಿ ಸಂಭವಿಸುವುದರಿಂದ ನಿಮ್ಮ ತಾತ್ಕಾಲಿಕ ದುಡಿಮೆಯು ಸಾಲದೆ ಇತರರಿಂದ ಸಾಲಪಡೆಯಬೇಕಾಗುವ ಪ್ರಸಂಗವು ಬರುವುದು. ಆಗಾಗ ಪ್ರವಾಸಗಳು ಸಂಭವಿಸುವವು. ಕೋರ್ಟುವಗೈರೆಗಳ ಮುಖಾಂತರ ಹೆಚ್ಚಿನ ಧನವ್ಯಯವಾಗುವುದು. ಪುತ್ರಭೃತ್ಯರ ವಿಯೋಗವು ನಿಮ್ಮನ್ನು ಮತ್ತಷ್ಟು ದುಃಖಕ್ಕೀಡು ಮಾಡುವುದು. ಸ್ತ್ರೀಯೊಡನೆ ಕಲಹವಾಗುವುದರಿಂದ ಮಾನಹಾನಿಯ ಪ್ರಸಂಗ ಬರುವುದು. ನೇತ್ರೋದರ ರೋಗಗಳಿಂದ ಶರೀರವು ವಿಶೇಷ ಸಂತಾಪ ಹೊಂದುವುದು. ಇವೆಲ್ಲಕ್ಕಿಂತಲೂ ಹೆಚ್ಚಿನ ದುಃಖದಾಯಕವಾದ ವಿಷಯವೆಂದರೆ, ನಿಮ್ಮ ಬಂಧುಜನರಿಂದಲೇ ನಿಮಗೊದಗತಕ್ಕ ಅನಿಷ್ಟಗಳು ವಿಶೇಷವಾಗಿ ನಿಮ್ಮ ಮನಸ್ಸನ್ನು ಕೆಡಿಸುವವು. ತಾ. ೧೨ರಿಂದ ೧೬ರ ವರೆಗೆ ನಿಮಗೀ ಅನಿಷ್ಟಗಳು ಹೆಚ್ಚಾಗಿ ಪೀಡಿಸಲಾರವು—

**ಧನು:—**

ಮಿಶ್ರಫಲದಾಯಕವಾದ ಈ ವಾರದಲ್ಲಿ ಹೆಚ್ಚಿನ ಯಾವುದೊಂದೂ ಆಗುಹೋಗುಗಳು ಸಂಭವಿಸವು. ಮನೋವಾಕ್ಕಾಯಗಳೆಂಬ ತ್ರಿಕರಣಗಳಲ್ಲೊಂದಾದ

ಸಾಮುದ್ರಿಕ ಲಕ್ಷಣ ಬೆಲೆ ೦-೮-೦

ಮನಸ್ಸು ಕೆಟ್ಟುಹೋಗಿರುವುದರಿಂದ ಸ್ಥಾನಚ್ಯುತಿಗೆ ಕಾರಣಗಳಾದ ಕೆಲಸಗಳು ಸಂಭವಿಸುವವು. ಸತ್ಕರ್ಮಾಚರಣೆಯಲ್ಲಿದ್ದು ದೇವರು ಮೆಚ್ಚುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದರೆ ನಿಮಗಾವ ಭಾಗದಲ್ಲೂ ಹಾನಿಯಾಗದು. ಕೈಕೊಂಡ ಕಾರ್ಯಗಳಲ್ಲಿ ಜಯವಾಗುವುದಲ್ಲದೆ ಜನತೆಯಿಂದ ವಿಶೇಷವಾಗಿ ಸನ್ಮಾನಿಸಲ್ಪಡುವಿರಿ. ಮಿತ್ರವೃಂದವು ಎಲ್ಲಾ ಭಾಗಗಳಲ್ಲೂ ನಿಮಗೆ ವಿಶೇಷ ಪ್ರೋತ್ಸಾಹವಿತ್ತು ಸಹಕರಿಸುವುದರಿಂದ ಧನಾದಿ ವಿಷಯಗಳಲ್ಲಿ ಅಭಿವೃದ್ಧಿಯನ್ನೈದುವಿರಿ. ಪುತ್ರೀಪುತ್ರಾದಿಗಳಿಂದೊಡಗೂಡಿದ ನಿಮಗೆ ಸಾಂಸಾರಿಕ ವಿಷಯಕವಾದ ಏನೊಂದೂ ಕೊರತೆಗಳಿಲ್ಲವು. ತಾ. ೧೪ರಿಂದ ವಾರಾಂತ್ಯದ ವರೆಗಿನ ದಿನಗಳು ಅನುಕೂಲಗಳಾಗಿವೆ—

**ಮಕರ:** —

ನಿಮ್ಮ ಭಾಗಕ್ಕೆ ಈ ವಾರದಲ್ಲಿ ಕೆಟ್ಟರತಕ್ಕ ಗ್ರಹನೆಂದರೆ ಶುಕ್ರನೊಬ್ಬನೇ. ಈತನಿಂದ ಸಂಭಾಷಣೆಯ ಮೂಲಕ ಕಲಹವಾಗಿ ತತ್ಸಲುವಾಗಿ ಮಾನಹಾನಿಯಾದೀತು. ಆದರೂ ಇತರ ಸರ್ವಗ್ರಹರೆಡೆಯಲ್ಲಿ ಇವನ ಕಾರ್ಯವು ಕ್ರಿಯಾರೂಪದಲ್ಲಿ ಪರಿಣಮಿಸದು. ನಿರೋಗಿಯಾಗಿರತಕ್ಕ ನಿಮಗೆ ಯಾವಕಾರ್ಯವನ್ನು ಮಾಡಲೂ ಬೇಕಾದ ಧೈರ್ಯೋತ್ಸಾಹಗಳು ಚೆನ್ನಾಗಿರುವುದರಿಂದ ಸ್ಥಾನಪ್ರಾಪ್ತಿಯೂ ಧನಲಾಭವೂ ಆಗುವುದು. ಸರ್ವ ವಿಷಯಗಳಲ್ಲೂ ನಿಮಗಿಂತ ಅಧಿಕರಾದ ಶತ್ರುಗಳು ಈವಾಗ ನಿಮ್ಮ ವಿಷಯದಲ್ಲಿ ಮುಂಗುಸಿಯನ್ನು ನೋಡಿದ ಸರ್ಪದಂತಾಗುವರು. ಪಶ್ವಾದಿ ಪರಿಜನರಿಂದ ಕೂಡಿದ ಗೃಹೋಪಕರಣಗಳಲ್ಲಿ ಯಾವುದಕ್ಕೂ ಚ್ಯುತಿಯಿಲ್ಲವು. ಸಕಲ ವಿಷಯಗಳಿಗೂ ಈ ವಾರವು ಅತ್ಯುತ್ತಮವಾಗಿರುವುದೆಂದರೆ ಅತಿಶಯೋಕ್ತಿಯಾಗದು. ವಾರದ ಆದ್ಯಂತ ದಿನಗಳು ವಿಶೇಷ ಉತ್ತಮವಿರುವುವು—

**ಕುಂಭ:**—

ಮಿತ್ರೀಭೂತರಾದ ಗ್ರಹರಿಂದಾಗಿ ಕೆಲವು ಭಾಗಗಳಲ್ಲಿ ಇಷ್ಟವೂ ಕೆಲವಲ್ಲಿ ಅನಿಷ್ಟವೂ ಸಂಭವಿಸುವದು. ಹೇಗೆಂದರೆ, ಧರ್ಮ ಕರ್ಮಾಸಕ್ತರಾದ ನಿಮಗೆ ಧನಲಾಭವೂ ಸ್ತ್ರೀಸುಖವೂ ತೃಪ್ತಿಕರವಾಗಿರುವುದಲ್ಲದೆ ಹೆಚ್ಚಿನ ಮನೋರಥಗಳು ಕಾರ್ಯರೂಪಕ್ಕೆ ಬರುವವು. ಆದರೂ ಪ್ರತಿಕೂಲಗ್ರಹರಿಂದ ದೇಹಾಲಸ್ಯವೂ ವ್ಯಸನವೂ ವಿಶೇಷವಾಗುವದು. ತತ್ರಾಪಿ ಶರೀರವು ವಿಶೇಷ ಬಲಹೀನವಾಗುವದು. ಭಯದುಃಖಗಳಧಿಕವಾಗುವವು.


# ನವಮಲ್ಲಿ

## - ಕನ್ನಡ ಪುಸ್ತಕಗಳು -

| | | | |
|---|---|---|---|
| ಶಾಂತಿ ಪುರಾಣ . . | 3 | 0 | 0 |
| ಚಂದ್ರಗುಪ್ತ ಚಕ್ರವರ್ತಿ . | 1 | 0 | 0 |
| ಸರಸ್ವತೀ . . . (ಸಾಮಾಜಿಕ ನಾಟಕ) | 0 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ . (ಇಂಗ್ಲಿಷ್ ಸ್ವಯಂಬೋಧಿನಿ) | 0 | 8 | 0 |
| ಸಾಮುದ್ರಿಕ ಶಾಸ್ತ್ರ . . | 0 | 8 | 0 |
| ಹೊಂದೊವಲ ಹಂಬಲು. . | 0 | 6 | 0 |
| ವೀರಭೂಮಿ (ಕತೆ) . . | 0 | 1 | 6 |
| ಗೀತೆಯ ಕೈಗನ್ನಡಿ . . | 0 | 4 | 0 |
| ಗೀತೆಯ ಮೂಲ . . (ಈಶಾವಾಸ್ಯೋಪನಿಷತ್ತಿನ ಭಾಷಾಂತರ) | 0 | 1 | 0 |
| ಸ್ತ್ರೀಪದ್ಯರತ್ನಾಕರ ಭಾಗ I | 0 | 1 | 0 |
| ಡಿ II | 0 | 1 | 0 |
| ಡಿ III | 0 | 1 | 0 |
| ಡಿ IV | 0 | 1 | 0 |
| ಪುರಂದರ ದಾಸರ ಪದ ಭಾಗ I | 0 | 4 | 0 |
| ಡಿ II | 0 | 4 | 0 |
| ಡಿ III | 0 | 4 | 0 |
| ಮಧುವನ . . . | 1 | 8 | 0 |
| ಧರ್ಮಸಂಕಟ (ಸಾಮಾಜಿಕ ನಾಟಕ) | 0 | 4 | 0 |
| Gouthama the Buddha | 0 | 8 | 0 |
| ಭಗವದ್ಗೀತೆ . . . | 0 | 2 | 0 |
| ಕುಕ್ಕುಟ ಪಂಚಾಂಗ . . | 0 | 1 | 0 |
| ಮಗ್ಗಿ . . . . | 0 | 1 | 6 |
| ತುಳುನಾಡ್ ತಿಲಕ ಪಂಚಾಂಗ . | 0 | 1 | 0 |
| ವೈಜಯಂತೀ ಪಂಚಾಂಗ . | 0 | 2 | 6 |
| ಜಯಪಾಂಡ್ಯ ವಿಜಯ . . | 0 | 2 | 0 |

**ತುಳುನಾಡ್ ಪ್ರೆಸ್,**

**ಉಡುಪಿ, ದ. ಕ.**

ಬುದ್ಧಿಹ್ರಾಸದಿಂದಾಗಿ ಜನರೊಡನೆ ಕಲಹವಾಗುವುದು. ದುಃಖನಿವೃತ್ತಿಗಾಗಿ ದುಡಿದ ಧನವು ಕೂಡಲೇ ವ್ಯಯವಾಗುವುದು. ತಾ. ೧೪ರಿಂದ ವಾರಾಂತ್ಯದ ವರೆಗೂ ರಾಜಕೀಯ ಭಯ, ಉದ್ವೇಗ, ಶ್ರಮ, ಉದರರೋಗ ಇತ್ಯಾದ್ಯನಿಷ್ಟಗಳು ವೃದ್ಧಿ ಹೊಂದುವವು—

**ಮೀನ:—**

ಕಾಲವು ಬಹಳ ಕನಿಷ್ಠಾವಸ್ಥೆಗೆ ಬಂದಿರುವುದು. ಯಾವ ಭಾಗದಲ್ಲಿ ನೋಡಿದರೂ ಉಳಿಗಾಲವಿಲ್ಲವೆಂಬಂತಾಗಿದೆ. ಆರ್ಥಿಕ ಮುಗ್ಗಟ್ಟು ಬಹಳವಾಗಿರುವುದು. ಏತತ್ಸಂಬಂಧವಾಗಿಯೇ ಕಲಹವು ಉತ್ಪನ್ನವಾಗುವುದು. ಶರೀರ ಪ್ರಕೃತಿಯು ವಿಶೇಷತಃ ಕೆಡುವುದು, ಮಾತ್ರವಲ್ಲ ಹುಣ್ಣು ವಗೈರೆಗಳೂ ಆಗುವವು. ಪ್ರತಿಯೊಂದು ಕಾರ್ಯಕ್ಕೂ ವಿಘ್ನಗಳು ತಪ್ಪುವದಿಲ್ಲವು. ಪ್ರವಾಸದ ನಿಮಿತ್ತವಾಗಿ ಹೆಚ್ಚಿನ ಧನವ್ಯಯವಾಗುವುದು. ವಿಷವಹ್ನಿಸಂಬಂಧವಾದ ಭಯವೂ ಕಂಡುಬರುತ್ತದೆ. ಅಂತೂ ಶಾರೀರಕ ಮಾನಸಿಕ ಸುಖಗಳು ಸ್ವಪ್ನದಲ್ಲೂ ಇಲ್ಲವೆಂದರೆ ತಪ್ಪಾಗದು. ವಾರದ ಮಧ್ಯಭಾಗದಲ್ಲಿ ರೋಗಗಳೂ, ಹಣದ ಅಡಚಣೆಯೂ ಅಷ್ಟೊಂದು ಪೀಡಿಸಲಾರದು—

—**ಬಾಲಭಾಸ್ಕರ.**


**ನನಗರಿಯದು-ನಿಮಗೆ**



**ಮನೋ-ರಥಕ್ಕೆ ಗಾಲಿಗಳೆಷ್ಟು?**



# ಯು. ಆರ್. ಶೆಣೈ ಎಂಡ್ ಸನ್ಸ್.

ಹೆಡ್ ಆಫೀಸ್:-**ರಥಬೀದಿ.** ] **ಮಂಗಳೂರು.** [ ಬ್ರಾಂಚ್:-**ಕೊಡಿಯಾಲಬೈಲ್.**

ಎಲ್ಲಾ ತರದ ಶಾಲಾ ಕಾಲೇಜು ಪುಸ್ತಕಗಳು, ಸ್ಟೇಶನೆರಿ, ಕಟ್ಲೆರಿ, ಪ್ರಿಂಟಿಂಗ್ ಶಾಯಿ ಮತ್ತು ಮದುವೆ ಉಪನಯನಾದಿಗಳಿಗೆ ಬೇಕಾದ ಸುಗಂಧ ದ್ರವ್ಯ ಉಡುಗರೆ ವಗೈರೆಗಳು ಮತ್ತು ಪ್ರಿಂಟಿಂಗ್ ಕಾಗದಗಳು ನಮ್ಮಲ್ಲಿ ಸುಲಭ ದರದಲ್ಲಿ ಸಿಗುವುವು.

For all kinds of School and College requisites, Books, Stationary Articles, Printing inks, and students' everyday requisites:-

# U. R. SHENOY & SONS,

*Car Street, Mangalore, Branch at Kodialbail.*

***BINDING IS OUR SPECIALITY.***

# ಎರಡು ಚಿತ್ತವೇಧಕ ಸಮಾಧಿ ಯಾತ್ರೆಗಳು!

## ಟರ್ಕಿಯ ಜನಕನದೊಂದು- - - - ಹಿಂದುಸ್ಥಾನದ ದೊಡ್ಡಣ್ಣನದೊಂದು!

ಕಳೆದ ವಾರವನ್ನು ಟರ್ಕಿ ಮತ್ತು ಹಿಂದುಸ್ಥಾನದ ಪಾಲಿಗೆ 'ಅಳುವ ವಾರ'ವೆಂದು ಕರೆಯಬಹುದು. ಆಧುನಿಕ ಟರ್ಕಿಯ ಜನಕ ಕಮಾಲ್ ಅಟಾಟರ್ಕರವರನ್ನು ಮತ್ತು ಭಾರತದ ದೊಡ್ಡಣ್ಣ ಮೌಲಾನಾ ಶೌಕತಾಲಿಯವರನ್ನು ಕಳೆದುಕೊಂಡ ವಾರವದು.

### ಕಮಾಲರ ಸಮಾಧಿಯಾತ್ರೆ.

ಕಮಾಲ್ ಅಟಾಟರ್ಕರವರ ಸಮಾಧಿಕಾರ್ಯವು ನವಂಬರ ತಾ. ೨೧ರಲ್ಲಿ ನಡೆಯಿತು. ಟರ್ಕಿಯ ಅಂಕಾರಾ ಪಟ್ಟಣದಲ್ಲಿರುವ ಪಾರ್ಲಿಮೆಂಟ್ ಭವನದಲ್ಲಿ ಕಮಾಲರ ಜಡದೇಹವನ್ನು ೪೮ ಘಂಟೆಗಳ ವರೆಗೆ ಹಾಗೆಯೇ ಇಟ್ಟಿದ್ದರು. ತಾ. ೨೧ನೇ ಮಧ್ಯಾಹ್ನ ಪಾರ್ಲಿಮೆಂಟ್ ಗೃಹದಿದಿರು ಮುಸಲ್ಮಾನರ ಮಧ್ಯಾಹ್ನದ ಪ್ರಾರ್ಥನೆ ನಡೆದೊಡನೆ ಸಮಾಧಿ ಮೆರವಣಿಗೆ ಹೊರಟಿತು. ಹೆಣದ ಮಂಚವಿದ್ದ ಗನ್‌ಬಂಡಿಯ ಹಿಂದುಗಡೆಯಲ್ಲಿ ಜನರಲ್ ಇನಾನು ಮೊದಲಾದ ಟರ್ಕೀ ಪ್ರಮುಖರು ತಲೆಯಡಿಗಿಟ್ಟು ನಡೆದಿದ್ದರು. ಅವರನ್ನನುಸರಿಸಿ ಗ್ರೀಸಿನ ಮುಖ್ಯ ಮಂತ್ರಿಗಳು, ಜರ್ಮನ್ ಪ್ರಿವ್ಹಿ ಕೌನ್ಸಿಲಿನ ಮುಖ್ಯಸ್ಥರು, ಜೋರ್ಜ್ ಚಕ್ರವರ್ತಿಗಳ ಪ್ರತಿನಿಧಿಗಳು, ರಷ್ಯ ಮತ್ತು ಅಮೇರಿಕದ ರಾಯಭಾರಿಗಳು ಮತ್ತು ಯುರೋಪಿನ ಇತರ ರಾಷ್ಟ್ರಗಳ ಪ್ರತಿನಿಧಿಗಳಿದ್ದರು. ಮಹಿಳೆಯರು ಹಿಂಡುಗಟ್ಟಿ 'ಅಟಾಟರ್ಕ್, ಅಟಾಟರ್ಕ್! ನೀನೆಲ್ಲಿರುವೆ!' ಎಂದು ಗೋಳಾಡುತ್ತಾ ಬರುತ್ತಿದ್ದರು. ಮೃತರ ಸಹೋದರಿಯೂ ಕಣ್ಣೀರು ಸುರಿಸುತ್ತಾ ಅವರೊಂದಿಗಿದ್ದಳು.

ಮೆರವಣಿಗೆ ಹೋದ ರಸ್ತೆಯಲ್ಲೆಲ್ಲಾ ಕಣ್ಣೀರಿಳಿಸುತ್ತಾ ಸಹಸ್ರ ಗಟ್ಲೆಯಲ್ಲಿ ನಿಂತಿದ್ದ ಜನಸಂದಣಿಯನ್ನು ಕಾಣಬಹುದಾಗಿತ್ತು. ಮೇಲ್ಗಡೆಯಲ್ಲಿ ಮೆರವಣಿಗೆಯ ಸಾಲುಹಿಡಿದು ಬರುತ್ತಿದ್ದ ಏರೋಪ್ಲೇನುಗಳ 'ಘೊರ್ರ್' ಶಬ್ದ, ಕೆಳಗಡೆ ಗನ್ನುಗಳಿಂದೇಳುತ್ತಿದ್ದ ದಪ್ಪ ಹೊಗೆ- ಇವೆಲ್ಲಾ ಭೀಕರತೆಯನ್ನು ಸೂಚಿಸುತ್ತಿದ್ದವು.

ಟರ್ಕಿ ಸೈನ್ಯದ ಇನ್ಸ್‌ಪೆಕ್ಟರರೂ ಕಮಾಲರ ಆಪ್ತಮಿತ್ರರೂ ಆದ ಜನರಲ್ ಪಹ್ರೆದ್ದಿನ್ ಆಟೆಯವರು ಕರಿಯ ವಾಹನವನ್ನೇರಿ, ಕಾಲ್ಬಲ, ನಾವೆ ಮೊದಲಾದ ಎಲ್ಲಾ ಸೈನ್ಯ ಶಾಖೆಗಳ ಪ್ರತಿನಿಧಿಗಳೊಡನೆ ಮೃತ ದೇಹವಿದ್ದ ಭಂಡಿಯ ಮುಂಭಾಗದಲ್ಲಿ ನಡೆದಿದ್ದರು. ಮೆರವಣಿಗೆಯು ಮುಖ್ಯ ರಸ್ತೆಗಳನ್ನು ಹಾದು 'ಎತ್ನೋಗ್ರೇಫಿಕ್ ಮ್ಯೂಸಿಯಮ್'ಗೆ ಬಂತು. ಆ ಸ್ಥಳವು ಕಮಾಲರು ಆ ದಿನ ವಿರೋಧಿಗಳನ್ನು ಸದೆಬಡಿದ ಮೇಲೆ ನವಟರ್ಕಿಯ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಮೊದಲು ಸ್ವಲ್ಪ ಕಾಲ ವಿಶ್ರಾಂತಿ ಪಡೆದಿದ್ದ ಠಾಣ್ಯವಾಗಿತ್ತು. ಅಲ್ಲಿಯೇ ಕಮಾಲರ ಅಂತ್ಯಕ್ರಿಯೆ ನಡೆಯಿತು. ಅಂತ್ಯಕ್ರಿಯೆ ಮುಗಿಯುವ ಹೊತ್ತಿಗೆ ಇಡೀ ಟರ್ಕಿಯಲ್ಲಿ ಮೂರು ಮಿನಿಟುಗಳ ಮೌನ ವಾಚರಿಸಲ್ಪಟ್ಟಿತಲ್ಲದೆ ಆ ದಿನವು ಟರ್ಕಿಯ ದುಃಖಾಚರಣೆಯ ದಿನವಾಗಿತ್ತು.

### ಮೌ. ಶೌಕತಾಲಿಯವರ ಅಂತ್ಯಕ್ರಿಯೆ.

ಮೌಲಾನ ಶೌಕತಾಲಿಯವರ ಅಂತ್ಯವಿಧಿಯು ನ್ಯೂ ಡಿಲ್ಲಿಯಲ್ಲಿ ತಾ. ೨೮—೧೧—೩೮ನೇ ದಿನ ಅಪರಾಹ್ನ ೨-೧೫ಕ್ಕೆ ನಡೆಯಿತು. ಮೌಲಾನರು ಪ್ರಾಣಬಿಟ್ಟ ಬೇಗಮ್ ಮಹಮ್ಮದಾಲಿಯವರ ಮನೆಯಿಂದ ಸಹಸ್ರಾರು ದುಃಖೀ ಜನರು ಆಲಿಯವರ ಕಳೇಬರದೊಡನೆ ಮೆರವಣಿಗೆಯಿಂದ ಹೊರಟರು. ಮೆರವಣಿಗೆಯು ನ್ಯೂಢಿಲ್ಲಿಯ ಮುಖ್ಯ ರಸ್ತೆಗಳ ಮೂಲಕ ಜುಮ್ಮಾ ಮಸೀದಿಯಿದಿರು ಬಂದುನಿಂತಿತು. ಅಲ್ಲಿ ಪ್ರಾರ್ಥನೆ ನಡೆದು ಜುಮ್ಮಾ ಮಸೀದಿಯ ಮೂಡು ದಿಕ್ಕಿನಲ್ಲಿ ಮುಖ್ಯ ಗೇಟಿನ ಇದಿರುಗಡೆಯಲ್ಲಿ

ಕಳೇಬರವನ್ನು ಹೂಳಲಾಯಿತು. ಶವ ಮೆರವಣಿಗೆಗೆ ಕೇಂದ್ರ ಎಸೆಂಬ್ಲಿಯ ಹಲವು ಮೆಂಬರರೂ ಪಕ್ಷಗಳ ಧುರೀಣರೂ ಹಾಜರಿದ್ದರು.

**ಗಾಂಧಿಜೀಯವರ ಸಂತಾಪ.**

“ದೊಡ್ಡಣ್ಣನ ಮರಣಕ್ಕಾಗಿ ನನ್ನ ದುಃಖ ಸೂಚನೆಯನ್ನು ಸಂಬಂಧಪಟ್ಟವರಿಗೆ ತಿಳಿಸಿರಿ. ಕೊನೆಗೆ ನಮ್ಮೊಳಗೆಷ್ಟೇ ಅಭಿಪ್ರಾಯ ಭೇದಗಳುಂಟಾಗಿರಲಿ, ಆ ಮೊದಲು ನಮ್ಮೊಳಗಿದ್ದ ಪರಿಶುದ್ಧ ಮೈತ್ರಿಯನ್ನು ನಾನೆಂದಿಗೂ ಮರೆಯಲಾರೆ. ಹಿಂದೂ-ಮುಸ್ಲಿಮು ಐಕ್ಯದ ವಿಷಯದಲ್ಲಿ ಮೌಲಾನರು ನನ್ನನ್ನು ಸದಾಕಾಲ ತನ್ನ ಜೇಬಿನೊಳಗಿಟ್ಟು ಕೊಂಡಿದ್ದರು. ಆ ಧ್ಯೇಯವು ಅವರ ಜೀವಿತಕಾಲದಲ್ಲಿ ಕೈಗೂಡದಾಯಿತು. ಅವರ ಮರಣವು ಎರಡೂ ಸಮಾಜಗಳನ್ನು ಆ ಗುರಿಯ ಕಡೆಗೆ ಕೊಂಡುಹೋಗುವದೆಂದು ಆಶಿಸೋಣ” ಎಂದು ಮಹಾತ್ಮಾ ಗಾಂಧಿಯವರು ಡಾ| ಝುಕೀರ್ ಹುಸೇನರಿಗೆ ಬರೆದಿರುವರು.

---

(೧೯ನೇ ಪುಟದಿಂದ)

ಶ್ರೀ. ಕೆ ಅಚ್ಯುತ ಮಾಸ್ತರ್, ಟಿ. ಎಸ್. ಎಸ್. ಕಿನ್ನಿಗೋಳಿ.

ಅಯ್ಯಾ ಪತ್ರಿಕಾಕರ್ತರೇ ಈಗಿನ ಮುಗ್ಗಟ್ಟಿನ ಪ್ರಸಂಗದಲ್ಲಿ ಅಧ್ಯಾಪಕ ವೃತ್ತಿಯಿಂದಿರುವವರ ನಮ್ಮ ಜೀವನವು ಬಲು ಕಷ್ಟದಾಯಕವಾಗಿದೆ. ಸಿಕ್ಕುವ ಬರೆ ಅಲ್ಪ ತಲಬಿನಿಂದ ದಿನ ಕಳೆಯಲು ಸಾಧ್ಯವಿಲ್ಲ. ಈ ಉದ್ಯೋಗವನ್ನು ಬಿಡುವನೇ? ಬೇರೆ ಸದುದ್ಯೋಗ ದೊರೆಯುವಂತಿಲ್ಲ. ಸಿಕ್ಕಿದುದರಲ್ಲೇ ತೃಪ್ತಿಪಡುವ ಗುಣವನ್ನಿಟ್ಟುಕೊಂಡರೆ ಜೀವನ ಸಾಗುವುದಿಲ್ಲ. ಒಂದು ಸದುತ್ತರವಿತ್ತು ಮನದ ಬೇಸರವನ್ನು ನೀಗಿಸಲಾರಿರಾ!

ನಿಮ್ಮ ಕಷ್ಟವನ್ನು ಕೇಳಿ ‘ಅಧ್ಯಾಪಕರ ಸಂಬಳ ಹೆಚ್ಚಿಸುವುದಗತ್ಯ’ ಎಂದು ಕಾಂಗ್ರೆಸ್ ಸರಕಾರಕ್ಕೆ ಶಿಫಾರಸುಮಾಡೋಣ ಅನ್ನಿಸುತ್ತದೆ. ಆದರೆ ವಿದ್ಯಾಮಂತ್ರಿಗಳ ನಿಮಗಿಂತಲೂ ಸೊಗಸಾಗಿ ತಮ್ಮ ಕಷ್ಟಗಳನ್ನು ಬಣ್ಣಿಸುತ್ತಿದ್ದಾರೆ. ಬೇರೆ ಸದುದ್ಯೋಗ ದೊರೆಯುವಂತಿಲ್ಲವೆಂದು ನಿಮಗೇ ಗೊತ್ತಿದೆ. ಹೀಗೆ ಮೇಲಿನವುಗಳೆಲ್ಲಾ ಸುಧಾರಿಸಲಾಗದ ವಿಷಯಗಳೆಂದಾಯಿತು. ‘ಜೀವನ ಸಾಗುವುದಿಲ್ಲ’ ವೆಂಬ ಒಂದು ಕಷ್ಟವುಳಿಯಿತು. ನಿಮ್ಮ ಸಂಕಷ್ಟದ ಇತರ ಭಾಗಗಳೆಲ್ಲಾ ಅನ್ಯರ ಕೈಯೊಳಗಿನವಾದರೆ ‘ಜೀವನ ಸಾಗಿಸುವ’ ಅಂಶವು ಸ್ವತಃ ನಿಮ್ಮ ಕೈಯ್ಯಲ್ಲಿದೆ. ಸದ್ಯದ ಪರಿಸ್ಥಿತಿಗನುಸಾರವಾಗಿ ಜೀವನ ಸಾಗಿಸಲು ಕಲಿತರಾಯಿತು.

---


**ಪ್ರತಿಯೊಂದು ಸಂಚಿಕೆಯಲ್ಲೂ ಹಲವು ಬಗೆಯ ಅಪೂರ್ವ ವೈಶಿಷ್ಟ್ಯಗಳು!**

**ಪ್ರತಿಯೊಂದು ಸಂಚಿಕೆಯ ಒಂದೊಂದು ಪುಟದಲ್ಲಿನ ವಿಷಯವೂ ನಿಮ್ಮ ವಿಚಾರಶಕ್ತಿಯ ಬೆಳವಣಿಗೆಗೆ ಯೋಗ್ಯ ಅಭಿಧಾನವಾಗಿದೆ! ಹಾಗಿದ್ದುದರಿಂದಲೇ “ವರ್ತಕ ಧುರೀಣ”ನು**

**ವಾ. ಚಂದಾ ೧—೮—೦.] ಕನ್ನಡಿಗರ ನಲ್ಮೆಯವನಾಗಿದ್ದಾನೆ. [ಮಾದರಿ ಸಂಚಿಕೆ ೦—೨—೦.**

**ಶ್ರೇಷ್ಠ ವರ್ಗದ ಮಾಸ ಪತ್ರಿಕೆ.** 

# ವರ್ತಕ ಧುರೀಣ

**ಹಿಂದಿಗಿಂತ ದೊಡ್ಡ ಆಕಾರ. ಹೆಚ್ಚು ಪುಟಗಳು**

**ಈ ಬಾರಿಯ ಸಂಚಿಕೆಯಲ್ಲಿ:-**

ಶ್ರೀ. ವೆಂಕಟರಾಜರವರ ಲಘು ಕಥೆ ‘ತಿರುಪೆಯವಳು’.

,, ‘ರಮಾಕಾಂತ’ರವರ ವ್ಯಂಗಲೇಖನ ‘ಸಗ್ಗದಲ್ಲಿ ಒಗ್ಗದ ಪರಿಷತ್ತು’

,, ಮ. ವಿ. ಹೆಗ್ಡೆಯವರ ಕ್ರಾಂತಿ ಚಿತ್ರ “ಕಲ್ಲಿದ್ದಲ ಕೆಂಡ”

**ಬ್ರಹ್ಮಚಾರಿ ಹಿಟ್ಲರನಿಂದ ಅಧೋಗತಿಗಿಳಿದ ತರುಣಿಯರು, ಮರುಭೂಮಿಯಲ್ಲಿ ಮುರಿದು ಬಿದ್ದ ವಿಮಾನ, ಮಿ. ಜಮದಗ್ನಿಯವರ ಕಲ್ಕತ್ತಾ ಪ್ರವಾಸ ವರ್ಣನ, ಜಾದುವಿದ್ಯದ ಅಪೂರ್ವ ರಹಸ್ಯಗಳು, ಸ್ಕೋಟ್ಲೆಂಡ್ ಯಾರ್ಡ್ ಅಲ್ಲದೇ ಇನ್ನಿತರ ಇಂತಹವೇ ಆದ ಹಲವು ವಿಷಯಗಳಿವೆ.**

ಬಿಡಿಸಂಚಿಕೆಗಳನ್ನು ನಿಮ್ಮ ಏಜಂಟರಿಂದ ಪಡೆದುಕೊಳ್ಳಿ ಇಲ್ಲವೇ ೦-೨-೦ ಆಣೆಯ ಅಂಚೆಯ ಚೀಟನ್ನಿಟ್ಟು ನಮಗೆ ಬರಿಯಿರಿ.

ಏಜಂಟರಾಗುವವರು ಶರ್ತಗಳನ್ನು ಅಪೇಕ್ಷಿಸಿದಲ್ಲಿ ಕಳುಹಿಸಿಕೊಡಲಾಗುವುದು.

**ವಿಳಾಸ: ಪ್ರೊಪ್ರೈಟರ್, ‘ವರ್ತಕ ಧುರೀಣ’ ಪೋಸ್ಟ್-ಉಡುಪಿ, ದಕ್ಷಿಣ ಭಾರತ.**

# PRESERVE YOUR LIFE INSURANCE:

## FOR IT BEGINS WHERE YOU GIVE UP

When you marry you take a contract on your hands to support and bring up a family. But, who knows you may have to give up that right in the midst of it. So many have had to do.

It is here that the Life Policy Comes in. It is the bond that helps you to fulfil the contract and keep your honour and your family in tact.

**It Begins where you give up:** It goes ahead and supports the Family, comes through the contract honourably and releases you. It also stands behind and protects your business obligations and your good name.

THIS IS LIFE INSURANCE AND IT IS THE ONLY BOND THAT WILL DO IT

**HAVE THAT POLICY BOND**

IN

# THE LAKSHMI INSURANCE COMPANY LIMITED.

**Head Office: LAHORE.**

For Agency Particulars Please apply to:

**THE BRANCH MANAGER.**
334, THAMBUCHETTY ST.
G. T. MADRAS.

OR

**A. B. KRISHNA RAJ,**
ORGANISER
Ramakrishna Bldgs.,
UDIPI.

# 'ದೇವದಾಸಿ'ಯರಿರುವದು ದೇವದಾಸರಿಗಾಗಿ!



ದೇವಸ್ಥಾನಗಳಲ್ಲಿ ಎಳೇ ಹುಡು
ಗಿಯರನ್ನು ದೇವದಾಸಿಯರಾಗಿ
ಬಿಡುವ ಕ್ರಮವು ಪ್ರಾಯಶಃ
ಹಿಂದೂ ದೇವಾಲಯಗಳಲ್ಲಿ ಮಾತ್ರ
ವಿದೆ. ನಮ್ಮ ಹೆಚ್ಚಿನ ದೇವಾಲಯ
ಗಳ ಐಶ್ವರ್ಯ, ಮತ್ತು ವೈಭವ
ಗಳನ್ನು ಕಂಡಲ್ಲಿ ಹಿಂದುಸ್ಥಾನದಲ್ಲಿ
ಬಡತನವಿದೆ ಎಂಬ ಮಾತನ್ನು ಪರ
ಕೀಯರು ನಂಬಲಾರರು. ಹಿಂದು
ಸ್ಥಾನದ ದೊಡ್ಡ ಜಮೀನ್ದಾರನಾ
ರೆಂದು ಶೋಧನಡೆಸಿದಲ್ಲಿ ಯಾರಾದ
ರೊಬ್ಬ ಮಹಾಲಿಂಗೇಶ್ವರನೋ ವೆಂ
ಕಟರಮಣನೋ-ಆಗಿರುವನೆಂಬುದ
ರಲ್ಲಿ ಸಂಶಯವಿಲ್ಲ. ಎಷ್ಟೋ
ಕೋರ್ಜಿ ಆಕ್ಕಿ ಹುಟ್ಟುವಳಿಯಿರುವ
ದೇವಸ್ಥಾನಗಳಿವೆ. ಲಕ್ಷಾಂತರ
ರೂಪಾಯಿ ಬೆಲೆಬಾಳುವ ನಗನಾಣ್ಯ
ಗಳು ಎಷ್ಟೋ ದೇವಸ್ಥಾನಗಳಲ್ಲಿವೆ.
ಹುಟ್ಟುವಳಿಯೂ ಇತರ ಉತ್ಪತ್ತಿ
ಯಿರದ-ಬೆಲೆಬಾಳುವ ಚಿನ್ನಾಭರಣ
ಗಳಿಲ್ಲದ, ದೇವರೇ ಇಲ್ಲ, ದೇವ
ಸ್ಥಾನಗಳೇ ಇಲ್ಲವೆಂದು ಹೇಳ
ಬಹುದು

**ದೇವಸ್ಥಾನಗಳ ವಿಲಾಸಗಳು**

ಈ ಸಂಪತ್ತುಗಳು ವಿವಿಧ ರೀತಿ
ಯಿಂದ ವ್ಯಯವಾಗುತ್ತವೆ. ಅವು
ಗಳ ಬಹುಭಾಗವು ಅನಾವ್ಯಯ
ವೆಂದು ಹೇಳಬಹುದು. ಆಡಳಿತೆ
ದಾರರ, ಪೂಜಾರಿಗಳ ಸ್ವಾರ್ಥ
ಸಾಧನೆಯಂತೂ ಆಗಲೇ ಬೇಕು;
ಅವುಗಳನ್ನು ಬಿಟ್ಟರೂ ಖರ್ಚಿನ
ಇತರ ವ್ಯವಸ್ಥಿತ ಕ್ರಮಗಳಿವೆ.
ಕೆಲವು ದೊಡ್ಡ ದೇವಸ್ಥಾನಗಳು
ಆನೆಗಳನ್ನು ಸಾಕುತ್ತವೆ. ಇತರ
ಸಾಮಾನ್ಯ ದೇವಸ್ಥಾನದ ಸಂಪ
ತ್ತನ್ನು ತಿನ್ನುವ ಮನುಷ್ಯ ಪ್ರಾಣಿ
ಗಳೂ ಮೃಗಗಳೂ ಎಷ್ಟೋ ಇರು
ತ್ತವೆ. ಇವುಗಳನ್ನಿಟ್ಟುಕೊಳ್ಳುವ
ಕ್ರಮವು ಆದಿಯಲ್ಲಿ ಉಚ್ಚ ಧ್ಯೇಯ
ದಿಂದಲೇ ಬಂದಿರಬೇಕು. ಆನೆಗಳು
ಊರಿನ ಭಾರವೆಳೆಯುವದಕ್ಕಾಗಿ,
ಹೋರಿಗಳು ಬೀಜಕ್ಕಾಗಿ ಇಟ್ಟು
ಕೊಂಡದಾಗಿರಬೇಕು. ಆದರೆ ಈಗ
ಎಲ್ಲವೂ ವಿಪರೀತವಾಗಿದೆ. ಈ ಪದ್ಧ
ತಿಗಳಲ್ಲಿ ಬಹು ಶೋಚನೀಯವಾದು
ದೆಂದರೆ ದೇವದಾಸೀ ಪದ್ಧತಿ.

**ದೇವರಿಗೊಪ್ಪಿಸುವ ಹುಡುಗಿಯರು!**

ಪೂರ್ವಕಾಲದಿಂದ ದೇವದಾಸಿಯ
ರಿರುತ್ತಾ ಬಂದ ದೇವಾಲಯಗಳಲ್ಲಿ
ದೇವದಾಸಿಯರನ್ನು ಇಡಲೇಬೇಕಾ
ಗುತ್ತದೆ. ಇದಕ್ಕೆ ಲೋಪಬಂದು ದೇ
ವರು ಸಿಟ್ಟುಗೊಂಡು ಊರಲ್ಲೆಲ್ಲಾ
ಅಂಟು ರೋಗಗಳನ್ನು ತಂದು
ಹಾಕಿದ ನಿದರ್ಶನಗಳೆಷ್ಟೋ ಇವೆ.
ದೇವದಾಸೀ ಮನೆತನದಲ್ಲಿ ಬೆಳೆದ
ಹುಡುಗಿಯರಿಲ್ಲದ ದೆಸೆಯಿಂದ
ಒಂದು ದೇವಸ್ಥಾನದ ಉತ್ಸವ ಕಾಲ
ದಲ್ಲಿ ನರ್ತನ ಸೇವೆಗೆ ಸೊನ್ನೆ ಬಿತ್ತು
ಈ ಕೊರತೆಯಿಂದಾಗಿ ದೇವರಿಷ್ಟು
ನಿರಾಶೆಗೊಂಡನೆಂದರೆ ದರ್ಶನ ಪಾತ್ರಿ
ಯು ದೇವಮೂರ್ತಿಯನ್ನು ರಥಕ್ಕೇ
ರಿಸುವ ಹೊತ್ತಿನಲ್ಲೇ ಮೂರ್ತಿಯು
ತಲೆಯಿಂದ ಕವಚಿಬಿತ್ತು. ದರ್ಶನದ
ಸಮಯ ದೇವರ ನುಡಿಯೂ ಹಾಗೆ
ಯೇ ಆಯಿತು. ಕೊನೆಗೆ ಆಡಳಿತ
ದಾರರು ಆರು ತಿಂಗಳ ಮಟ್ಟಿಗೆ
ಆಕ್ಷಿಂಗಾಗಿ ಒಬ್ಬಳು ಸೂಳೆಯನ್ನು
ತಂದು ನಿಲ್ಲಿಸಿಕೊಳ್ಳಬೇಕಾಯಿತು.

ಈ ದೇವದಾಸಿಯರನ್ನು ಬಿಡುವ
ಕ್ರಮವು ನರ್ತನ ಕಲಾಪ್ರದರ್ಶನ
ಕ್ಕಾಗಿ ಅಂಗೀಕರಿಸಲ್ಪಟ್ಟಿರಬೇಕು.
ಈಗಲೂ ಕೂಡ ದೇವದಾಸಿಯರಿ
ರುವ ದೇವಸ್ಥಾನಗಳ ಉತ್ಸವಕಾಲ
ದಲ್ಲಿ ಅಥವಾ ವಿಶೇಷ ದಿನಗಳಲ್ಲಿ,
ಅವರೆಲ್ಲಿದ್ದರೂ, ಆ ದಿನ ಲಕ್ಷಾಧಿ
ಪತಿ ತಮ್ಮಲ್ಲಿಗೆ ಬರುವನೆಂದಿದ್ದರೂ,
ತಪ್ಪದೆ ಬಂದು ನರ್ತನ ಮಾಡ
ಬೇಕು. ಅದಕ್ಕಾಗಿ ದೇವಸ್ಥಾನ
ದಿಂದ ಅವರಿಗೆ ವಾರ್ಷಿಕ ಉಂಬ
ಳಿಯೇನೋ ದೊರೆಯುತ್ತದೆ. ಆದ
ರದು ಅವರ ಫೇಶನಿನ ಒಂದು
ತಿಂಗಳ ಖರ್ಚಿಗೆ ಸಾಲದು.
ಅತ್ಯಂತ ಕರುಣಾಜನಕ ವಿಷಯ
ವೆಂದರೆ ಕುಲೀನ ಮಹಿಳೆಯರನ್ನೂ

ದೇವದಾಸೀ ನರಕಕ್ಕೆ ದೂಡುವ ಕೆಲವು ವಿಲಕ್ಷಣ ಘಟನೆಗಳು. ಇಲ್ಲಿ ಕೊಟ್ಟಿರುವ ಒಂದು ಸತ್ಯ ಕಥೆಯಿಂದ ಅದೆಷ್ಟು ಶೋಚನೀಯವಾದುದೆಂಬುದನ್ನು ತಿಳಿಯಬಹುದು.



**ಹುಡುಗಿಯ ಮೇಲೆ ದೇವರ ಕಾಮದೃಷ್ಟಿ.**

ಕೆಲವು ವರುಷಗಳ ಹಿಂದೆ ನಡೆದ ಸಂಗತಿಯಿದು. ದಕ್ಷಿಣ ಕನ್ನಡದ ಪ್ರಸಿದ್ಧ ದೇವಸ್ಥಾನ ಒಂದಕ್ಕೆ ದೂರದ ಊರಿನ ಸ್ತ್ರೀ ಪುರುಷರು ಏಳೆಂಟು ಮಂದಿ ಯಾತ್ರಾರ್ಥಿಗಳಾಗಿ ಬಂದಿದ್ದರು. ಅವರಲ್ಲಿ ಸುಮಾರು ಹದಿನಾಲ್ಕು ವರುಷ ಪ್ರಾಯದ ಹುಡುಗಿಯೊಬ್ಬಳಿದ್ದಳು. ಎಲ್ಲರೂ ಒಟ್ಟಿಗೆ ಹಣ್ಣುಕಾಯಿ ಹರಿವಾಣ ಹಿಡಿದುಕೊಂಡು ದೇವಸ್ಥಾನಕ್ಕೆರಡು ಸುತ್ತು ತೆಗೆಯುವ ಹೊತ್ತಿಗೆ ಆ ಹುಡುಗಿ ಧ್ವಜಸ್ತಂಭವನ್ನು ಅಪ್ಪಿ ಹಿಡಿದು ನಿಂತು ಗಳಗಳನೆ ಅಳಲಾರಂಭಿಸಿದಳು. ಹುಡುಗಿ ಮೈನೆರೆದಳೆಂದು ತಿಳಿಯಿತು. ಅವಳೊಟ್ಟಿಗೆ ಬಂದಿದ್ದ ಹೆಂಗಸರೂ ಗಂಡಸರೂ ಸುತ್ತಗೂಡಿ ತಲೆ ಬಡಕೊಂಡು ಅತ್ತರು. ಆದರೆ ಮಾಡುವದೇನು? ಅವಳನ್ನಲ್ಲಿಯೇ ದೇವರಿಗೆ ಬಿಟ್ಟು ಅವರು ಊರಿಗೆ ಹೋಗಬೇಕಾಯಿತು.

ಈಗಲೂ ಕೂಡ ಮೈನೆರೆಯಲು ತಯಾರಾಗಿದ್ದ ಹುಡುಗಿಯರನ್ನು ದೇವಸ್ಥಾನಗಳಿಗೆ ಕರೆದುಕೊಂಡು ಹೋಗಲು ಎಲ್ಲರೂ ಅಂಜುತ್ತಾರೆ. ಅಲ್ಲಿ ಮೈನೆರೆಯುವುದೆಂದರೆ ದೇವರಿಗೆ ಅವಳಲ್ಲಿ ಮನಸಾಯಿತೆಂದೇ ಅರ್ಥ. ಹಾಗೆ ಮೈನೆರೆಯುವವರೆಲ್ಲರೂ ಧ್ವಜಸ್ತಂಭವನ್ನು ಅಪ್ಪಿಕೊಂಡು ಅಳುತ್ತಾರಂತೆ. ಈ ವಿಧಿಯಿಂದಾಗಿ ದೇವದಾಸೀಕ್ರಮವಾರಂಭವಾಯಿತೋ, ದೇವದಾಸೀ ಪದ್ಧತಿಗಾಗಿ ಈ ವಿಧಿಯನ್ನುಂಟುಮಾಡಿದರೋ ಗೊತ್ತಾಗುವುದಿಲ್ಲ.

**ವೇಶ್ಯಾ ಜೀವನ**

ಇಂತಹ ದೇವಸ್ಥಾನಗಳಲ್ಲಹೆಚ್ಚಿನವುಗಳ ಸುತ್ತೆಂದರೆ ವೇಶ್ಯೆಯರ ಕೇರಿಯೇ ಆಗಿರುತ್ತದೆ. ಅದು ವಿಟಜನರ ಯಾತ್ರಾಸ್ಥಳವೂ ಆಗಿರುತ್ತದೆ. ಅವರು ಜಾತಿಯಲ್ಲಿ ವೇಶ್ಯೆಯರೇ ಆಗಿದ್ದು (ಹೊಸದಾಗಿ ಸೇರಿದವರಿಗೆ ಜಾತಿ ಹೋಗುತ್ತದೆ) ಅವರ ವ್ಯಭಿಚಾರೀ ಜೀವನಕ್ಕೆ ಆತಂಕವಾಗಲೀ ಇರುವುದಿಲ್ಲ. ವಿಶೇಷವಾಗಿ ದೇವಸ್ಥಾನಗಳ ಯಜಮಾನರು ಅಥವಾ ಅರ್ಚಕರು ಇವರನ್ನು ತಮ್ಮ ಸೂಳೆಯರನ್ನಾಗಿ ಇಟ್ಟುಕೊಂಡಿರುತ್ತಾರೆ. ಬೇಕಾದಾಗ ಹಣವಿದ್ದ ಯಾರಿಗಾದರೂ ಅವಗ ಆಮಂತ್ರಣವಿದ್ದೇ ಇದೆ.

ವಿದ್ವಾಂಸರಾಗಿರುವವರಲ್ಲಿ 'ಆಸ್ಥಾನ ವಿದ್ವಾನ್" ಆಗಿರುವವರ ಘನತೆಯು ಮಿಗಿಲಾದುದು. 'ದೇವದಾಸಿ'ಆಗಿರುವದೆಂದರೆ ವೇಶ್ಯೆಯರಿಗೊಂದು ಮೇಲಿನ ಸ್ಥಾನ ದೊರೆತ ಹಾಗೆ. ಆದ್ದರಿಂದ ಅವರೀ ಹುದ್ದೆಯ ಕುರಿತು ಬಹಳ ಜಾಗ್ರತೆ ತೆಗೆದುಕೊಳ್ಳುತ್ತಾರೆ. ದೇವಸ್ಥಾನನ ನರ್ತನದ ದಿನಗಳಲ್ಲಿ, ಮೊಕ್ತೇಸರರ ಅಥವಾ ಪೂಜಾರಿಗಳ ಆಗಮನದ ಸಮಯದಲ್ಲಿ ಅವರು ಎಲ್ಲವನ್ನೂ-ಎಲ್ಲರನ್ನೂ ಬಿಟ್ಟು ತಯಾರಿರುತ್ತಾರೆ. ಉತ್ಸವ ಮೂರ್ತಿಯ ಇದಿರು ವೈಯಾರದಿಂದ ಗಾಯನ ಮಾಡುತ್ತಾ ಗೆಜ್ಜೆ ಕಟ್ಟಿ ಅವರು ಕುಣಿಯಬೇಕು. ಆ ದಿನದ ಉತ್ಸವಕ್ಕೆ ಎಲ್ಲಿಯೂ ಜನಸಂದಣಿ ವಿಶೇಷ. ನರ್ತಕಿಯರ ಹಾವಭಾವ

**ಗಳೆಲ್ಲಾ** ಕೂಡಿದ ಜನರನ್ನು ಆಕರ್ಷಿಸುವ ರೀತಿಯಲ್ಲಿರುತ್ತವೆ. ಹೊರತು ಭಕ್ತಿಪ್ರದರ್ಶನವೇನೂ ಇರುವದಿಲ್ಲ.

**ದೇವದಾಸರಿಬ್ಬರಾದರೆ ದೇವದಾಸಿಯೊಬ್ಬಳು!**

ನಮ್ಮ ಜಿಲ್ಲೆಯ ದೇವಸ್ಥಾನವೊಂದರಲ್ಲಿ ನಡೆದ ಸಂಗತಿಯಿದು. ಅಲ್ಲಿಯ ದೇವದಾಸಿಯನ್ನು ಮೊಕ್ತೇಸರನಿಟ್ಟು ಕೊಂಡಿದ್ದಾನೆಂಬುದು ಜನಜನಿತವಾಗಿತ್ತು. ಬಹುತೇಕವಾಗಿ ಎಲ್ಲಾ ವೇಶ್ಯೆಯರೂ ಪ್ರಾತಃಕಾಲ ಸ್ನಾನಮಾಡುವ ಕ್ರಮವಿದೆ. ಈ ದೇವದಾಸಿಯು ನಿತ್ಯವೂ ಬೆಳಿಗ್ಗೆ ಮಿಂದು ಒದ್ದೆ ಬಟ್ಟೆಯಲ್ಲಿಯೇ ದೇವರಿದಿರು ಕೈ ಜೋಡಿಸಿ ನಿಂತು ಅರ್ಚಕರಿಂದ ಪ್ರಸಾದ ಪಡಕೊಂಡು ಹೋಗುವ ಕ್ರಮವಿತ್ತು. 'ಇದು ಮೊಕ್ತೇಸರರ ವಸ್ತು' ಎಂದು ಅರ್ಚಕರಿಗೂ ತಿಳಿದಿತ್ತು. ಆದರೆ ಪ್ರತಿದಿನ, ತೊಡೆ, ತೋಳು, ಎದೆಯ ವರೆಗಿನ ಸರ್ವಾಂಗವನ್ನೂ ನೋಡುತ್ತಾ ನೋಡುತ್ತಾ ಭಟ್ಟರ ಮಂತ್ರ ಬೇರೆಯಾಗಹತ್ತಿತು. ಆ ಹೊತ್ತಿನ ಒಳ್ಳೇ ಸೀರೆಯು ಅವಳ ದೇಹದಲ್ಲೊಂದು ಹೊಸ ಚರ್ಮ ಮಾಡಿದಂತಿತ್ತೇ ಹೊರತು ಅದರಲ್ಲಿ ಭಿನ್ನತೆಯೇನೂ ಇರಲಿಲ್ಲ. ಅರ್ಚಕರಾದರೇನು- ಎಷ್ಟು ದಿನ ತಡಕೊಂಡಾರು? ಒಂದು ದಿನ ಮಣ ಮಣ ಮಂತ್ರದೊಟ್ಟಿಗೆ ಕೆಲವು ಗುಣು ಗುಣು ಮಾತುಗಳೂ ಭಟ್ಟರ ಬಾಯಿಂದ ಬಂದವು. ಅವಳೂ ಸುಲಭದಲ್ಲಿ ಒಪ್ಪಿದಳು. ಭಟ್ಟರ ಕೈಯಿಂದ ಗಂಧ ಪಡೆಯುವುದಕ್ಕಾಗಿ ಸ್ನಾನ ಮಾಡಿ ಬಂದು ನಿಲ್ಲುತ್ತಾಳಂತೆ- ಅರ್ಚಕರು ಎದೆ ತೋಳುಗಳ ಗಂಧವನ್ನು ತಾಗಿಸಿಕೊಳ್ಳುವದನ್ನೇಕೆ ಬೇಡವೆನ್ನುವಳು? ಮೊಕ್ತೇಸರರು ಆ ದಿನ ಊರಲಿಲ್ಲವೆಂದು ಇವರಿಬ್ಬರೂ ಭಾವಿಸಿಕೊಂಡಿದ್ದರು. ಶನಿ ಶನಿಯೆಂದು ಅವನೂ ಆ ರಾತ್ರಿ ಬಂದುಬಿಟ್ಟ. ದೇವದಾಸಿಯ ಮನೆಗೆ ಹೋಗಿ ನೋಡುವಾಗ ಭಟ್ಟರು ದೇವೀ ಪೂಜೆ ಮಾಡುತ್ತಿದ್ದಾರೆ! ಹೀಗೆ ಎರಡು ಪೂಜೆ ಮಾಡಲಿಕ್ಕೆ ಹೋದ ಅರ್ಚಕರಿಗೆ ಮರುದಿನದಿಂದ ಒಂದು ಪೂಜೆಯೂ ಇಲ್ಲವೆಂದಾಯಿತು!

**ಯಜಮಾನನಿಗಾಗದ ವಸ್ತುವೇ?**

ಇನ್ನೊಂದು ಕಡೆಯಲ್ಲಿ ನಡೆದ ಒಂದು ಸಂಗತಿಯು ಮತ್ತಷ್ಟು ಶೋಚನೀಯವಿದೆ. ಒಬ್ಬ ದೇವದಾಸಿ ಸುಮಾರು ಇಪ್ಪತ್ತು ವರ್ಷದಿಂದ ದೇವರ ಸೇವೆಮಾಡಿಕೊಂಡಿದ್ದಳು. ಅವಳಿಗೊಬ್ಬಳು ಪುತ್ರಿ- ಹೆಚ್ಚೆಂದರೆ ಹದಿನಾಲ್ಕು ವರ್ಷಗಳಾಗಿರಬಹುದು. ಇನ್ನೂ ಅರಳದ ಹೂ. ಮುಂದಿನ ಸೇವೆಗಾಗಿ ಅವಳಿಗೆ ಗಾಯನ, ನರ್ತನ ಎಲ್ಲವನ್ನೂ ತಾಯಿ ಕಲಿಸಿದ್ದಳು. ದೇವಸ್ಥಾನದ ಆಡಳಿತದಾರನಿಗೆ ಪ್ರಾಯ ಬಂದ ಒಬ್ಬ ಮಗನಿದ್ದ. ತಿಂದು ಕೊಬ್ಬಿದ ಹುಡುಗ. ಆ ಪ್ರಾಯದಲ್ಲಿ ಕಲಿಯಲು ಮನಸಾಗಿ ಅವನು ಈ ತಾಯಿಯ ಬಳಿಗೇ ಬರುತ್ತಿದ್ದ-ಅವಳು ಕಲಿಸುತ್ತಲೂ ಇದ್ದಳು. ಮುಂದಕ್ಕೆ ಈ ಹುಡುಗ ದೇವಸ್ಥಾನದ ಯಜಮಾನನಾಗತಕ್ಕವ-ತನ್ನ ಮಗಳು ಅದೇ ದೇವಸ್ಥಾನದ ದೇವದಾಸಿಯಾಗತಕ್ಕವಳು. ಅವರನ್ನು ಈಗಾಗಲೇ ಒಂದುಗೂಡಿಸಿಬಿಡುವ ಮನಸ್ಸು ತಾಯಿಗೆ. ಹೀಗಾಗಿ ಇಬ್ಬರನ್ನೂ ಒಟ್ಟಿಗೆ ಮನಸೇಚ್ಛೆ ಆಡಲು ಬಿಡುತ್ತಿದ್ದಳು. ಅವ ಮನೆಗೆ ಬಂದಾಗಲೆಲ್ಲಾ ಇಬ್ಬರನ್ನೂ ಒಟ್ಟುಮಾಡಿ ವಿನೋದ ಮಾಡಿಸುತ್ತಿದ್ದಳು. ಒಂದು ದಿನ ಹುಡುಗನ ಒತ್ತಾಯವೋ-ತಾಯಿಯದೇ ಬಲಾತ್ಕಾರವೋ-ಅಂತೂ ಹುಡುಗಿಯ ಕೋಣೆಯೊಳಗೆ ಮಲಗಿಸಿ ಹುಡುಗನನ್ನೂ ಒಳಗೆ ಕಳುಹಿಸಿ ಬೀಗಹಾಕಿಬಿಟ್ಟಳು. ಸ್ವಲ್ಪ ಸಮಯದಲ್ಲಿ 'ಅಯ್ಯೊ' ಎಂದು ಹುಡುಗಿಯು ಕೂಗಿನಿಂದ ನೆರೆಮನೆಯವರೂ ಅಲ್ಲಿಗೆ ಓಡಿ ಬರುವಂತಾಯಿತು. ಬಾಗಿಲು ತೆರೆದು ನೋಡುವಾಗ ಹುಡುಗಿಗೆ ಸ್ಮೃತಿಯಿಲ್ಲ; ವಸ್ತ್ರದಲ್ಲೆಲ್ಲಾ ರಕ್ತದ ಕಲೆಗಳು! ಹುಡುಗಿಯೊಂದು ಹುಡುಗಿರೂಪಕ್ಕೆ ಬರಬೇಕಾದರೆ ಮೂರು ತಿಂಗಳು ತಾಗಿತು! ಇಂತಹ ಎಷ್ಟೋ ಅಕೃತ್ಯಗಳು ದೇವರ ಹೆಸರಲ್ಲಿ ನಡೆಯುತ್ತಿವೆ. ಈಗೀಗ ಮದುವೆಗಳಲ್ಲಿ ವೇಶ್ಯಾನರ್ತನಗಳು ಕಡಿಮೆಯಾಗುತ್ತಾ ಬಂದಂತೆ ಈ ದೇವದಾಸೀ ಕ್ರಮವೂ ಶಿಥಿಲವಾಗುತ್ತಾ ಬರುತ್ತಿದೆಯೆಂಬುದೊಂದು ಸಂತೋಷದ ಸಂಗತಿ ಇಂತಹ ಅತ್ಯಾಚಾರಗಳ ಮೂಲೋತ್ಪಾಟನವಾದ ದಿನವೇ ಸಮಾಜದ ಸುದಿನವಲ್ಲವೆ?

---

For beautiful Printing - **Manipal Power Press.**

# ಅಂತರಂಗದ ಎರಡನೆಯ ಸ್ಪರ್ಧೆ.

ನಾಲ್ಕಾಣೆಗಳಿಗೆ

**25/-**

ರೂಪಾಯಿಗಳನ್ನು

ಪಡೆಯಿರಿ!

## ಪ್ರಥಮ ಬಹುಮಾನ:- ರೂಪಾಯಿ ೨೫. [ನಗದಿ.]

ದ್ವಿತೀಯ ಬಹುಮಾನ ರೂಪಾಯಿ ೧೫. (ಪುಸ್ತಕಗಳು.)
ತೃತೀಯ ಬಹುಮಾನ ರೂಪಾಯಿ ೧೦. (ಪುಸ್ತಕಗಳು.)

- ✓ ಈ ಸ್ಪರ್ಧೆಯ ಉತ್ತರವು ಅಂತರಂಗದ ಸಂಪಾದಕರ ಬಳಿ ಮೊಹರು ಮಾಡಿಡಲಾಗಿದೆ.
- ✓ ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲುವ ಉತ್ತರಕ್ಕೆ ಪ್ರಥಮ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಎರಡು ಮತ್ತು ಮೂರನೆ ಬಹುಮಾನಗಳೂ ಗ್ರಂಥರೂಪದಲ್ಲಿ ಕೊಡಲ್ಪಡುವುವು. ಬಹುಮಾನ ಪುಸ್ತಕಗಳ ಪಟ್ಟಿಯನ್ನು ಉತ್ತರ ಪ್ರಕಟಿಸುವ ಸಂಚಿಕೆಯಲ್ಲಿಯೇ ಕೊಡಲಾಗುವದು. ಅದರಲ್ಲಿ ಆರಿಸಿ ಯಾವುದನ್ನಾದರೂ ಪಡಕೊಳ್ಳಬಹುದು.
- ✓ ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಸರಿಸಮಾನವಾಗಿ ಹಂಚಲ್ಪಡುವುವು.
- ✓ ಬಹುಮಾನವನ್ನು ಹಂಚುವ ವಿಚಾರ ಸ್ಪರ್ಧೆಯ ಮೆನೇಜರರಿಗೆ ಸೇರಿದೆ. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ.

- **ಪ್ರತಿ ಉತ್ತರಕ್ಕೂ ಪ್ರವೇಶಧನ ನಾಲ್ಕಾಣೆ.**
- ಒಬ್ಬನು ಎಷ್ಟು ಉತ್ತರಗಳನ್ನು ಕಳುಹಿಸ ಬಹುದು. (ಒಂದು ರೂಪಾಯಿಗೆ ಐದು ಉತ್ತರಗಳನ್ನು ಕಳುಹಿಸಬಹುದಾಗಿದೆ.) ಗೆಳೆಯರ ತಂಡದ ಸದಸ್ಯರು ಒಂದು ರೂಪಾಯಿಗೆ ಎಂಟು ಉತ್ತರಗಳನ್ನು ಕಳುಹಿಸಬಹುದು.
- ಪ್ರವೇಶ ಧನವನ್ನು ಪೋಸ್ಟಲ್ ಸ್ಟಾಂಪು, ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿ ಆರ್ಡರ್ ಮೂಲಕ ರವಾನಿಸಬಹುದು.
- ಉತ್ತರವನ್ನು ಬರೆಯುವವರು ಜನವರಿ ೮ರೊಳಗೆ ಬರೆದು ಕಳುಹಿಸಬೇಕು. ನಂತರ ಈ ಸ್ಪರ್ಧೆಗಾಗಿ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ.
- ಸರಿಯಾದ ಉತ್ತರವನ್ನು ಜನವರಿ ೧೫ರ "ಅಂತರಂಗ"ದಲ್ಲಿ ಪ್ರಕಟಿಸಲಾಗುತ್ತದೆ.

**ಈ ಸ್ಪರ್ಧೆಯ ಉತ್ತರಗಳು ಅಂತರಂಗದ ಕೂಪನಿನಲ್ಲಿಯೇ ಬರೆಯಲ್ಪಡಬೇಕು.**
**ಈ ಕೂಪನುಗಳು ದಶಂಬರ ತಿಂಗಳ ಸಂಚಿಕೆಗಳಲ್ಲಿ ಪ್ರಕಟಿಸಲ್ಪಡುತ್ತವೆ.**
**ಉತ್ತರ ಕೊಡುವವರು ತಮ್ಮ ಪೂರ್ಣ ವಿಳಾಸವನ್ನು ಬರೆಯತಕ್ಕದ್ದು.**

**ಮೆನೇಜರ್, ಅಂತರಂಗ ಸ್ಪರ್ಧೆ, ಉಡುಪಿ.**

Printed and published by P. Venkataramanacharya for and on behalf of SUPPLY AGENCY LTD.,
at Manipal Power Press, Udipi.

| | | | | | | |
|---|---|---|---|---|---|---|
| ೧ | ೨ | ೩ | ■ | ೪ | ೫ | ೬ |
| ೭ | ■ | ■ | ೮ | ■ | ■ | ೯ |
| ೧೦ | ■ | ೧೧ | ೧೨ | ೧೩ | ■ | ೧೪ |
| ■ | ೧೫ | ೧೬ | ■ | ೧೭ | ೧೮ | ■ |
| ೧೯ | ■ | ೨೦ | ೨೧ | ೨೨ | ■ | ೨೩ |
| ೨೪ | ■ | ■ | ೨೫ | ■ | ■ | ೨೬ |
| ೨೭ | ೨೮ | ೨೯ | ■ | ೩೦ | ೩೧ | ೩೨ |

**ಎಡದಿಂದ ಬಲಕ್ಕೆ:—**

೧ರಿಂದ ೩ ನೇತ್ರೆಯರನ್ನು ಪುರುಷರು ನೆಚ್ಚುತ್ತಾರೆ.
೪ ,, ೬ ಷಟ್ಪದಿಗಳಲ್ಲೊಂದು.
೧೧ ,, ೧೩ ಪಾಪಿಗಳು . . . ಕ್ಕೆ ಹೋಗುವರೆಂದು ಸಾಮಾನ್ಯ ಜನರ ನಂಬಿಗೆ.
೧೫ ,, ೧೬ ಯಶಸ್ಸು.
೧೭ ,, ೧೮ ಉಪ್ಪಿಗಿಂತ . . . . . ಇಲ್ಲ ತಾಯಿಗಿಂತ ಬಂಧುವಿಲ್ಲ.
೨೦ ,, ೨೨ ರೋಗಿಗಳು . . . . .ತ್ತಾರೆ.
೨೭ ,, ೨೯ ನಾಟಕದಲ್ಲಿ ಇದು ಮುಖ್ಯ.
೩೦ ,, ೩೨ ಜ್ಞಾನವುಂಟಾಗಬೇಕಾದರೆ ಬುದ್ಧಿ . . . ವಾಗಬೇಕು.

**ಮೇಲಿನಿಂದ ಕೆಳಗೆ: —**

೧ರಿಂದ೧೦ ಶರಧಿ.
೧೯ ,, ೨೭ ಕಾಯಿದೆ.
೮ ,, ೧೨ ಕೋಗಿಲೆಯು . . . ವುಇಂಪೆಂದು ಕವಿಗಳು ವರ್ಣಿಸುತ್ತಾರೆ.
೧೧ ,, ೨೦ ಕರ್ನಾಟಕವು . . . .ಮನೋಹರವಾದ ನೈಸರ್ಗಿಕ ದೃಶ್ಯಗಳಿಂದ ಕೂಡಿದೆ.
೨೧ ,, ೨೫ ಸೂರ್ಯ.
೧೩ ,, ೨೨ ಇದು ಹೊಟ್ಟೆಯೊಳಗಿದೆ.
೬ ,, ೧೪ ಹೆಚ್ಚಿನವರು ಇದನ್ನು ಬೆದರುತ್ತಾರೆ.
೨೩ ,, ೩೨ ಜವಾಹರಲಾಲರು ಯುರೋಪಿನ . . . . ವನ್ನು ಮುಗಿಸಿ ಬಂದಿದ್ದಾರೆ.


# SUPPLY AGENCY LIMITED.

## FOR YOUR DEPOSITS

RATES OF INTEREST
FOR FIXED DEPOSITS:

| | | |
|---|---|---|
| 4 to 6 months | ... .... | 4% |
| 7 ,, 11 ,, | .... ... | 5% |
| 12 ,, 18 ,, | ... ... | 6% |

Special Rates for deposits of 2 years & above.

## ANTARANGA DEPOSIT

A deposit of 100 rupees will fetch you the double benefit of 4 per cent interest and free copies of ANTARANGA weekly.

For Special forms of deposits: DEENABANDHUNIDHI, INDUSTRIAL DEPOSIT, "SAVE AS YOU PLEASE" etc, write to the Manager.

**Finance Department**
**SUPPLY AGENCY LIMITED.**
**UDIPI.**


**This page is available for advertisement. Rate Rs. 15. (per insertion.)**

L
O
O
K

SHARP!

**Here!**

*The last day*
*for placing at order*
*for Advertisement in ....*

# Thulunad Tilaka Panchanga

**IS**

## 20th December 1938

*Book Sellers!*

*Place your orders immediatly for the copies of the Almanac .... lest you should be too late. Orders are pouring in ...... so register your order.*

***Apply to:***

*Manager,* ***Thulunad Press, Udipi.***

This Page is available for Advertisement. Rate Rs. 20/- [per insertion.]